ಪುಸ್ತಕ ಪ್ರಪಂಚ

ಜೂನ್ ೧೯೪೯



ಪುಸ್ತಕ ಪ್ರಪಂಚ
ಮಾಸಿಕ


ಸಂಪುಟ ೪೩ ಸಂಚಿಕೆ ೧೧

ಪರಿವಿಡಿ

ಪುಸ್ತಕ ವಿಭಾಗ

ಚಿಂತನಮಾರ್ಗ ಹಿಡಿಸಲಿಲ್ಲ. ರೋಜರ್ ಬೇಕನ್ ಪ್ರತಿಪಾದಿಸಿದ್ದ ಮಾರ್ಗವನ್ನು ಅವನು ಒಪ್ಪಿಕೊಂಡ. ಹೊರೆ ವಾದಕ್ಕಿಂತ ಒಂದು ಪ್ರಯೋಗ ಶ್ರೇಷ್ಠ ಎಂದು ಅವನು ಭಾವಿಸಿದ್ದ.

ಶಿಲಾರಾಳ ಮತ್ತು ಸೂಜಿಗಲ್ಲು ವಿಜ್ಞಾನಿಗಳ ಗಮನವನ್ನು ಸೆರೆಹಿಡಿದಿದ್ದ ಕಾಲ ಅದು. ಸೂಜಿಗಲ್ಲಿನ ಆಕರ್ಷಣೆ ಗುಣ ಪುರಾತನ ಭಾರತೀಯರಿಗೆ ತಿಳಿದಿತ್ತು. ಸೂಜಿಗಲ್ಲನ್ನು ಅವರು ಚುಂಬಕ ಎಂದು ಕರೆಯುತ್ತಿದ್ದರು. ಮಿಲೆಟಸ್ಸಿನ ತೇಲ್ಸನಿಗೂ ಅದರ ಆಕರ್ಷಣ ಗುಣ ತಿಳಿದಿತ್ತೆಂದು ಅರಿಸ್ಟಾಟಲನ ಬರವಣಿಗೆಗಳಿಂದ ಗೊತ್ತಾಗುತ್ತದೆ. ಇಡ ಪರ್ವತದ ಬಳಿ ಅಲೆದಾಡುತ್ತಿದ್ದ ಮ್ಯಾಗ್ನೀಸ್ ಎಂಬ ಕುರುಬನ ಕಬ್ಬಿಣದ ಟೊಪ್ಪಿಗೆಯಿದ್ದ ಕೋಲನ್ನು ಕಿತ್ತರೂ ಬರದಷ್ಟು ಬಲವಾಗಿ ಪರ್ವತ ಆಕರ್ಷಿಸಿತೆಂದೂ, ಅವನ ಜೋಡಿನಲ್ಲಿದ್ದ ಮೊಳೆಗಳು ಆಕರ್ಷಣೆಯಿಂದ ಹೊರಗೆ ಬಂದವೆಂದೂ ಕತೆಹೇಳುತ್ತಿದ್ದ ಕ್ರೀಟನರು ಕಬ್ಬಿಣವನ್ನು ಆಕರ್ಷಿಸುವ ವಸ್ತುವನ್ನು ಮ್ಯಾಗ್ನೆಟ್ (ಕಾಂತ) ಎಂದು ಕರೆದರು. ಏಷ್ಯಮೈನರಿನಲ್ಲಿರುವ ಒಂದು ಪ್ರಾಂತ್ಯ ಮ್ಯಾಗ್ನೀಷಿಯದಲ್ಲಿ ದೊರೆಯುವ ಕಪ್ಪು ಅದುರು ($Fe_3 O_4$) ಕಬ್ಬಿಣವನ್ನು ಆಕರ್ಷಿಸುತ್ತದೆ. ಆದುದರಿಂದ ಮ್ಯಾಗ್ನೆಟ್ ಎಂಬ ಹೆಸರು ಬಂದಿರಬೇಕೆಂಬ ಇನ್ನೊಂದು ಊಹೆಯೂ ಉಂಟು. ಮ್ಯಾಗ್ನೆಟ್ ಎಂಬ ಪದವನ್ನು ಮೊದಲು ಬಳಸಿದವನು ರೋಮಿನ ಲುಕ್ರೂಷಿಯಸ್, ಕ್ರಿ.ಶ ೧೨೧ರ ಸುಮಾರಿಗೆ ಕಾಂತದ ದಿಕ್ಸೂಚಿ ಗುಣ ತಿಳಿದಿತ್ತು. ಆ ದೇಶದ ಪೆನ್ಕೊ ಎಂಬ ಗಣಿತಜ್ಞ ದಿಕ್ಕು ತೋರಿಸಲು ಒಂದು ಕಾಂತ ಸೂಜಿಯನ್ನು ತಯಾರಿಸಿದ್ದ. ಹಡಗುಗಳ ಪ್ರಯಾಣಕ್ಕೆ ನೆರವಾಗುವಂಥ ಉತ್ತರಮುಖಿಯನ್ನು ಮೊದಲು ಬಳಸಿದವರು ಅರಬ್ಬರು.




ದಂಡಕಾಂತ

ಚಿತ್ರ ೧. ಕಾಂತ ಧ್ರುವಗಳು; ಕಬ್ಬಿಣದ ಪುಡಿ ಧ್ರುವಗಳ ಬಳಿ ಹೆಚ್ಚಾಗಿ ಶೇಖರವಾಗುವುದನ್ನು ಕಾಣಬಹುದು.


ಕ್ರಿ. ಶ. ೧೨೬೯ರಲ್ಲಿ ಪೀಟರ್ ಡಿ ಮೆರಿಕೋರ್ಟ್ ಕಾಂತಗಳಲ್ಲಿ ಕಾಂತತೆ ಸಾಮರ್ಥ್ಯ ಹೆಚ್ಚಾಗಿ ಕಾಣಿಸಿಕೊಳ್ಳುವ ಬಿಂದುಗಳನ್ನು ಗುರುತಿಸಿದ. ಅವುಗಳನ್ನು

ಅವನು ಧ್ರುವಗಳೆಂದು ಕರೆದ. ಒಂದೆ ಬಗೆಯ ಧ್ರುವಗಳು ಒಂದನ್ನೊಂದು ವಿಕರ್ಷಿಸುವುದೂ ಭಿನ್ನ ಧ್ರುವಗಳು ಒಂದನ್ನೊಂದು ಆಕರ್ಷಿಸುವುದೂ ಅವನಿಗೆ ತಿಳಿದಿತ್ತು.

ಚಿತ್ರ ೨. ಕಾಂತೀಕರಣ : ಕಾಂತ ಧ್ರುವಗಳ ಆಕರ್ಷಣೆ ವಿಕರ್ಷಣೆ



ಒಂದೆ ಬಗೆಯ ಕಾಂತ ಧ್ರುವಗಳ ಪರಸ್ಪರ ವಿಕರ್ಷಣೆ




ಭಿನ್ನ ಧ್ರುವಗಳ ಪರಸ್ಪರ ಆಕರ್ಷಣೆ

ಕಾಂತಗಳು ಅವುಗಳ ಸಾಮರ್ಥ್ಯವನ್ನು ಆಕಾಶದಿಂದ ಪಡೆಯುತ್ತವೆ ಎಂದು ಅವನು ನಂಬಿದ್ದ. ಕಾಂತಗಳ ಬಗ್ಗೆ ವ್ಯಾಪಕವಾದ ಸಂಶೋಧನೆಗಳನ್ನು ನಡೆಸಿದವನು ಗಿಲ್ಬರ್ಟ್. ಸೂಜಿಗಲ್ಲಿನಿಂದ ಉಜ್ಜಿ ಕಬ್ಬಿಣದ ತುಂಡುಗಳನ್ನು ಕಾಂತೀಕರಿಸಬಹುದೆಂಬುದನ್ನು ಅವನು ತೋರಿಸಿದ. ಇಷ್ಟೆ ಅಲ್ಲದೆ ಕಬ್ಬಿಣದ ದಂಡವನ್ನು ದಕ್ಷಿಣ–ಉತ್ತರ ದಿಕ್ಕಿನಲ್ಲಿ ಸಾಕಷ್ಟು ಕಾಲ ನೇತುಹಾಕಿದರೆ ಅದು ಕಾಂತತೆಯನ್ನು ಪಡೆಯುವ ವಿಚಾರವನ್ನೂ ಅದೇ ದಿಕ್ಕಿನಲ್ಲಿ ಅದು ಇರುವಾಗ ಸುತ್ತಿಗೆಯಿಂದ ಬಡಿದರೆ ಅಥವಾ ಕಾಯಿಸಿದರೆ ಅದರ ಕಾಂತತೆ ಹೆಚ್ಚುತ್ತದೆಂಬುದನ್ನೂ ಅವನು ತೋರಿಸಿದ. ಸ್ವಾಭಾವಿಕ ಕಾಂತಗಳಿಗೆ ಕಬ್ಬಿಣದ ಟೋಪಿ ತೊಡಿಸಿ ಅವುಗಳ ಸಾಮರ್ಥ್ಯವನ್ನು ಹೆಚ್ಚಿಸಬಹುದೆಂದು ಅವನು ಪ್ರತ್ಯಕ್ಷವಾಗಿ ತೋರಿಸಿದ.

ಕಾಂತಗಳು ದಂಡಾಕೃತಿಯಲ್ಲೆ ಇರಬೇಕಾದುದಿಲ್ಲ; ಅವು ಬೇರೆ ಬೇರೆ ಆಕಾರದಲ್ಲೂ ಇರಬಹುದು. ಗಿಲ್ಬರ್ಟ್ ಒಂದು ಕಬ್ಬಿಣದ ಗೋಳವನ್ನು ಸೂಜಿಗಲ್ಲಿನಿಂದ ಉಜ್ಜಿ ಕಾಂತೀಕರಿಸಿದ. ಅದರ ಸಮೀಪಕ್ಕೆ ಸಲೀಸಾಗಿ ತಿರುಗುವ ಒಂದು ಕಾಂತ ಸೂಜಿಯನ್ನು ಅವನು ತಂದಾಗ ಅದು ಭೂಮಿಯಮೇಲೆ ಉತ್ತರಮುಖಿ ವರ್ತಿಸುವಂತೆ ವರ್ತಿಸಿತು. ಇದನ್ನು ಕಂಡು ಅವನು ಚಕಿತನಾದ. ಭೂಮಿಯೂ ಒಂದು ಕಾಂತವಾಗಿರಬಹುದೆ ಎಂದು ಅವನು ಶಂಕಿಸಿದ. ಕಾಂತಸೂಜಿಯನ್ನು ಗೋಳಕಾಂತದ ಸಮೀಪ ಬೇರೆ ಬೇರೆ ಸ್ಥಳಗಳಲ್ಲಿಟ್ಟು ಈ ವಿಚಾರವನ್ನು ಅವನು ಗಟ್ಟಿಮಾಡಿಕೊಂಡ. ಹಿಂದಿನ ಕಾಲದವರು ಉತ್ತರಮುಖಿ ಉತ್ತರದ ಕಡೆಗೆ ಮುಖಮಾಡಿ ನಿಲ್ಲಲು ಉತ್ತರ ಪ್ರದೇಶದಲ್ಲಿರುವ ಕಾಂತಪರ್ವತಗಳೊ ಅಥವಾ ಸಪ್ತಋಷಿ ಮಂಡಲದ ಬಾಲದಲ್ಲಿರುವ ಒಂದು ನಕ್ಷತ್ರವೊ ಕಾರಣ ಎಂದು ನಂಬಿದ್ದರು. ಉತ್ತರಮುಖಿಯನ್ನು ಭೂಮಧ್ಯರೇಖೆಯ ಕಡೆಯಿಂದ ಉತ್ತರದ ಕಡೆಗೆ ತೆಗೆದುಕೊಂಡು ಹೋದರೆ ಆಕಡೆ ನೋಡುವ

ಧ್ರುವ (ಇದನ್ನು ಉತ್ತರ ಧ್ರುವ ಎಂದು ಕರೆಯುವುದು ರೂಢಿ; ಇನ್ನೊಂದು ದಕ್ಷಿಣ ಧ್ರುವ) ಹೆಚ್ಚು ಹೆಚ್ಚು ಸಮತಲದಿಂದ ಕೆಳಗೆ ಬಗ್ಗುತ್ತದೆ. ಉತ್ತರದ ಕಾಂತ ಪರ್ವತಗಳೊ ಅಥವಾ ಸಪ್ತಋಷಿ ಮಂಡಲದ ನಕ್ಷತ್ರವೊ ಉತ್ತರಮುಖಿಯನ್ನು ಆಕರ್ಷಿಸುವುದಿದ್ದರೆ ಅದು ಮೇಲೆ ಮೇಲೆ ನೋಡಬೇಕಾಗಿತ್ತು. ಇದನ್ನು ಗಮನಿಸಿದ ಗಿಲ್ಬರ್ಟ್ ಹಿಂದಿನವರ ಅಭಿಪ್ರಾಯಗಳು ತಪ್ಪು ಎಂದು ಶ್ರುತಪಡಿಸಿದ, ಈ ಎಲ್ಲ ವಿಚಾರಗಳನ್ನು ಅವನು ತನ್ನ ಮಹತ್ವದ ಕೃತಿ 'ಕಾಂತಗಳು ಮತ್ತು ಕಾಂತೀಕೃತ ಕಾಯಗಳು ಮತ್ತು ಬೃಹತ್ಕಾಂತ ಭೂಮಿ'ಯಲ್ಲಿ ವಿವರಿಸಿದ. ಇದು ಅವನು ರಾಯಲ್ ವೈದ್ಯರ ಕಾಲೇಜಿನ ಅಧ್ಯಕ್ಷನಾಗಿ ಚುನಾಯಿತನಾದ ವರ್ಷವೆ ಪ್ರಕಟವಾಯಿತು. ಇಂಗ್ಲೆಂಡಿನಲ್ಲಿ ಪ್ರಕಟವಾದ ಪ್ರಥಮ ಶ್ರೇಷ್ಠ ಭೌತ ವಿಜ್ಞಾನ ಗ್ರಂಥ ಇದು. ಪ್ರಯೋಗಗಳಿಂದ ಆವಿಷ್ಕಾರ ಎಂಬ ವಿಜ್ಞಾನ ಮಾರ್ಗಕ್ಕೆ ಬದ್ಧವಾಗಿ ಅದು ಸಿದ್ಧವಾಗಿತ್ತು.



ಚಿತ್ರ ೩. ಕಾಂತೀಕೃತ ಕಬ್ಬಿಣದ ಗೋಳ

ಕೆಂಪಗೆ ಕಾಯಿಸಿ ಕೇಸರಿ ಎಣ್ಣೆಯಲ್ಲಿ ಅದ್ದುವುದರಿಂದ ಕಾಂತದ ಸಾಮರ್ಥ್ಯ ಹತ್ತುಪಟ್ಟು ಹೆಚ್ಚುವುದೆಂದು ಪಾರ್ಸೆಲ್ಸಸ್ ತಿಳಿಸಿದ್ದ. ಹೀಗೆ ಮಾಡಿದರೆ ನಿಜವಾಗಿ ಕಾಂತದ ಸಾಮರ್ಥ್ಯ ತಗ್ಗುತ್ತದೆಂಬುದನ್ನು ಗಿಲ್ಬರ್ಟ್ ತೋರಿಸಿದ. ಇಂಥ ಇನ್ನೊಂದು ತಪ್ಪು ತಿಳಿವಳಿಕೆಯೂ ಜನರಲ್ಲಿತ್ತು. ಇದು ಕಾಂತಗಳಿಗೆ ಕಬ್ಬಿಣದ ಪುಡಿಯ ಮೇವು ಕೊಟ್ಟರೆ ಅವುಗಳ ಸಾಮರ್ಥ್ಯ ಹೆಚ್ಚುತ್ತದೆಂಬುದು. ಕಾಂತವೊಂದನ್ನು ಕಬ್ಬಿಣದ ಪುಡಿಯಲ್ಲಿ ಮುಚ್ಚಿ ಅದನ್ನು ಹಾಗೆಯೆ ಸ್ವಲ್ಪಕಾಲ ಬಿಟ್ಟಿದ್ದು, ಅನಂತರ ಹೊರತೆಗೆದು ಅವನು ಅದರ ತೂಕದಲ್ಲಿ ಯಾವ ವ್ಯತ್ಯಾಸವೂ ಆಗದೆ ಇರುವುದನ್ನು ಪ್ರದರ್ಶಿಸಿದ. ತೂಕದಲ್ಲಿ ತುಸು ಹೆಚ್ಚಳ ಕಂಡಾಗ ಅವನು ಅದು ಕಬ್ಬಿಣದ ಪುಡಿಯ ತುಣುಕುಗಳು ಕಾಂತಕ್ಕೆ ಅಂಟಿಕೊಂಡಿರುವುದು ಕಾರಣ ಎಂದು ತಿಳಿಸಿದ. ಕಾಂತಗಳಿಗೆ ಅವುಗಳ ಸಾಮರ್ಥ್ಯವನ್ನು ಕಾಪಾಡಿಕೊಳ್ಳಲು ಯಾವುದೆ ಬಗೆಯ ಹೊರಗಿನ ಪೋಷಣೆ ಬೇಕಿಲ್ಲವೆಂಬುದು ಇದರಿಂದ ವ್ಯಕ್ತವಾಯಿತು.

ಒಂದು ಕಾಂತ ಸೂಜಿಯನ್ನು ಸಮತಲದಲ್ಲಿ ಸರಾಗವಾಗಿ ತಿರುಗಲು ಅನುಕೂಲವಾಗುವಂತೆ ಅಳವಡಿಸಿದರೆ ಅದು ದಕ್ಷಿಣ–ಉತ್ತರವಾಗಿ ನಿಲ್ಲದೆ ಆ ದಿಕ್ಕಿಗೆ ಸ್ವಲ್ಪವಾಲಿಕೊಂಡು ನಿಲ್ಲುತ್ತದೆ. ದಕ್ಷಿಣ–ಉತ್ತರ ದಿಕ್ಕಿಗೂ ಹೀಗೆ ನಿಂತ ಕಾಂತಸೂಜಿಯ ಅಕ್ಷಕ್ಕೂ ನಡುವೆ ಇರುವ ಕೋನಕ್ಕೆ ದಿಕ್ಚ್ಯುತಿ ಎಂದು ಹೆಸರು. ಕಾಂತಸೂಜಿ ಲಂಬತಲದಲ್ಲಿ ಸರಾಗವಾಗಿ ತಿರುಗಲು ಅನುಕೂಲವಾಗುವಂತೆ ಅಳವಡಿಸಿದರೆ ಅದು ಸಮತಲದಲ್ಲಿ ಅಕ್ಷ ಇರುವಂತೆ ನಿಲ್ಲದೆ ಸ್ವಲ್ಪ ಕೆಳಗೆ ಬಾಗಿ ನಿಲ್ಲುತ್ತದೆ. ಸಮತಲದೊಂದಿಗೆ ಕಾಂತಸೂಜಿಯ ಅಕ್ಷ ಏರ್ಪಡಿಸುವ ಕೋನಕ್ಕೆ ಕಾಂತಾವನತಿ ಎಂದು ಹೆಸರು. ಒಂದು ಸ್ಥಳದಲ್ಲಿ ದಿಕ್ಚ್ಯುತಿ ಮತ್ತು ಕಾಂತಾವನತಿ ನಿಯತ ಬೆಲೆಗಳನ್ನು ಹೊಂದಿರುವುದಿಲ್ಲ. ಗಿಲ್ಬರ್ಟ್ ಇವು ಒಂದು ಜಾಗದಲ್ಲಿ ಬದಲಾಗದ ಬೆಲೆಗಳನ್ನು ಹೊಂದಿರುತ್ತವೆ ಎಂದು ನಂಬಿದ್ದ. ಇದೂ ಅಲ್ಲದೆ ದಿಕ್ಸೂಜಿ ನಿಜವಾದ ದಕ್ಷಿಣ–ಉತ್ತರ ದಿಕ್ಕಿನಲ್ಲಿ ನಿಲ್ಲದೆ ಇರುವುದಕ್ಕೆ ನೆಲ ಮತ್ತು ಸಮುದ್ರಗಳ ಅನಿಸುತ ಹಂಚಿಕೆ ಕಾರಣವೆಂದು ಅವನು ಹೇಳುತ್ತಿದ್ದ. ಬೆಟ್ಟಗಳು ಕಾಂತಗಳನ್ನು ಆಕರ್ಷಿಸುತ್ತವೆಂದೂ ಅವನು ನಂಬಿದ್ದ.


ಮಿಲೆಟಸಿನ ತೇಲ್ಸನಿಗೆ ಶಿಲಾರಾಳವನ್ನು ಉಜ್ಜಿದರೆ ಅದು ಧೂಳು, ಬೆಂಡಿನ ಚೂರುಗಳು ಮತ್ತು ಹೊಟ್ಟನ್ನು ಆಕರ್ಷಿಸುತ್ತದೆಂಬ ವಿಚಾರ ತಿಳಿದಿತ್ತು. ಕಾರ್ತೇಜಿನ ನಾವಿಕರು ತಮ್ಮ ಊದಾ ಬಣ್ಣದ ಬಟ್ಟೆಗಳನ್ನು ತವರಕ್ಕೆ ವಿನಿಮಯ ಮಾಡಿಕೊಳ್ಳಲು ಸ್ಪೇಯ್ನ್, ಫ್ರಾನ್ಸ್ ಮತ್ತು ಇಂಗ್ಲೆಂಡಿಗೆ ಹೋಗುತ್ತಿದ್ದರು. ಒಂದೊಂದು ಸಾರಿ ಅವರು ವಿನಿಮಯವಾಗಿ ಶಿಲಾರಾಳವನ್ನೂ ಪಡೆಯುತ್ತಿದ್ದರು. ಚಿನ್ನದ ಬಣ್ಣವನ್ನು ಹೊಂದಿದ್ದುದರಿಂದ ಕಾರ್ತೇಜಿನ ಜನರು ಅದರ ಚೂರುಗಳನ್ನು ಆಭರಣಗಳಲ್ಲಿ ಉಪಯೋಗಿಸುತ್ತಿದ್ದರು. ಸೂಜಿಗಲ್ಲು ಮತ್ತು ಶಿಲಾರಾಳ ಆಕರ್ಷಿಸುವ ಗುಣವನ್ನು ಹೊಂದಿದ್ದುದರಿಂದ ಹಿಂದಿನವರು ಅವುಗಳು ತೋರಿಸುವ ಪ್ರಕ್ರಿಯೆಗಳು ಒಂದೆ ಬಗೆಯವು ಎಂದು ನಂಬಿದ್ದರು. ಶಿಲಾರಾಳ ಆಕರ್ಷಿಸುವ ಗುಣವನ್ನು ಪಡೆಯಲು ಅದನ್ನು ಉಜ್ಜಬೇಕು. ಸೂಜಿಗಲ್ಲು ಸ್ವಾಭಾವಿಕವಾಗಿಯೆ ಅಂಥ ಗುಣವನ್ನು ಪಡೆದಿದೆ. ಇದೂ ಅಲ್ಲದೆ ಶಿಲಾರಾಳ ಧೂಳು, ಹುಲ್ಲಿನ ತುಣಕು ಇಂಥ ಹಗುರವಾದ ವಸ್ತುಗಳನ್ನು ಆಕರ್ಷಿಸುತ್ತದೆ. ಸೂಜಿಗಲ್ಲು ಭಾರವಾದ ಕಬ್ಬಿಣದ ಚೂರುಗಳನ್ನು ಆಕರ್ಷಿಸುತ್ತದೆ. ಆದುದರಿಂದ ಇವು ತೋರುವ ಗುಣ ಒಂದೆ ಅಲ್ಲ ಎಂದು ಗಿಲ್ಬರ್ಟ್ ತರ್ಕಿಸಿದ. ಅವನು ಶಿಲಾರಾಳ ತೋರಿಸುವ ಸಾಮರ್ಥ್ಯಕ್ಕೆ ವಿದ್ಯುತ್ ಸಾಮರ್ಥ್ಯವೆಂದೂ, ಸೂಜಿಗಲ್ಲು ತೋರಿಸುವ ಸಾಮರ್ಥ್ಯಕ್ಕೆ ಕಾಂತ ಸಾಮರ್ಥ್ಯವೆಂದೂ ಹೆಸರಿಟ್ಟ. ಗ್ರೀಕ್ ಭಾಷೆಯಲ್ಲಿ ಶಿಲಾರಾಳಕ್ಕೆ ಎಲೆಕ್ಟ್ರಾನ್ ಎಂದು ಹೆಸರು. ಆದುದರಿಂದ ಗಿಲ್ಬರ್ಟ್ ಉಜ್ಜಿದಾಗ ಶಿಲಾರಾಳ ಪಡೆಯುವ ವಸ್ತುವಿಗೆ ಎಲೆಕ್ಟ್ರಿಸಿಟಿ (ವಿದ್ಯುತ್) ಎಂದು ಹೆಸರಿಟ್ಟ.

ಶಿಲಾರಾಳವಲ್ಲದೆ ಗಾಜು, ಅರಗು, ಗಂಧಕ ಕೂಡ ಹತ್ತಿ ಅಥವ ರೇಷ್ಮೆ ಬಟ್ಟೆಯಿಂದಲೊ ಅಥವ ತುಪ್ಪಳ ಚರ್ಮದಿಂದಲೊ ಉಜ್ಜಿದರೆ ವಿದ್ಯುದೀಕರಣಗೊಳ್ಳುತ್ತವೆ. ರೇಷ್ಮೆ ಬಟ್ಟೆಯಿಂದ ಉಜ್ಜಿದ ಗಾಜು ಪಡೆಯುವ ವಿದ್ಯುದಂಶಕ್ಕೆ ಧನವಿದ್ಯುದಂಶವೆಂದು ಹೆಸರು. ತುಪ್ಪಳ ಚರ್ಮದಿಂದ ಉಜ್ಜಿದ ಗಂಧಕ ಪಡೆಯುವ ವಿದ್ಯುದಂಶಕ್ಕೆ ಋಣ ವಿದ್ಯುದಂಶವೆಂದು ಹೆಸರು. ಒಂದೆ ಬಗೆಯ ವಿದ್ಯುದಂಶಗಳು ಒಂದನ್ನೊಂದು ವಿಕರ್ಷಿಸು

ತ್ತವೆ. ಬೇರೆ ಬೇರೆ ಬಗೆಯ ವಿದ್ಯುದಂಶಗಳು ಒಂದನ್ನೊಂದು ಆಕರ್ಷಿಸುತ್ತವೆ. ಎಲ್ಲ ವಸ್ತುಗಳಲ್ಲೂ ಸಾಮಾನ್ಯವಾಗಿ ಧನ ಮತ್ತು ಋಣ ವಿದ್ಯುದಂಶಗಳು ಸಮಸಮವಾಗಿರುತ್ತವೆ.

ಕಾಂತಕ್ಕೂ ವಿದ್ಯುತ್ತಿಗೂ ಇರುವ ಸಂಬಂಧ ಒಂದು ಆಕಸ್ಮಿಕ ಘಟನೆಯಿಂದ ಪ್ರಕಟವಾಯಿತು. ೧೬೮೧ರಲ್ಲಿ ಬೋಸ್ಟನ್ನಿಗೆ ಹೊರಟಿದ್ದ ಒಂದು ಹಡಗಿಗೆ ಮಿಂಚು ಬಡಿಯಿತು. ಅನಂತರ ಉತ್ತರಮುಖಿ ದಿಕ್ಕು ಬದಲಾಯಿಸಿದ್ದನ್ನು ನಾವಿಕರು ನೋಡಿದರು. ಮಿಂಚು ವಿದ್ಯುತ್ಪ್ರವಾಹ. ಪ್ರವಾಹಿ ವಿದ್ಯುತ್ತು ಕಾಂತಸೂಜಿಯ ಮೇಲೆ ಪ್ರಭಾವ ಬೀರಿ ಅದರ ದಿಕ್ಕನ್ನು ಬದಲಾಯಿಸಿತ್ತು. ಈ ಪ್ರಭಾವದ ಆವಿಷ್ಕಾರ ಪ್ರಯೋಗಶಾಲೆಯಲ್ಲಿ ನಡೆದದ್ದು ಇದು ಸಂಭವಿಸಿದ ಬಹಳ ಕಾಲದ ಅನಂತರ.

ಧನ ವಿದ್ಯುದಂಶವನ್ನೂ ಋಣ ವಿದ್ಯುದಂಶವನ್ನೂ ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಬಹುದು. ಉಜ್ಜುವುದರಿಂದ ಸ್ವಲ್ಪ ಋಣ ವಿದ್ಯುದಂಶ ಹೊರಗೆ ಬರುತ್ತದೆ. ಆಗ ವಸ್ತು ಸ್ವಲ್ಪ ಹೆಚ್ಚುವರಿ ಧನ ವಿದ್ಯುದಂಶವನ್ನು ಪಡೆಯುತ್ತದೆ. ಉಜ್ಜಲು ಉಪಯೋಗಿಸುವ ವಸ್ತುವನ್ನು ಬದಲಾಯಿಸಿ ಒಂದು ವಸ್ತುವಿನಲ್ಲಿ ಸ್ವಲ್ಪ ಹೆಚ್ಚುವರಿ ಋಣ ವಿದ್ಯುದಂಶವಿರುವಂತೆಯೂ ಮಾಡಬಹುದು. ಕಾಂತ ಧ್ರುವಗಳ ವಿಚಾರ ಇಷ್ಟು ಸರಳವಾಗಿಲ್ಲ. ಒಂದು ಉತ್ತರ ಧ್ರುವವನ್ನಾಗಲಿ, ಒಂದು ದಕ್ಷಿಣ ಧ್ರುವವನ್ನಾಗಲಿ ಬೇರೆ ಬೇರೆಯಾಗಿ ಪ್ರತ್ಯೇಕಿಸಲು ಆಗುವುದಿಲ್ಲ. ಕಾಂತದ ಈ ಧ್ರುವಗಳು ಯಾವಾಗಲೂ ಒಟ್ಟಿಗೆ ಇರುತ್ತವೆ. ಒಂದು ದಂಡ ಕಾಂತವನ್ನು ಎರಡು ತುಂಡು ಮಾಡಿದರೆ ಒಂದೊಂದು ತುಂಡೂ ಒಂದೊಂದು ದಂಡಕಾಂತದಂತೆ ವರ್ತಿಸುತ್ತದೆ. ತುಂಡುಗಳನ್ನು ಮತ್ತೆಮತ್ತೆ ತುಂಡುಮಾಡುತ್ತ ಹೋದರೆ ಅಂತಿಮವಾಗಿ ಅವಿಭಾಜ್ಯವಾದ ಒಂದು ಕಾಂತ ಘಟಕ ಸಿಕ್ಕುತ್ತದೆ. ಇದು ಒಂದು ಮೂಲ ಕಾಂತ ದ್ವಿಧ್ರುವ. ಅಂದರೆ ಇಂಥ ಕಾಂತ ದ್ವಿಧ್ರುವಗಳು ದಂಡ ಕಾಂತದಲ್ಲಿ ಕ್ರಮವಾಗಿ ಜೋಡಣೆಯಾಗಿವೆ ಎಂದ ಹಾಗಾಯಿತು.



ಚಿತ್ರ ೪. ದಂಡಕಾಂತದಲ್ಲಿ ದ್ವಿಧ್ರುವಗಳ ಜೋಡಣೆ

೧೭೨೯ರಲ್ಲಿ ಸ್ಟೀಫನ್‌ಗ್ರೆ ಎಂಬ ಪಿಂಚಣಿದಾರ ಲೋಹದ ತಂತಿಗಳು ವಿದ್ಯುತ್ತನ್ನು ಸಾಗಿಸುತ್ತವೆಂಬ ವಿಚಾರವನ್ನು ಕಂಡುಹಿಡಿದ. ಒಬ್ಬ ಮನುಷ್ಯ ಒಂದು ಕೈಯ್ಯಲ್ಲಿ ತಂತಿಯ ಒಂದು ತುದಿಯನ್ನು ಹಿಡಿದುಕೊಂಡು ಇನ್ನೊಂದು ಕೈಯ್ಯನ್ನು ವಿದ್ಯುದೀಕರಣಗೊಂಡ ವಸ್ತುವಿನ ಬಳಿಗೆ ತಂದರೆ ತಂತಿಯ ಇನ್ನೊಂದು ತುದಿಯಲ್ಲಿ ವಿದ್ಯುತ್ತು ಕಾಣಿಸಿಕೊಳ್ಳುತ್ತದೆ. ಇಂಥ ಅನೇಕ ಪ್ರಯೋಗಗಳನ್ನು ನಡೆಸಿ ಗ್ರೆ ವಸ್ತುಗಳನ್ನು ವಾಹಕಗಳು ಮತ್ತು ಅವಾಹಕಗಳು ಎಂದು ಎರಡು ಗುಂಪುಗಳಾಗಿ ವಿಂಗಡಿಸಬಹುದು ಎಂಬ

ತೀರ್ಮಾನಕ್ಕೆ ಬಂದ. ಒಂದೊಂದು ಹೊಸ ವಿಷಯ ತಿಳಿಯುವುದಕ್ಕೂ ಮಧ್ಯೆ ಎಷ್ಟೋ ಕಾಲ ಕಳೆದಿರುತ್ತದೆ ಎಂಬ ವಿಚಾರ ಇದರಿಂದ ಸ್ಪಷ್ಟ.

ವಿಜ್ಞಾನದಲ್ಲಿ ಶಾಶ್ವತ ಸತ್ಯವೆಂಬುದಿಲ್ಲ ಎಂದು ಗಿಲ್ಬರ್ಟ್ ನಂಬಿದ್ದ. ಪ್ರಯೋಗಗಳನ್ನು ಅರ್ಥೈಸದ ಸಿದ್ಧಾಂತಗಳನ್ನು ತಿರಸ್ಕರಿಸಬೇಕೆಂದು ಅವನು ಹೇಳುತ್ತಿದ್ದ. ಕೋಪರ್ನಿಕಸನ ಸಿದ್ಧಾಂತವನ್ನು ಇಂಗ್ಲೆಂಡಿನಲ್ಲಿ ಪ್ರಚಾರಮಾಡುವಲ್ಲಿ ಅವನು ಉತ್ಸಾಹ ತಾಳಿದ. ಸ್ಥಿರ ನಕ್ಷತ್ರಗಳೆಲ್ಲಾ ಭೂಮಿಯಿಂದ ಒಂದೆ ದೂರದಲ್ಲಿಲ್ಲ ಎಂದು ಅವನು ತಿಳಿಸಿದ. ವಿಜ್ಞಾನ ಮಾರ್ಗದಿಂದ ಪ್ರಕೃತಿ ರಹಸ್ಯಗಳನ್ನು ಭೇದಿಸಿ ಜನಜೀವನವನ್ನು ಉತ್ತಮ ಪಡಿಸಬೇಕೆಂದು ಅವನು ಸಾರಿದ. ೩೦–೧೧–೧೬೦೩ರಂದು ನಿಧನನಾಗುವ ವರೆಗೆ ಅವನು ಪ್ರಯೋಗಗಳನ್ನು ಮಾಡುತ್ತಲೇ ಇದ್ದ.

ಚಿತ್ರ : ಎ. ಅಕ್ಷಯ

ಭಾರತದಲ್ಲಿ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕು. ಈ ಗುರಿಯನ್ನು ಸಾಧಿಸಲು ಮಕ್ಕಳು ಮನಸ್ಸು, ಶರೀರ ಮತ್ತು ಆತ್ಮಶಕ್ತಿಗಳನ್ನು ಬೆಳಸಿಕೊಳ್ಳಲು ಸಾಧ್ಯವಾಗುವ ಉಪಯುಕ್ತ ಉದ್ಯೋಗವನ್ನು ಅವರಿಗೆ ಕಲಿಸಬೇಕು.

ಗಾಂಧೀಜಿ

ಭೂಜಲ ಸಮಸ್ಯೆಗಳು-೩

ಡಾ. ಹೆಚ್. ಎಸ್. ನಾಗಭೂಷಣಯ್ಯ

೩.೧ ವರ್ಷಾಧ್ಯಂತ ಒಂದು ಪ್ರಾಂತ್ಯದ ಭೂಜಲದ ಆಯವ್ಯಯ ವಿತರಣೆ

ಭೂಜಲದ ಮೂಲ ಮಳೆನೀರು. ಇದರ ಜೊತೆಗೆ ನದಿ, ನೀರಾವರಿ ಪ್ರವೇಶಗಳಿಂದಲೂ ಭೂಮಿಯಲ್ಲಿ ತಂಗಿದ ನೀರು ಭೂಜಲವನ್ನು ವೃದ್ಧಿಪಡಿಸುವುದು. ಈ ರೀತಿಯ ವೃದ್ಧಿಗೆ ಹೊಂದಿಕೊಂಡಂತೆ ಭೂಜಲದ ವ್ಯಯವೂ ಏರ್ಪಟ್ಟಿರುವುದು. ಭೂಜಲ ತನ್ನ ಚಲನೆಯ ಮಾರ್ಗದಲ್ಲಿ ಪಂಪುಬಾವಿ, ನದಿ, ಸರೋವರಗಳನ್ನು ಸಂಧಿಸಿದಾಗ ಅಲ್ಲಿ ನಿರ್ಗಮಗೊಂಡು ವ್ಯಯಗೊಳ್ಳಬಹುದು. ಅಂತಿಮವಾಗಿ ಭೂಜಲ ಸಮುದ್ರಕ್ಕೂ ಭಾಗಶಃ ಭೂಗರ್ಭಕ್ಕೂ ಸೇರಬಹುದು.

ಒಂದು ಪ್ರಾಂತ್ಯದಲ್ಲಿ ಸಂಗ್ರಹವಾಗಿರುವ ಭೂಜಲ ಪ್ರಮಾಣವನ್ನು ತಿಳಿಯಲು ಅಲ್ಲಿ ಏರ್ಪಟ್ಟ ಭೂಜಲದ ಆಯವ್ಯಯ ಪಟ್ಟಿಯನ್ನು ತಯಾರಿಸಬೇಕಾಗುವುದು. ಈ ಕಾರ್ಯಕ್ಕೆ ನಂಬಲು ಅರ್ಹವಾದ ಮೂಲಗಳಿಂದ ಸಂಬಂಧಪಟ್ಟ ಅಂಕಿ ಅಂಶಗಳನ್ನು ಪಡೆಯುವುದು ಅವಶ್ಯಕ. ಈ ಕೆಳಗಿನ ಸಮೀಕರಣ ಒಂದು ಪ್ರಾಂತ್ಯದ ಭೂಜಲ ಆಯವ್ಯಯ ಮತ್ತು ಸಂಗ್ರಹಿತ ಪ್ರಮಾಣವನ್ನು ಸ್ಪಷ್ಟೀಕರಿಸುತ್ತದೆ.

$$\triangle S_o = (R_p + R_n + R_a + G_i) - (E_t + D_a + G_e + G_o)$$

{ಪ್ರಾಂತ್ಯದ ಭೂಜಲ ಶೇಖರಣೆಯಲ್ಲಿ ಆಗುವ ಬದಲಾವಣೆ} = {ಆ ಪ್ರಾಂತ್ಯಕ್ಕೆ ಆಗಮಿಸುವ ಭೂಜಲ}

— {ಆ ಪ್ರಾಂತ್ಯದಿಂದ ನಿರ್ಗಮಿಸುವ ಭೂಜಲದ ಪ್ರಮಾಣ}

ಆಗಮನ

R_p — ಮಳೆ ನೀರಿನ ಆಗಮನ,

R_n — ನದಿ, ಸರೋವರಗಳಿಂದ ಇಂಗಿದ ನೀರಿನಿಂದ ಭೂಜಲ ವೃದ್ಧಿ

R_a — ಕಾಲುವೆ, ನೀರಾವರಿ ಮುಂತಾದ ಕೃತಕ ಮೂಲಗಳಿಂದ ಆಗಮಿಸುವ ಜಲ,

G_i — ಹೊರಗಿನ ಪ್ರಾಂತ್ಯದಿಂದ ಹರಿದು ಬರುವ ಭೂಜಲ.

ನಿರ್ಗಮನ

E_t — ಲೋಮನಾಳಗಳ ಮೂಲಕ ಭೂಜಲ ಹೊರಬಂದು ಆವಿಯಾಗಬಲ್ಲ ನೀರಿನ ಅಂಶ,

D_a — ಭಾವಿಗಳಿಂದ ನಿರ್ಗಮಿಸುವ ಭೂಜಲ,

G_e — ಆಳವಾದ ಭೂಗರ್ಭದ ಕಡೆ ನಿರ್ಗಮಿಸುವ ಜಲ,

G_o — ಪ್ರಾಂತ್ಯದ ಗಡಿಯಿಂದ ಹೊರಕ್ಕೆ ಹರಿದು ಹೋಗುವ ಭೂಜಲ.

೩.೨ ಭೂಜಲ ಸಿಹಿ ಮತ್ತು ಉಪ್ಪು ನೀರುಗಳಾಗಿ ಮಾರ್ಪಾಡಾಗುವ ಬಗೆ.

ಭೂಜಲ ಭೂಮಿಯಲ್ಲಿ ಚಲಿಸುತ್ತಿರುವಾಗ ಮಣ್ಣಿನಲ್ಲಿ ಬೆರೆತಿರುವ ಲವಣ, ಕ್ಷಾರ ಹಾಗೂ ಖನಿಜ ಅಂಶಗಳನ್ನು ಕರಗಿಸಿಕೊಂಡು ತನ್ನ ಗುಣ ಲಕ್ಷಣಗಳಲ್ಲಿ ಬದಲಾವಣೆ ತಂದುಕೊಳ್ಳುವುದು. ಈ ಅಂಶಗಳು ಭೂಜಲದಲ್ಲಿ ಒಂದು ನಿಶ್ಚಿತ ಮಿತಿಯನ್ನು ದಾಟಿದ್ದೇ ಆದರೆ ಆಗ ಅದು ಗೃಹಕೃತ್ಯಕ್ಕಾಗಲಿ, ವ್ಯವಸಾಯಕ್ಕಾಗಲೀ ಅಥವಾ ಕೈಗಾರಿಕೋದ್ಯಮಗಳಿಗಾಗಲೀ ಉಪಯೋಗಿಸಲು ಯೋಗ್ಯವಾಗಿರುವುದಿಲ್ಲ.

ಕರಗಿರುವ ಪ್ರಮಾಣದ ಮೇಲೆ ಭೂಜಲದ ಉಪ್ಪಿನ ಮಟ್ಟವನ್ನು ಗೊತ್ತುಪಡಿಸಲಾದ ಪಟ್ಟಿ


ವಿಂಗಡಣೆ	ಕರಗುವ ಲವಣದ ಅಂಶ
ಸಿಹಿನೀರು	— ೧೦೦೦ ಮಿ.ಗ್ರಾಂ ೧ ಲೀಟರ್ ನೀರಿನಲ್ಲಿ
ಸಾಧಾರಣ ಉಪ್ಪುನೀರು	— ೩೦೦೦ ರಿಂದ ೬೦೦೦ ಮಿ.ಗ್ರಾಂ ೧ ಲೀಟರ್ ನೀರಿನಲ್ಲಿ
ಅತಿ ಉಪ್ಪುನೀರು	— ೧೦,೦೦೦ ರಿಂದ ೩೫,೦೦೦ ಮಿ.ಗ್ರಾಂ : ಲೀಟರ್ ನೀರಿನಲ್ಲಿ
ಸಮುದ್ರದಷ್ಟು ಉಪ್ಪುನೀರು	— ೩೫,೦೦೦ ಮಿ.ಗ್ರಾಂ ಗಿಂತ ಹೆಚ್ಚು ೧ ಲೀಟರ್ ನೀರಿನಲ್ಲಿ

ಆರೋಗ್ಯದ ದೃಷ್ಟಿಯಿಂದ ಭೂಜಲದಲ್ಲಿ ಕರಗಿರಬಹುದಾದ ಖನಿಜ: ಲವಣ ಅಂಶದ ಮಿತಿ

ಖನಿಜ : ಲವಣ	ಅಂಗೀಕೃತವಾದ ವಿಲೀನದ ಮಿತಿ (10^6 ರಲ್ಲಿ)	ಅಪಾಯ ಮಿತಿ (10^6 ರಲ್ಲಿ)
ವಿಲೀನವಾದ ಘನ ಪದಾರ್ಥಗಳು	೫೦೦	೧೦೦೦
ಕಬ್ಬಿಣ	೦.೩	೧.೦
ಮ್ಯಾಂಗನೀಸ್	೦.೧	೦.೫
ತಾಮ್ರ	೧.೦	೧.೫
ಸಲ್ಫೇಟ್	೨೦೦	೪೦೦
ಕ್ಲೋರೈಡ್	೨೦೦	೬೦೦
ಫಿನಾಲ್	೦.೦೦೧	೦.೦೦೨
ಪಿಹೆಚ್	೭ ರಿಂದ ೮.೫	೬.೫ರ ಕೆಳಗೆ ಮತ್ತು ೯.೨ರ ಮೇಲೆ

೩.೩ ಕಪಟ ಭೂಜಲ

ಭೂಮಿಯನ್ನು ಪ್ರವೇಶಿಸಿದ ನೀರು ಭೂಮಿಯ ಗುರುತ್ವಾಕರ್ಷಣೆಗೆ ಒಳಪಟ್ಟು ಕೆಳಕ್ಕೂ ಮತ್ತು ಪಾರ್ಶ್ವಾಭಿಮುಖವಾಗಿಯೂ ಚಲಿಸುತ್ತಾ ಹೋಗಿ ಸಹಜವಾದ



ಚಿತ್ರ ೧. ಕಪಟ ಭೂಜಲ

ಭೂಜಲವನ್ನು ಸೇರುವುದು. ಕೆಲವು ವೇಳೆ ಬಂಡೆ ಇಲ್ಲವೇ ಜೇಡಿಯಂತ ಅವ್ಯಾಪ್ತ ರಚನೆಗಳು ಅಡ್ಡಬಂದಲ್ಲಿ ಭೂಮಿಗಿಳಿದ ನೀರು ಮೇಲ್ಭಾಗದಲ್ಲಿಯೇ ತಡೆಯಲ್ಪಟ್ಟು ಬಂಡೆ ಅಥವಾ ಅವ್ಯಾಪ್ತ ಪ್ರದೇಶದ ಮೇಲೆ ನಿಂತುಬಿಡುವುದು. ಇಂತಹ ಕೃತಕ ಭೂಜಲ ಶೇಖರಣೆಯೇ ಕಪಟ ಭೂಜಲ (ಚಿತ್ರ ೧). ಇದು ಸಹಜ ಭೂಜಲದಿಂದ ಬೇರ್ಪಟ್ಟು ಮಿತಿಯಾದ ಶೇಖರಣೆಯನ್ನು ಹೊಂದಿರುತ್ತದೆ. ಕೆಲವು ವೇಳೆ ಜೌಗಿನೋಪಾದಿಯಲ್ಲಿ ಭೂಮಿಯ ಮೇಲೆಯೇ ಕಾಣಿಸಿಕೊಳ್ಳಬಹುದು. ಈ ರೀತಿ ಅಲ್ಪ ಶೇಖರಣೆ ಹೊಂದಿರುವ ಕಪಟ ಭೂಜಲ ಶುಷ್ಕವಾಗುವುದಲ್ಲದೇ ಆ ಪ್ರದೇಶದಲ್ಲಿ ನಿರ್ಮಿತವಾದ ಭಾವಿಗಳು ಬಹುಬೇಗ ಬತ್ತಿ ಹೋಗಬಹುದು.

೩.೪ ಭೂಜಲ ಉಷ್ಣಾಂಶದಲ್ಲಿ ಬದಲಾವಣೆ ಸಾಧ್ಯವೇ?

ಭೂಮಿಯು ಒಳ್ಳೆಯ ಉಷ್ಣವಾಹಕವಲ್ಲದುದರಿಂದ ಭೂಮಿಯ ಮೇಲಿನ ಉಷ್ಣಾಂಶ ಭೂಜಲದ ಮೇಲೆ ಪರಿಣಾಮವನ್ನುಂಟುಮಾಡಲಾರದು. ಸಾಮಾನ್ಯವಾಗಿ ಭೂಮಿಯಿಂದ ೯೦ ಮೀಟರ್‌ಗಳಷ್ಟು ಕೆಳಗೆ ಏರ್ಪಟ್ಟ ಭೂಜಲ ಸಮಶೀತೋಷ್ಣ ಖರತ್ವವನ್ನು ಪಡೆದಿದ್ದು ಗೃಹಕೃತ್ಯ ಹಾಗೂ ಕೈಗಾರಿಕೋದ್ಯಮಗಳ ಉಪಯೋಗಕ್ಕೆ ಅನುಕೂಲ ಕಾರಿಯಾಗಿರುತ್ತದೆ. ಹೆಚ್ಚಿನ ಆಳಕ್ಕೆ ಹೋದಂತೆಲ್ಲಾ ಭೂಜಲದ ಉಷ್ಣಾಂಶ ಹೆಚ್ಚುತ್ತಾ ಹೋಗುತ್ತದೆ. ಭೂಗರ್ಭದಿಂದ ಹೊರಹೊಮ್ಮುವ ಉಷ್ಣಾಂಶವೇ ಇದಕ್ಕೆ ಕಾರಣ, ೧೦೦ ಮೀಟರ್‌ಗಳಿಗಿಂತ ಹೆಚ್ಚಿನ ಆಳದಲ್ಲಿ ಭೂಜಲ ೧೫°C ಇದ್ದರೆ, ೫೦೦ ಮೀಟರ್ ಆಳದಲ್ಲಿ ಇದರ ಖರತ್ವ ೩೦°C ಆಗಿರುವುದು. ಗಹನವಾದ ಆಳದಲ್ಲಿರುವ ಭೂಜಲ ಭೂಗರ್ಭಶಿಲೆಗಳ ಅಧಿಕ ಉಷ್ಣಾಂಶಕ್ಕೆ ಒಡಂಬಟ್ಟು ಬಿಸಿನೀರಿನ ಬುಗ್ಗೆಗಳಾಗಿ ಮಾರ್ಪಾಡಾಗಬಲ್ಲದು.


೩.೫ ಕಲ್ಲು ಬಂಡೆಗಳಲ್ಲಿ ಭೂಜಲ ಶೇಖರಣೆ ಮತ್ತು ಚಲನೆ ಹೇಗೆ?

ಬಂಡೆಗಳು ಭೂಜಲವನ್ನು ತಮ್ಮಲ್ಲಿ ಅಡಕಮಾಡಿಕೊಳ್ಳಲು ಮತ್ತು ಬಿಟ್ಟು ಕೊಡಲು ಇರಬೇಕಾದ ಗುಣಲಕ್ಷಣ ಅಂದರೆ ಸಚ್ಛಿದ್ರತಾ ರಂಧ್ರಗಳನ್ನು ಅತಿ ಸ್ವಲ್ಪ ಪ್ರಮಾಣದಲ್ಲಿ ಪಡೆದಿರುವುದು. ಆದ್ದರಿಂದ ಬಂಡೆಗಳ ಭೂಜಲ ಶೇಖರಣೆ, ನಿರ್ಧಿಷ್ಟ ವ್ಯಾಪ್ತತೆ ಬಹಳ ಕಡಿಮೆ. ಆದರೆ ಕೆಲವು ಬಂಡೆಗಳು ನಿರ್ಮಾಣವಾದಾಗ, ಇಲ್ಲವೇ ತೀವ್ರ ಹವಾಗುಣ, ಚಂಡಮಾರುತಗಳ ಪ್ರಭಾವಕ್ಕೆ ಒಳಪಟ್ಟಾಗ ಬಿರುಕು, ಒಡಕು ಮತ್ತು ಪೊಟರುಗಳು ಏರ್ಪಟ್ಟಿಸಲುವಾಗಿ ಅಂತಹ ಬಂಡೆಗಳು ಉತ್ತಮ ಜಲಧರೆಗಳಾಗಿ ಕಂಡುಬರುತ್ತವೆ. ಇವುಗಳಲ್ಲಿ ಪ್ರಮುಖವಾದ ಸಣ್ಣಕಲ್ಲಿನ ವೈಶಿಷ್ಟವೆಂದರೆ ಇದರಲ್ಲಿನ ರಂಧ್ರಗಳು ರಸಾಯನಿಕ ಬದಲಾವಣೆಗಳಿಂದ ಕ್ರಮೇಣ ದೊಡ್ಡವಾಗಿ ಕಾಲುವೆ, ಪೊಟರೆಗಳಾಗಬಹುದು. ನಂತರ ಈ ಸಂದುಗಳಲ್ಲಿ ಸಂಘಟಿತವಾಗಿ ವಿಸ್ತಾರವಾದ ಭೂಜಲ ಜಲಾಶಯಗಳಾಗಿ ರೂಪಗೊಳ್ಳಬಹುದು.

ಕಲ್ಲು ಬಂಡೆಗಳಲ್ಲಿ ಭೂಜಲ ಶೇಖರಣೆ

ವಿಂಗಡಣೆ		ಅಡಕವಾದ ಸಚ್ಛಿದ್ರತಾ ರಂಧ್ರಗಳ ಅಂಶ (ನೂರಕ್ಕೆ
ಗಟ್ಟಿ ಬಂಡೆ	—	೧ ಕ್ಕಿಂತ ಕಡಿಮೆ
ಪದರ ಕಲ್ಲು	—	೬
ಬಿರುಕಿನಿಂದ ಕೂಡದ ಬಂಡೆ	—	೨ ರಿಂದ ೧೦
ವ್ಯಾಪತೆ ಪಡೆದ ಕರೀಕಲ್ಲು	—	೨ ರಿಂದ ೫
ಮರಳು ಕಲ್ಲು	—	೫ ರಿಂದ ೩೦
ಸುಣ್ಣಕಲ್ಲು (ಪೊಟರುಗಳಿಂದ ಕೂಡಿದ)	—	೧೦ ರಿಂದ ೩೦

೩.೬ ಸುರಂಗ ಜಲಧರೆಗಳಲ್ಲಿ ಭೂಜಲ ಶೇಖರಣೆ ಮತ್ತು ಚಲನೆ



ಚಿತ್ರ ೨. ಆರ್ಟಿಸಿಯನ್ ಮತ್ತು ನೆಲಭಾವಿಗಳ ಪರಿಚಯ

ಸುರಂಗ ಜಲಧರೆಗಳ ಭೂರಚನೆ ಒಂದು ವೈಶಿಷ್ಟ್ಯತೆಯಿಂದ ಕೂಡಿದೆ. ಮೇಲೆ ಮತ್ತು ಕೆಳಗೆ ಅವ್ಯಾಪ್ತ ಸೀಮಾಕ್ಷೇತ್ರ ಗಡಿಗಳು ಏರ್ಪಟ್ಟು ನಡುವಣ ಸುರಂಗದಲ್ಲಿ ಸಚ್ಛಿದ್ರ ಜಲಧಾಯುಕ ರಚನೆ ಅಡಕಗೊಂಡಿರುತ್ತದೆ. ಭೂಲಜವನ್ನೊಳಗೊಂಡ ಈ ರಚನೆಗೆ **ಆರ್ಟಿಸಿಯನ್ ಅಥವಾ ಸಂಮರ್ಧ ಜಲದಾಯುಕವೆಂದು** ಕರೆಯುತ್ತೇವೆ. ಇದರಲ್ಲಿ ಅಡಕವಾಗಿರುವ ಭೂಜಲ, ವಾಯು ಮಂಡಲದ ಸಂಮರ್ಧಕ್ಕಿಂತ ಹೆಚ್ಚಿನ ಒತ್ತಡವನ್ನು ಪಡೆದಿರುತ್ತದೆ. ಈ ಜಲಧಾಯುಕಗಳಿಗೆ ದೊರೆಯುವ ನೀರಿನ ಆಶ್ರಯ ದೂರದಲ್ಲಿನ ಒಂದಾನೊಂದು ಜಲಾನಯನ ಪ್ರದೇಶ. ಭೂಮಟ್ಟದಲ್ಲಿ

ಪ್ರವೇಶಿಸುವ ನೀರು ಸುರಂಗ ಪರಿಧಿಯಲ್ಲಿ ಚಲಿಸುತ್ತಾ ಹೆಚ್ಚಿನ ಸಂಮರ್ಧವನ್ನು ಪಡೆದು ಕೊಳ್ಳುತ್ತದೆ. ಇಂತಹ ಸುರಂಗ ಅಥವಾ ಆರ್ಟಿಸಿಯನ್ ಜಲಧಾಯಕಗಳಲ್ಲಿ ಏರ್ಪಟ್ಟ ಭಾವಿಗಳ ನೀರಿನ ಮಟ್ಟ ನೀರುಜಾರಿನ ಆಶ್ರಯಕ್ಕೆ ಒಳಪಟ್ಟ ನೆಲಬಾವಿಗಳ ನೀರಿನ ಮಟ್ಟಕ್ಕಿಂತ ಮೇಲೆ ಇರುತ್ತದೆ. ಅಲ್ಲದೆ ಸಂಮರ್ಧ ಸಾಕಷ್ಟು ಇದ್ದಲ್ಲಿ ಭೂಮಿಯ ಮೇಲೆ ಉಕ್ಕಿ ಬಂದು ಚಿಲುಮೆ ರೂಪದಲ್ಲಿ ಹರಿಯಬಲ್ಲದು (ಚಿತ್ರ ೨).

೩.೭ ಜಿನುಗು ಮತ್ತು ಚಿಲುಮೆ

ನೆಲಬಾವಿಗಳಲ್ಲಿನ ನೀರಿನ ಮಟ್ಟ ನೀರು ಜಾರನ್ನು ಅವಲಂಬಿಸಿರುತ್ತದೆ. ನೀರುಜಾರು ಕೆಳಗಿಳಿದಂತೆಲ್ಲಾ ಬಾವಿಯಲ್ಲಿ ನೀರು ಕುಗ್ಗುತ್ತಾ ಹೋಗುವುದು. ತಗ್ಗಿನ ಭೂಪ್ರದೇಶ ಗಳಲ್ಲಿ ಭೂಮಿಗೆ ಸಮೀಪದಲ್ಲಿ ಏರ್ಪಟ್ಟ ನೀರುಜಾರು ಹೊರಬಂದು ಹರಿಯತೊಡಗ ಬಹುದು. ಇಂತಹ ಭೂಜಲ ಪರಿವರ್ತನೆಯನ್ನು ಜಿನುಗು ಎಂದು ಕರೆಯುತ್ತೇವೆ. ಜಿನುಗಿನಿಂದ ಉದ್ಭವಿಸುವ ನೀರಿನ ಪ್ರಮಾಣವಾಗಲೀ ಅಥವಾ ಒತ್ತಡವಾಗಲೀ ಅತ್ಯಲ್ಪ. ಜಿನುಗನ್ನು ನದಿ ದಂಡೆಗಳಲ್ಲೂ ಭೂಮಿಯನ್ನು ಕಡಿದು ತಯಾರಿಸಲ್ಪಟ್ಟ ರೈಲ್ವೇ ಮತ್ತು ರಸ್ತೆ ದಿಬ್ಬಗಳಲ್ಲೂ, ಸುರಂಗದ ಗೋಡೆಗಳಲ್ಲೂ ಕಾಣಬಹುದು. ಬೆಟ್ಟಗುಡ್ಡಗಳಲ್ಲಿ ಮಳೆ ನೀರು ಎತ್ತರ ಭಾಗದ ಒಡಕುಗಳನ್ನು ಪ್ರವೇಶಿಸಿ, ಚಲಿಸಿ, ಬೇರೊಂದು ತಗ್ಗಿನ ಪ್ರದೇಶದ ಒಡಕುಗಳಲ್ಲಿ ಜಿನುಗಿನಿಂದ ಹೊರಬರುತ್ತದೆ. ಚಿಲುಮೆ ಉತ್ಪತ್ತಿಯಾದರೋ ಜಿನುಗಿನ ತೆರನಾಗಿದ್ದರೂ ಅದರ ಪ್ರಮಾಣ ಮತ್ತು ಒತ್ತಡ ಹೆಚ್ಚಾಗಿ ಮಾರ್ಪಟ್ಟಿರು ವುದು. ಚಿಲುಮೆ ವಿಚಾರವನ್ನು ಮುಂದಿನ ಭಾಗದಲ್ಲಿ ವಿವರವಾಗಿ ಪ್ರಸ್ತಾಪಿಸ ಲಾಗುವುದು.

೩.೮ ಯಾತ್ರಾಸ್ಥಳಗಳಲ್ಲಿ ಕೊಳಗಳು ಅಸಂಖ್ಯಾತ ಯಾತ್ರಿಕರ ಸತತ ಸ್ನಾನ ಮತ್ತು ಬಟ್ಟೆ ತೊಳೆಯುವುದರಿಂದ ಎಷ್ಟು ಮಲಿನವಾಗಬಲ್ಲವು

ನಮ್ಮ ಪೂರ್ವಿಕರು ಆರೋಗ್ಯ, ಹಿತಕರ ಹವಾಮಾನಗಳ ದೃಷ್ಟಿಯಿಂದ ಗಿರಿ ಪರ್ವತಗಳಲ್ಲಿ ವಿಹಾರ ಕೇಂದ್ರಗಳನ್ನು ಹಾಗೂ ದೇವಾಲಯ, ಮಠಗಳನ್ನು ಏರ್ಪಡಿಸಿ ದ್ದರು. ಇವುಗಳು ಅನೇಕ ಕಡೆ ಈಗಲೂ ಮಹತ್ವವನ್ನು ಪಡೆದಿರುತ್ತವೆ. ಇಂತಹ ವಿಶ್ರಾಂತಿ ಮತ್ತು ಯಾತ್ರಾ ಸ್ಥಳಗಳಲ್ಲಿ ನೀರಿನ ಅವಶ್ಯಕತೆ ಬಹು ಮುಖ್ಯವಾದು ದೆಂಬುದನ್ನು ನಮ್ಮ ಪೂರ್ವಿಕರು ಅರಿತು ಚಿಲುಮೆಗಳಿಂದ ಆವೃತವಾದ ಸ್ಥಳಗಳನ್ನು ಗುರುತಿಸಿ ಜನರನ್ನು ಆಕರ್ಷಿಸಲು ಇವುಗಳನ್ನು ಪವಿತ್ರ ಸ್ಥಳಗಳೆಂದು ಸಾರಿದರು. ಆ ಸ್ಥಳಗಳಲ್ಲಿ ದೇವಾಲಯ, ಗದ್ದುಗೆ ಮುಂತಾದುವನ್ನು ನಿರ್ಮಿಸಿದ್ದರು. ನಮ್ಮ ದೇಶವೇ ಅಲ್ಲದೆ ಪ್ರಪಂಚದ ಅನೇಕ ಕಡೆಗಳಲ್ಲಿ ಚಿಲುಮೆಗಳನ್ನೊಳಗೊಂಡ ಈ ತರಹ ವಿಹಾರ ಕೇಂದ್ರಗಳು ಏರ್ಪಟ್ಟಿರುತ್ತವೆ. ವರ್ಷಾದ್ಯಂತ ಅಸಂಖ್ಯಾತ ಜನರು ಈ ಸ್ಥಳಗಳಿಗೆ ಹೋಗಿ ಬರುತ್ತಾರೆ.

ಚಿಲುಮೆಗಳಿಂದ ಪೋಷಿತವಾದ ಬಹುತೇಕ ಪುಷ್ಕರಣಿಗಳು ಕುಡಿಯುವುದಕ್ಕೂ ಸ್ನಾನ ಮತ್ತು ಪಾತ್ರೆ ತೊಳೆಯಲೂ ಉಪಯೋಗಿಸಲ್ಪಡುತ್ತಿವೆ. ಹಬ್ಬ ಹುಣ್ಣಿಮೆ,

ಜಾತ್ರೆ, ಉತ್ಸವ ಮುಂತಾದ ವಿಶೇಷ ದಿನಗಳಲ್ಲಿ ಮಿತಿಮೀರಿದ ಮತ್ತು ಅಸ್ತವ್ಯಸ್ತ, ಅಶುದ್ಧ ಬಳಕೆಯಿಂದ ಈ ಕೊಳಗಳು ಅತ್ಯಧಿಕ ಪ್ರಮಾಣದಲ್ಲಿ ಮಲಿನವಾಗಬಲ್ಲವು. ಜನರು ಮಲಿನತೆಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಅರಿತಿದ್ದರೂ ಭಕ್ತಿ ಶ್ರದ್ಧೆಗಳ ಸೋಗಿನಲ್ಲಿ ಸ್ನಾನ, ಪಾತ್ರೆ ತೊಳೆಯಲು ಹಾಗೂ ಕುಡಿಯಲು ಅದೇ ಕೊಳದ ನೀರನ್ನು ಉಪಯೋಗಿಸುವರು. ಈ ಕೊಳಗಳ ಅವ್ಯವಸ್ಥಿತ ಉಪಯೋಗವನ್ನು ಪರಿಶೀಲಿಸಿದರೆ ಸಾಂಕ್ರಾಮಿಕ ರೋಗಗಳ ಪ್ರಸಾರ ತ್ವರಿತವೆಂಬುದು ಖಚಿತವಾಗುವುದು. ಆದರೆ ಪ್ರಕೃತಿಯ ನೈಪುಣ್ಯತೆ ಮತ್ತು ಸಹಕಾರದಿಂದ ಈ ಗಂಡಾಂತರ ತಡೆದಿದೆ. ಅಂತರ್ಜಲ ಸತತ ಚಲನೆಯಲ್ಲಿದ್ದು ಮಲಿನ ನೀರನ್ನು ಕೊಳದಿಂದ ಹೊರದೂಡಿ ಸ್ವಚ್ಛ ಜಲವನ್ನು ಸೇರಿಸುವುದರಿಂದಲೂ ಮತ್ತು ಸೂರ್ಯನ ರಶ್ಮಿ ನೆರವಾಗುವುದರಿಂದ ಈ ಕೊಳಗಳ ನೀರು ಎಣಿಸಿದಷ್ಟು ಮಲಿನವಾಗಲು ಅವಕಾಶವಾಗುವುದಿಲ್ಲ.

ನಾಗರೀಕತೆ ಅಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ ಪ್ರತಿಹಿಂಸೆಗಳ ಸಮುದ್ರವಲ್ಲ.

ಮಾನವ ಕುಲವೊಂದು ಮಹಾಸಾಗರ. ಕೆಲವು ಹನಿಗಳು ಹೊಲಸಾದರೆ ಇಡೀ ಸಾಗರ ಹೊಲಸಾಗುವುದಿಲ್ಲ.

ಗಾಂಧೀಜಿ

ಕಳೆದು ಹೋದ ಜೀವನ ಸಂಗಾತಿ

ಜೋಸೆಫ್ ಬ್ಲಾಂಕ್

ನ್ಯೂಯಾರ್ಕಿನ ಲಾರ್ಚ್‌ಮೋಂಟ್ ಎಂಬ ಉಪನಗರದಲ್ಲಿ, ಪುಟ್ಟ ಇಟ್ಟಿಗೆಯ ಮನೆಯಲ್ಲಿ ಮೆಕ್‌ಡಾನೆಲ್ ಜಿಮ್ ದಂಪತಿಗಳು ವಾಸಿಸುತ್ತಿದ್ದರು. ಜಿಮ್‌ನು ಅಂಚೆಯುವರ ಮುಖ್ಯಸ್ಥನಾಗಿದ್ದ. ಆತ ಅಲ್ಲಿ ೨೫ ವರ್ಷಗಳಕಾಲ ದುಡಿದಿದ್ದ. ಮೃದು ಸ್ವಭಾವದ ಸಭ್ಯ ವ್ಯಕ್ತಿಯಾಗಿದ್ದ ಜಿಮ್‌ಗೆ ನಗರದಲ್ಲಿ ನೂರಾರು ಜನರ ಪರಿಚಯವಿದ್ದಿತು. ೧೯೬೦ ರಲ್ಲಿ ವಿವಾಹಿತರಾದ ಜಿಮ್ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ.

೧೯೭೧ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಈತನು ಕೆಲವು ಅಫಘಾತಗಳಿಗೆ ತುತ್ತಾಗಬೇಕಾಯಿತು. ಆಗ ಜಿಮ್‌ನ ವಯಸ್ಸು ೫೦. ಯಾವುದೂ ಅಂತಹ ತೀವ್ರ ಸ್ವರೂಪದ್ದಲ್ಲವಾದರೂ ಪದೇ ಪದೇ ಸಂಭವಿಸಿದ ಅಫಘಾತಗಳಿಂದಾಗಿ, ವಿಚಿತ್ರ ಪರಿಣಾಮವನ್ನು ಎದುರಿಸಬೇಕಾಯಿತು.

ಕಸ ಎಸೆಯುವುದಕ್ಕಾಗಿ, ಒಂದು ಸಂಜೆ ಹೊರಗೆ ಹೋಗುತ್ತಿದ್ದಾಗ, ಹಿಮ ಸವರಿದ ಮೆಟ್ಟಿಲನ್ನು ತುಳಿದು ಜಿಮ್ ಬಿದ್ದುಬಿಟ್ಟ. ಪರಿಣಾಮ; ಬೆನ್ನು ಜಜ್ಜಿದಂತಾಯಿತು. ತಲೆಗೂ ತುಸು ಏಟು ಬಿತ್ತು. ಕೆಲವು ದಿನಗಳ ನಂತರ, ಕಾರು ಚಲಾಯಿಸುತ್ತಿದ್ದಾಗ, ಸೀನಿನ ಅವಾಂತರದಲ್ಲಿ ಹತೋಟಿ ತಪ್ಪಿ, ಕಾರು ದೂರವಾಣಿ ಕಂಬಕ್ಕೆ ತಗಲಿತು. ಜಿಮ್‌ನ ತಲೆಗೆ ಇನ್ನೊಮ್ಮೆ ಏಟುಬಿತ್ತು. ಮರುದಿನ, ಬವಳಿಬಂದು ಕೆಳಗುರುಳಿದಾಗ, ಏಟಿನ ಪುನರಾವರ್ತನವಾಯ್ತು. ಹತ್ತು ದಿನಗಳ ನಂತರ ಕಾರು ಚಲಾಯಿಸುತ್ತಿದ್ದಾಗ ಹತೋಟಿ ತಪ್ಪಿತು. ಕಾರು ಕಂಬಕ್ಕೆ ತಗುಲಿತು. ಜಿಮ್‌ಗೆ ಪ್ರಜ್ಞೆ ತಪ್ಪಿ, ಆಸ್ಪತ್ರೆ ಸೇರಿದುದಲ್ಲದೆ, ಮೆದುಳಿಗೆ ಆಘಾತ ಉಂಟಾದುದರಿಂದಾಗಿ, ಮೂರುದಿನ ಅಲ್ಲಿಯೇ ಇರಬೇಕಾಯಿತು.

೧೯೮೬ ರ ಮೇ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾಗಿರುವ ಜೋಸೆಫ್ ಬ್ಲಾಂಕ್‌ರವರ "ದಿ ಹಸ್‌ಬೆಂಡ್ ಹೂ ವ್ಯಾನಿಷ್ಡ್" ಎಂಬ ಲೇಖನದ ಅನುವಾದ.

ಮಾರ್ಚ್ ೨೯, ೧೯೭೧ ರಂದು ಜಿಮ್‌ನು ತನ್ನ ಸ್ನೇಹಿತನ ಕಾರನ್ನು ತೆಗೆದು ಕೊಂಡು 'ಕೆನಡಿ' ವಿಮಾನ ನಿಲ್ದಾಣಕ್ಕೆ ಹೋದ. ಮಡದಿ ಏನ್‌ಳ ಅಣ್ಣ ಮತ್ತು ಆತನ ಕುಟುಂಬವನ್ನು ಕರೆತರಬೇಕಾಗಿತ್ತು. ಜಿಮ್‌ನು ಅವರನ್ನು ಏನ್‌ಳ ತಂಗಿಯ ಮನೆಗೆ ಕರೆದೊಯ್ದ. ರಾತ್ರಿ ೧೦ ಗಂಟೆಗೆ ಕಾರನ್ನು ಹಿಂದಿರುಗಿಸಿದಾಗ, ತನ್ನ ಗುರುತಿನ ಚೀಟಿಯು ಅದರೊಳಗೆ ಬಿದ್ದುದನ್ನು ಜಿಮ್ ಗಮನಿಸಲಿಲ್ಲ. ತಕ್ಷಣ ಮನೆಗೆ ಹಿಂದಿರುಗು ವುದು ಜಿಮ್‌ಗೆ ಬೇಕಾಗಲಿಲ್ಲ. ಅಸಾಧ್ಯವಾಗಿ ತಲೆನೋಯುತ್ತಿದ್ದುದರಿಂದ, ಹಾಗೆಯೇ ಸ್ವಲ್ಪ ತಂಗಾಳಿಯಲ್ಲಿ ಸುತ್ತಾಡಿ ಮನೆಗೆ ಹೋಗಬೇಕೆಂದುಕೊಂಡ. ಸಾಮಾನ್ಯವಾಗಿ ಜಿಮ್‌ನ ಲಘು ನಡಿಗೆ ೧೫ ನಿಮಿಷಗಳಿಗಷ್ಟೇ ಸೀಮಿತ.

ರಾತ್ರಿ ೧೧-೧೫ ಆಗಿಹೋಗಿದ್ದರೂ, ಜಿಮ್ ಮನೆಗೆ ಹಿಂದಿರುಗಿರಲಿಲ್ಲ. ಏನ್, ಕಾರಿನ ಯಜಮಾನನನ್ನು ವಿಚಾರಿಸಿದಳು. ಆದರೆ ಜಿಮ್ ಮರಳಿ ಬಾರದಿರುವ ಬಗ್ಗೆ, ಆತನಿಗೆ ಏನೂ ಗೊತ್ತಿರಲಿಲ್ಲ. ಎಂದಿನಂತೆ, ದೂರವಾಣಿಯ ಮುಖಾಂತರವೂ, ಜಿಮ್, ಪತ್ನಿಗೆ ವಿಷಯ ತಿಳಿಸಿರಲಿಲ್ಲ. ಮಧ್ಯರಾತ್ರಿ ೨ ಗಂಟೆಗೆ, ಏನ್ ಪೋಲಿಸ್ ಕಂಪ್ಲೈಂಟ್ ನೀಡಿದಳು.

ತನಿಖೆ: ೨೪ ಗಂಟೆಗಳ ನಂತರ ಪೋಲೀಸರು ರಾಜ್ಯದಾದ್ಯಂತ ಪೋಲೀಸ್ (ಆರಕ್ಷಕ) ಠಾಣೆಗಳಿಗೆ ಸಂದೇಶ ಕಳಿಸಿದರು. ಜಿಮ್‌ನ ಸಂಬಂಧಿಕರನ್ನು, ಗೆಳೆಯರನ್ನು ವಿಚಾರಿಸಿ ಪತ್ರ ಬರೆದರು. ಎಲ್ಲಾ ರೀತಿಯ ತನಿಖೆಯೂ ನಡೆಯಿತು.

ಪತ್ತೇದಾರ ಮಿಲ್ಕೇಹಿ ತನಿಖೆಗಾಗಿ, ನೇಮಕವಾದನು. ಈತನಿಗೆ ಜಿಮ್‌ನ ಪರಿಚಯವಿತ್ತು. ಇಬ್ಬರೂ ಒಂದೇ ಚರ್ಚ್‌ಗೆ ಹೋಗುತ್ತಿದ್ದರು. ಜಿಮ್ ನಿಷ್ಕಪಟನೂ, ನೀರಸಸ್ವಭಾವದವನೂ ಆಗಿದ್ದನೆಂಬುದು ಮಿಲ್ಕೇಹಿಗೆ ಗೊತ್ತಿತ್ತು. ಆದ್ದರಿಂದ ಆತನ ನಾಪತ್ತೆ ಯಾವುದೇ ಅಪರಾಧದಿಂದಾಗಿ ಸಂಭವಿಸಿರಲಾರದೆಂದುಕೊಂಡ. ಜಿಮ್‌ನ ಪೂರ್ವೇತಿಹಾಸದ ವರದಿ ಆತನು ನಿರಪರಾಧಿಯೆಂಬುದನ್ನು ದೃಢಪಡಿಸಿತಲ್ಲದೆ, ಆತ್ಮಹತ್ಯೆ ಮಾಡುವಂತವನೂ ಅಲ್ಲವೆಂಬುದನ್ನು ಸೂಚಿಸಿತು. ಅಪರಾಧದಲ್ಲಿ ಸಿಕ್ಕಿಬೀಳುವ ಸಾಧ್ಯತೆಯೂ ಇಲ್ಲದುದರಿಂದ, ಜಿಮ್‌ನ ಮಟ್ಟಿಗೆ, ಸ್ಮೃತಿನಾಶದ ಸಾಧ್ಯತೆಯೊಂದೇ ಇದ್ದುದು.

ಸ್ಮೃತಿನಾಶದ ಕಾರಣಗಳು ಅಸ್ಪಷ್ಟವಾಗಿವೆ. ಇದು ಕೆಲವರಲ್ಲಿ ಮಾತ್ರ ಕಾಣಿಸಿ ಕೊಂಡು, ಇನ್ನಿತರರಲ್ಲಿ ತಲೆದೋರದಿರುವುದು, ವೈದ್ಯಕೀಯ ಊಹಾಪೋಹಗಳಿಗೆ ಎಡೆ ಮಾಡಿದೆ. ಸ್ಮೃತಿನಾಶ, ಆಘಾತ, ಅನಾರೋಗ್ಯ, ಅಮಲು ಪದಾರ್ಥಗಳ ಸೇವನೆ, ಮಾನಸಿಕ ಗಾಯ ಅಥವಾ ತಲೆಗೆ ತಗಲಿದ ಏಟಿನಿಂದಾಗಿ ಸಂಭವಿಸುವ ಸಾಧ್ಯತೆ ಯಿದೆ. ಇಂತಹ ಯಾವುದೇ ಒಂದು ಅಪಘಾತಕ್ಕೊಳಗಾದ ವ್ಯಕ್ತಿಯು ಮೆದುಳು ಗುರಿಯಿಲ್ಲದೆ ಅಲೆಯುತ್ತ, ತನ್ನ ಭೂತಕಾಲವನ್ನು ಸಂಪೂರ್ಣವಾಗಿ ಮರೆಯುವ ಸಂಭವವಿದೆ.

ಏನ್‌ಳ ತಂಗಿ ಹೇಳುತ್ತಾಳೆ. "ಹಲವಾರು ವಾರಗಳ ಕಾಲ, ಏನ್, ಕೈ ಕೈ ಹಿಸುಕಿಕೊಳ್ಳುತ್ತಾ, ದೇವರನ್ನು ಪ್ರಾರ್ಥಿಸುತ್ತಾ ಮನೆಯ ತುಂಬ ಓಡಾಡುತ್ತಿದ್ದಳು."

ಜಿಮ್ ಸ್ಮೃತಿನಾಶದ ಆಪತ್ತಿಗೆ ಒಳಗಾಗಿರಬಹುದೆಂದು ಆಕೆ ಊಹಿಸಿದ್ದಳು. ಆದ್ದರಿಂದ ಅವನ ಆರೋಗ್ಯದ ಬಗೆಗೆ ಅವಳಿಗೆ ತೀವ್ರ ಚಿಂತೆಯಾಗಿತ್ತು. ದೇವರ ಮೇಲಿನ ಭರವಸೆಯೇ ಅವಳನ್ನು ರಕ್ಷಿಸುತ್ತಿತ್ತು. ಮತ್ತು ಒಂದು ದಿನ ಆತ ಉತ್ತರಿಸಬಹುದೆಂಬ ನಂಬಿಕೆ ಅವಳದಾಗಿತ್ತು. ಜಿಮ್‌ಗಾಗಿ ಕಾಯುತ್ತಾ, ಏನ್ ಮನೆಯಲ್ಲಿ ಏಕಾಂಗಿ ಯಾದಳು. ರಾತ್ರಿ ದೂರದರ್ಶನವನ್ನು ನೋಡುತ್ತಿರುವಂತೆಯೇ, ಅವಳ ದೃಷ್ಟಿ ಜಿಮ್ ಕುಳಿತಿರುತ್ತಿದ್ದ ಕುರ್ಚಿಯತ್ತ ಸರಿಯುತ್ತಿತ್ತು. ಆಗ, ಅಲ್ಲಿ ಆತ ತೂಕಡಿಸುತ್ತಾ ಕುಳಿತಿರುತ್ತಿದ್ದುದು ನೆನಪಾಗುವುದು. ಎಷ್ಟೋಸಲ, ಅವನು ಬಂದಂತೆ ಕನಸಾಗುವುದು. ಆದರೆ ಎಚ್ಚರಾದಾಗ ಅವನಿರುತ್ತಿರಲಿಲ್ಲ. ಜಿಮ್‌ನ ಅದೃಶ್ಯದ ಅನಂತರ, ತಾನು ಸಂಪಾದಿಸಲೇಬೇಕಾಗಿ ಬಂದಿರುವುದನ್ನು ಏನ್ ಮನಗಂಡಳು. ಆಕೆ ಮಕ್ಕಳನ್ನು ನೋಡಿಕೊಳ್ಳುವ, ಅಂಗಡಿಯಲ್ಲಿ ಹಣಕಾಸಿನ ಲೆಕ್ಕವಿಡುವ, ಮತ್ತು ಆಸ್ಪತ್ರೆಯೊಂದರಲ್ಲಿ ಉಪಾಹಾರಗೃಹದ ಕೆಲಸವನ್ನು ವಹಿಸಿಕೊಂಡಳು.

ಏನ್ ರಜಾದಿನಗಳಲ್ಲೂ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಳು. ಈ ಕಾರ್ಯ ಮಗ್ನತೆ ಆಕೆಯ ಮಟ್ಟಿಗೆ ಆವಶ್ಯಕವಾಗಿತ್ತು. "ನಾನು ಮುಂದೆ ಹೋಗಲೇಬೇಕು. ಮತ್ತು ಸಾಧ್ಯವಾದಷ್ಟು ಒಳ್ಳೆಯ ರೀತಿಯಲ್ಲಿ ಜೀವನ ನಡೆಸಬೇಕು" ಅವಳು ತನಗೆ ತಾನೇ ಹೇಳಿಕೊಳ್ಳುವಳು. ಎಲ್ಲಕ್ಕಿಂತ ಹೆಚ್ಚಾಗಿ ಜಿಮ್ ಹಿಂದಿರುಗುವನೆಂಬ ಭರವಸೆ ಆಕೆಗಿತ್ತು. ಜಿಮ್‌ನ ಬಟ್ಟೆಗಳನ್ನು ಧೂಳಾಗದಂತೆ ಜೋಪಾನವಾಗಿ ಎತ್ತಿಟ್ಟಿದ್ದಳು. ಮುಖಕ್ಷೌರದ ಪರಿಕರಗಳು, ಸ್ನಾನದ ಕೋಣೆಯಲ್ಲಿ ಭದ್ರವಾಗಿದ್ದವು.

ಜಿಮ್ ಮನೆಯನ್ನು ತೊರೆದುಹೋದ ನಂತರ, ತಾನು ಯಾರು, ಎಲ್ಲಿಯ ನಿವಾಸಿಯೆಂಬುದನ್ನು ಸಂಪೂರ್ಣವಾಗಿ ಮರೆತಿರಬೇಕು. ಅನಂತರ ಏನು ನಡೆಯಿತೆಂಬುದು ಸ್ಪಷ್ಟವಾಗಿಲ್ಲ. ಪ್ರಾಯಶಃ ನ್ಯೂಯಾರ್ಕ್‌ನ 'grand central terminals'ಗೆ ರೈಲುಬಂಡಿ ಹಿಡಿದಿರಬಹುದು ಮುಂದೆ ಆತನ ಅರಿವಿಗೆ ಬಂದ ವಿಚಾರವೆಂದರೆ, ಸಂಪೂರ್ಣ ಅಪರಿಚಿತವಾಗಿರುವ ಫಿಲಡೆಲ್ಫಿಯಾ ನಗರಕ್ಕೆ ತಲುಪಿದ್ದು! ಜಾಹೀರಾತಿನಲ್ಲಿ 'ಜೇಮ್ಸ್ ಪೀಟರ್ಸ್'ನೆಂಬ ದಳ್ಳಾಳಿಯ ಹೆಸರನ್ನು ನೋಡಿಕೊಂಡು ಆ ಹೆಸರನ್ನು ಜಿಮ್ ತನ್ನದಾಗಿಸಿಕೊಂಡ. ಆರಕ್ಷಕ ಠಾಣೆಯಲ್ಲಿ ಅಥವಾ ಆಸ್ಪತ್ರೆಯಲ್ಲಿ ಸಹಾಯ ಯಾಚಿಸುವ ಸಂದರ್ಭ ಅವನಿಗುಂಟಾಗಲಿಲ್ಲ. ಆತನಿಗೆ ಭೂತಕಾಲವಿರಲಿಲ್ಲ. ಒಂದೇ ಸತ್ಯವೆಂದರೆ ವರ್ತಮಾನ. ಜೇಮ್ಸ್ ಪೀಟರ್ಸನು (ಜಿಮ್) ಆರೋಗ್ಯ ಸಂಸ್ಥೆಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡ. ಅನಂತರ, ಕ್ಯಾನ್ಸರ್ ಸಂಶೋಧನಾ ಸಂಸ್ಥೆಯಲ್ಲಿ ಪ್ರಾಣಿಗಳ ಗೂಡನ್ನು ಶುದ್ಧೀಕರಿಸುವ ಕೆಲಸ ಕೈಗೊಂಡ. ಉಪಾಹಾರ ಗೃಹವೊಂದರಲ್ಲಿ, ರಾತ್ರಿ ಪಾಳಿಯ ಕೆಲಸಕ್ಕೂ ಸೇರಿಕೊಂಡ ಜೇಮ್ಸ್. ಅಲ್ಲಿ ರುಚಿಕರವಾದ ಆಮ್ಲೆಟ್ ತಯಾರಿಕೆಗಾಗಿ, ತಿಳಿಹಾಸ್ಯಕ್ಕಾಗಿ ಮತ್ತು ಉದಾರ ಸ್ವಭಾವದಿಂದಾಗಿ, ಜನಪ್ರಿಯನಾದ. ಒಂದು ವರ್ಷದ ಅನಂತರ ಕ್ಯಾನ್ಸರ್ ಸಂಶೋಧನಾ ಸಂಸ್ಥೆಯ ಉದ್ಯೋಗ ತೊರೆದು, ಉಪಾಹಾರ ಮಂದಿರದ ಕೆಲಸದಲ್ಲಿಯೇ ಪರಿಣತಿ ಹೊಂದಿದ.

ಜಿಮ್‌ಗೆ ಹೊಸ ಗೆಳೆಯರು ಸಿಕ್ಕಿದರು. ಯುದ್ಧಾನುಭವ ಸಂಘದ ಸದಸ್ಯನಾದ ನಲ್ಲದೆ, ರೋಮನ್ ಕ್ಯಾಥೊಲಿಕ್ ಚರ್ಚ್‌ನ ಚಟುವಟಿಕೆಯ ಸದಸ್ಯನಾದ.

ತನ್ನ ಭೂತಕಾಲದ ಬಗ್ಗೆ ಜಿಮ್‌ನೆಂದೂ ಮಾತನಾಡುತ್ತಿರಲಿಲ್ಲ, ಅವನ ಗೆಳೆಯರು ಪೀಡಿಸಿ ಕೇಳುವವರೂ ಅಲ್ಲ. ಒಮ್ಮೆ ಸ್ನೇಹಿತನೊಬ್ಬ ಹೇಳಿದ, "ನಿನ್ನ ಉಚ್ಚಾರಣೆ ನೋಡಿದರೆ, ನ್ಯೂಯಾರ್ಕಿಗೆ ಸೇರಿದವನಿರಬೇಕು ನೀನು."

"ನನಗೂ ಹಾಗನಿಸುತ್ತದೆ" ಜಿಮ್ ಹೇಳಿದ.

ಚೆರೀಲ್ ಸ್ಲೋಅನ್, ಉಪಾಹಾರಗೃಹದ ಪರಿಚಾರಿಕೆ ಹೇಳುವಳು, "ಜಿಮ್ ಓರ್ವ ವಿಶೇಷ ವ್ಯಕ್ತಿ. ಆತ ಮಕ್ಕಳನ್ನು ಪ್ರೀತಿಸುತ್ತಿದ್ದ. ಕ್ರಿಸ್‌ಮಸ್ ಸಂದರ್ಭದಲ್ಲಿ, ಸಾಂತಾಕ್ಲಾಸ್ ಆಗುತ್ತಿದ್ದ. ಆಗ ಪಾತ್ರ ಪರಿಣಾಮಕಾರಿಯಾಗಲೆಂದು, ಬಿಳಿಯ ಗಡ್ಡವನ್ನು ಬಿಡುತ್ತಿದ್ದ. ನನಗೆ ಅವನ ಗತಕಾಲದ ರಹಸ್ಯ ಅಚ್ಚರಿಯನ್ನುಂಟುಮಾಡುತ್ತಿತ್ತು. ಆತ ಒಂದೇ ಸನ್ಯಾಸಿ, ತಪ್ಪಿದರೆ ಅಪರಾಧಿಯಾಗಿದ್ದಿರಬಹುದೆಂದು, ನಮ್ಮ ತಾಯಿ ಅಭಿಪ್ರಾಯಪಟ್ಟಿದ್ದರು".

ಬರ್ನಾಡಿನ್ ಗೊಲೋಶ್ ವಸ್ಕಿ ನೆನಪಿಸಿಕೊಳ್ಳುತ್ತಾಳೆ. "ಜಿಮ್, ಉಪಾಹಾರ ಮಂದಿರದಲ್ಲಿ ಕೆಲಸಕ್ಕೆ ಸೇರಿದ ಕಾಲದಲ್ಲೇ ನಾನೂ ಅಲ್ಲಿ ಪರಿಚಾರಿಕೆಯಾಗಿ ಸೇರಿಕೊಂಡೆ. ನಾನು ತಂದೆಯನ್ನು ಕಳೆದುಕೊಂಡಿದ್ದೆ. ಜಿಮ್‌ಗೆ ಕುಟುಂಬವಿರಲಿಲ್ಲ. ಹೀಗಾಗಿ, ನಾವಿಬ್ಬರೂ ಪರಸ್ಪರ ತಂದೆಮಕ್ಕಳಾದೆವು. ನಾನು, ನನ್ನವರು ಮತ್ತು ಮಕ್ಕಳು ಅವನ ಕುಟುಂಬವೇ ಆದೆವು. ಮಕ್ಕಳು ಆತನನ್ನು ಪ್ರೀತಿಸುತ್ತಿದ್ದರು."

೧೯೮೫ರ ಕ್ರಿಸ್‌ಮಸ್‌ಗೆ ತಿಂಗಳಿರುವಾಗ, ಜಿಮ್ ಅಸ್ವಾಭಾವಿಕವಾಗಿ, ಮೃದುವೂ, ಮೌನಿಯೂ, ಸಂಯಮಿಯೂ ಆದುದನ್ನು ಬರ್ನಾಡಿನ್ ಗಮನಿಸಿದಳು. ಅವನ ಮನಸ್ಸಿನಲ್ಲೇನೋ ಬದಲಾವಣೆ ಆಗುತ್ತಿದ್ದಿರಬಹುದು.

ನವಂಬರ್‌ನ ಕೊನೆಯಲ್ಲಿ ಒಂದು ದಿನ ಜಿಮ್ ಈ ಕುಟುಂಬವನ್ನು ಸಂದರ್ಶಿಸಿದ. ಪೀಟ್ ಜೊತೆ ದೂರದರ್ಶಕವನ್ನು ವೀಕ್ಷಿಸತೊಡಗಿದ. ಶೋಚನೀಯ ಮಳೆಯಲ್ಲಿ, ಅಂಚೆಯವನೊಬ್ಬ, ಪತ್ರಗಳನ್ನು ಹಂಚುತ್ತಿದ್ದ ದೃಶ್ಯ ತೆರೆಮೇಲೆ ಬಂದಿತು. "ನಾನು ಇಷ್ಟಪಡದಿರುವ ಉದ್ಯೋಗವಿದು!" ಪೀಟ್ ಉದ್ಗರಿಸಿದ. ಜಿಮ್ ಹುಬ್ಬು ಗಂಟಿಕ್ಕುತ್ತಾ ಹೇಳಿದ.

"ನನಗನಿಸುತ್ತದೆ ನಾನೆಲ್ಲೋ ಹಿಂದೆ, ಅಂಚೆಯವನಾಗಿದ್ದಿರಬೇಕು."

"ನಿಜವಾಗಿ ? ಎಲ್ಲಿ ?"

"ನನಗೆ ಗೊತ್ತಿಲ್ಲ" (ಜಿಮ್ ಉತ್ತರಿಸಿದ).

"ನ್ಯೂಯಾರ್ಕಿನಲ್ಲೇ ?"

"ನನಗೆ ಖಚಿತವಾಗುತ್ತಿಲ್ಲ. ಅಲ್ಪಸ್ವಲ್ಪ ನನ್ನ ಹೆತ್ತವರ ನೆನಪು ಬರುತ್ತಿರುವಂತಿದೆ."

ಜಿಮ್ ತನ್ನ ಹೆಚ್ಚಿನ ರಜಾದಿನಗಳನ್ನು, ಈ ಕುಟುಂಬದವರೊಡನೆ ಕಳೆಯುತ್ತಿದ್ದ. ಕ್ರಿಸ್‌ಮಸ್ ಸಂದರ್ಭದಲ್ಲಿ, ಗೆಳೆಯರಿಗೆಲ್ಲಾ ಶುಭಾಶಯ ತಿಳಿಸಿ, ಗೊಲೋಶ್ ವಸ್ಕಿ ಮನೆಗೆ ತಲುಪುವಾಗ ತಡವಾಗುತ್ತಿತ್ತು. ಏಕೆಂದರೆ ಇವರದು ಕೊನೆಯ ಮನೆ. ಈ ಬಾರಿ ಕ್ರಿಸ್‌ಮಸ್‌ಗೆ ಜಿಮ್ ಬರಲೇ ಇಲ್ಲ. ರಾತ್ರಿಯಿಡೀ ಬರ್ನಾಡಿನ್ ದಂಪತಿಗಳು ಕಾದು ಕುಳಿತರು.

ಡಿಸೆಂಬರ್ ೨೩ರಂದು ಜಿಮ್ ಬಿದ್ದುದರಿಂದಾಗಿ ತಲೆಗೆ ಏಟು ತಗಲಿತು. ಮರು ದಿನ ಕೆಲಸಮಾಡುತ್ತಿದ್ದಾಗ ಮನಸ್ಸು ವಿಕ್ಷಿಪ್ತವಾಗತೊಡಗಿತು. ಮತ್ತೆ ಮಧ್ಯಾಹ್ನದಲ್ಲಿ ಆತ ಪುನಃ ಕೆಳಗುರುಳಿ, ತಲೆಗೆ ಏಟಾಯಿತು. ೨೪ರ ಬೆಳಿಗ್ಗೆ ಜಿಮ್‌ನಿಗೆ ಸಂದಿಗ್ಧ ಪರಿಸ್ಥಿತಿ, ಆದರೂ ಏನೋ ಹರ್ಷಭರಿತ ಭಾವ! ೧೫ ವರ್ಷಗಳ ಅನಂತರ, ಕೊನೆಗೂ ಆತ ತನ್ನನ್ನು ತಾನು ಗುರುತಿಸಿಕೊಂಡ! ಅವನು ಲಾರ್ಚ್ ಮೌಂಟ್, ನ್ಯೂಯಾರ್ಕಿನ ನಿವಾಸಿ! ಜೇಮ್ಸ್ ಮೆಕ್‌ಡಾನೆಲ್! ಪತ್ನಿ ಏನ್‌ಳ ನೆನಪಾಗುತ್ತಿದ್ದಂತೆಯೇ ಜಿಮ್‌ಗೆ ಭಯಮಿಶ್ರಿತ ಆತಂಕವುಂಟಾಯಿತು. ಏನ್ ಬದುಕಿರಬಹುದೆ? ಇದ್ದರೆ ಮತ್ತೆ ಮದುವೆ ಯಾಗಿರಬಹುದೆ? ಇಲ್ಲದಿದ್ದಲ್ಲಿ ತನ್ನನ್ನವಳು ಹೇಗೆ ಸ್ವಾಗತಿಸಬಹುದು?

ಏನ್ ಕ್ರಿಸ್‌ಮಸ್ ಪ್ರಾರ್ಥನೆಯನ್ನು ಮುಗಿಸಿ ಬಂದಿದ್ದಳಷ್ಟೆ. ಅಲ್ಲಿ ಜಿಮ್‌ಗಾಗಿ, ಕ್ಯಾಂಡಲ್ಲನ್ನು ಉರಿಸಿ, ಪ್ರಾರ್ಥಿಸಿದ್ದಳು. ಹೊರಗೆ ಹಿಮ ಸುರಿಯುತ್ತಿತ್ತು. ತಂಗಿಯ ಮನೆಗೆ ಊಟಕ್ಕೆ ಹೋಗುವ ಅವಸರದಲ್ಲಿದ್ದಳು ಏನ್. ಹಿಮಪಾತ ದಿಂದಾಗಿ, ಮಾರ್ಗ ಜಾರತೊಡಗುವ ಮುನ್ನ ಹೋಗಬೇಕೆಂದುಕೊಂಡಳು.

ಅಷ್ಟರಲ್ಲಿ ಕರೆಗಂಟೆಯ ಸದ್ದಾಯಿತು. ಅವೇಳೆಯಲ್ಲಿ ಅತಿಥಿಗಳ ಆಗಮನ! ಅಪ್ರಿಯವೆನಿಸಿತು. ಏನ್ ಬಾಗಿಲು ತೆರೆದಾಗ ಬಿಳಿಯಗಡ್ಡದ ವ್ಯಕ್ತಿಯೊಬ್ಬನನ್ನು ನೋಡಿದಳು. ತಕ್ಷಣ ಗುರುತು ಹತ್ತಿದಾಗ, ಭಾವೋದ್ವೇಗದಿಂದ ಏನ್ ಮೂಕಳಾದಳು.

ಏನ್ ಸ್ವಲ್ಪ ವಯಸ್ಸಾದಂತೆ ಕಂಡರೂ, ಜಿಮ್‌ನ ಕಣ್ಣುಗಳಿಗೆ ಅಂದವಾಗಿಯೇ ತೋರಿದಳು. ಜಿಮ್‌ನ ಹೃದಯ ತುಂಬಿ ಹರಿಯಿತು. "ಹಲೋ ಏನ್" ಅವನು ಹೇಳಿದ.

"ಜಿಮ್" ಅವಳು ಉಸಿರು ಬಿಗಿಹಿಡಿದು ಕೇಳಿದಳು, "ಇದು ನಿಜವೇ?"

ಕಂಗಳು ಆನಂದಬಾಷ್ಪದಿಂದ ತುಂಬಿ ಹರಿದುವು. ಹತ್ತಿರ ಓಡಿಬಂದು ಅವಳು ನುಡಿದಳು, "ಅಬ್ಬಾ! ನೀನು ಮರಳಿಬಂದೆ! ನನಗೆಷ್ಟು ಸಂತೋಷವಾಗಿದೆ, ಗೊತ್ತೆ? ಬಾ....ಬಾ....ಒಳಗೆ."

ಅವರ ಕೈಗಳು ಪರಸ್ಪರ ಸ್ಪರ್ಶಿಸಿದವು. ಆಲಿಂಗಿಸಿಕೊಳ್ಳಲೂ ಮರೆತಂತೆ, ಇಬ್ಬರೂ ಬೆರಗಾಗಿದ್ದರು. ಬಾಹುಬಂಧನವು ಮೌನಸಂದೇಶ ನೀಡಿದಾಗ, ಇಬ್ಬರಲ್ಲೂ ಸಾರ್ಥಕ್ಯಭಾವ!

ಏನ್, ಜಿಮ್‌ನನ್ನು ಆತನು ಹಿಂದೆ ಕೂರುತ್ತಿದ್ದ ಕುರ್ಚಿಯಲ್ಲಿ ಕುಳ್ಳಿರಿಸಿದಳು. ಅದು ಆತನಿಗೆ ಪ್ರಿಯವಾದ ಜಾಗ. ನಂತರ ಇಬ್ಬರೂ ಮಾತನಾಡತೊಡಗಿದರು. ಕಳೆದುದೆಲ್ಲವನ್ನೂ ತುಂಬುವಂತೆ, ಕೊನೆಗೆ ಆತನ ಕಣ್ಣುಗಳು ಭಾರವಾದವು. ಆನಂದ ಮತ್ತು ಆಯಾಸದಿಂದ ನಿದ್ದೆಯಾವರಿತು.

ಕೊನೆಗೂ, ೧೫ ವರ್ಷಗಳ ಅನಂತರ, ಜಿಮ್ ಮೆಕ್‌ಡಾನೆಲ್ ಮನೆಗೆ ಮರಳಿದ!

ಕ್ರಿಸ್‌ಮಸ್‌ನ ಮೂರನೇ ದಿನ ಜಿಮ್ ತನ್ನ ಆಗಮನದ ವಾರ್ತೆಯನ್ನು ಪೋಲೀಸರಿಗೆ ತಿಳಿಸಿದ. ಆ ದಿನ ಸಂಜೆ ನ್ಯೂಯಾರ್ಕಿನ 'Daily News' ವರದಿ

ಗಾರನಿಂದ, ಜಿವ್ ಸ್ವಸ್ಥವಾಗಿರುವ ಬಗ್ಗೆ, ಗೋಲೋಶ್ ವಸ್ಕಿಗೆ ದೂರವಾಣಿ ಸಂದೇಶ ಹೋಯಿತು. ಬರ್ನಾಡಿನ್, ಜಿವ್‌ನ ಗೆಳೆಯರಿಗೆ ಈ ಸುವಾರ್ತೆಯನ್ನು ತಿಳಿಸಿದಳು.

ಒಂದು ವಾರದ ಅನಂತರ, ಮೆದುಳಿಗೂ ಸಂಬಂಧಿಸಿದಂತೆ, ಜಿವ್‌ನನ್ನು ಸಂಪೂರ್ಣವಾಗಿ, ವೈದ್ಯಕೀಯ ತಪಾಸಣೆಗೆ ಗುರಿಪಡಿಸಲಾಯಿತು. ಬಂದ ವರದಿ ಆತನ ಆರೋಗ್ಯವು ಸಾಮಾನ್ಯಸ್ಥಿತಿಯಲ್ಲಿರುವುದಾಗಿ ತಿಳಿಸಿತು.

ಮುಂದೆ ದಂಪತಿಗಳಾಗಿ, ಜಿವ್ ಮತ್ತು ಏನ್ ಸಮಸ್ಯೆಗಳನ್ನು ಎದುರಿಸ ಬೇಕಾಗಲಿಲ್ಲ.

"ದಿನವೂ ನಾವು ಜೊತೆಯಾಗಿರುವೆವು" ಜಿವ್ ಹೇಳುತ್ತಾನೆ. "ಆಗ ಅಗಲಿದ್ದ ಕಾಲ ಕಡಿಮೆಯೆನಿಸುತ್ತದೆ."

ಅನು : ಲೀಲಾ ಮಣ್ಣಾಲ

ಅಹಿಂಸೆ ಹೇಡಿತನವಲ್ಲ, ಆತ್ಮ ಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿಮುಟ್ಟಲು ತಾಳ್ಮೆ ಮಾತ್ರ ಬೇಕು.

ಧರ್ಮ ಧರ್ಮಗಳಲ್ಲಿ ಜಗಳ ಸಲ್ಲದು. ಆದರೆ ಎಲ್ಲ ಧರ್ಮಗಳು ಅಧರ್ಮದ ವಿರುದ್ಧ ಹೋರಾಡಬೇಕು.

ಗಾಂಧೀಜಿ

ವೈದ್ಯರು ಪ್ರಸ್ತಾವಿಸಲು ಬಯಸದ ರೋಗ

ಡಾ. ಡೇವಿಡ್‌ನ್ಯಾಪ್

ವೈದ್ಯನೇ ಕಾರಣನಾಗಿ ಉದ್ಭವಿಸುವ ರೋಗ ನೀವು ಅರಿಯಬಹುದಾದ್ದಕ್ಕಿಂತ ಹೆಚ್ಚಾಗಿಯೇ ಇದೆ ಎಂದು ಈ ಅನುಭವಸ್ಥ ವೈದ್ಯ ಒಪ್ಪುತ್ತಾನೆ. ಇದಕ್ಕೆ ಅವನು ಸೂಚಿಸುವ ಪರಿಹಾರ—ನಿಮ್ಮ ಆರೋಗ್ಯ ನಿರ್ಧರಣೆಯಲ್ಲಿ ನೀವೂ ಭಾಗಿಗಳಾಗಿರಲು ತಕ್ಕಷ್ಟು ವಿಷಯ ಪರಿಚಿತರಾಗಿರಬೇಕಾದ್ದು—ಡೈಜೆಸ್ಟಿನ ಸಂಪಾದಕ

ವ್ಯಾಧಿ ನಿವಾರಣೆಗೆ ಇರುವ ಔಷಧಿಯೇ ನವವ್ಯಾಧಿಗೆ ಕಾರಣವಾಗಬಹುದೆಂಬುದು ನಿಮಗೆ ಗೊತ್ತೇ? ಔಷಧಿಜನ್ಯ ವ್ಯಾಧಿ ಇದು.

—ಅನುವಾದಕ

ವೈದ್ಯನ ಹಸ್ತಾಕ್ಷರ ಅಷ್ಟು ಸ್ಪಷ್ಟವಾಗಿರಲಿಲ್ಲ ಮತ್ತು ೧.೦ ಮಿ.ಗ್ರಾಂ.ಕೋಲ್‌ಚಿಸಿನ್ (ಗೌಟ್‌ವ್ಯಾಧಿಯ ಚಿಕಿತ್ಸಕಮದ್ದು) ಕೊಡಬೇಕೆಂಬ ಅವನ ಆದೇಶ ಗೀಚಿಹಾಕಿದ್ದಂತಿತ್ತು. ಅನುಭವವಿಲ್ಲದ ದಾದಿಯೊಬ್ಬಳು ಆದೇಶಪಟ್ಟಿಯನ್ನು ತಪ್ಪುತಪ್ಪಾಗಿ ಓದಿಕೊಂಡು ಬದಲಾಗಿ ೧೦.೦ ಮಿ.ಗ್ರಾಮ್‌ನಷ್ಟು ಆ ಪ್ರಬಲ ಔಷಧವನ್ನು ಕೊಟ್ಟಳು. ರೋಗಿ ಮೃತನಾದ. ಗೌಟ್‌ರೋಗ ಸಾಮಾನ್ಯವಾಗಿ ಎಂದೂ ಮಾರಕರೋಗವಲ್ಲ. ಹಾಗಾದರೆ ಮರಣಕ್ಕೆ ಕಾರಣ ಏನು? ಮರಣಕ್ಕೆ ಕಾರಣ ವೈದ್ಯಜನ್ಯರೋಗ ಅಥವಾ ಔಷಧಿಜನ್ಯರೋಗ. (Iatrogenic disease). ರೋಗದ ಪತ್ತೆ ತಪ್ಪಾಗಿರುವಿಕೆ, ಅಯುಕ್ತ ಚಿಕಿತ್ಸೆ, ಮದ್ದುಗಳ ಪರಸ್ಪರ ಕ್ರಿಯೆ, ಪ್ರಯೋಗಾಲಯ ಫಲಿತಾಂಶವನ್ನು ತಪ್ಪಾಗಿ ತಿಳಿಯಪಡಿಸುವಿಕೆ, ಪೆನಿಸಿಲ್ಲಿನ್ನು ಅಥವಾ ಇನ್ನಾವುದೋ ಚುಚ್ಚುಮದ್ದಿನಿಂದ ತೀವ್ರ ಪ್ರತಿಕ್ರಿಯೆ ಉಂಟಾಗುವಿಕೆ ಯಾವುದೇ

೧೯೭೮ರ ನವೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಡಾ. ಡೇವಿಡ್ ನ್ಯಾಪ್‌ರವರ "ದಿ ಡಿಸೀಸ್ ಡಾಕ್ಟರ್ಸ್ ಡೊಂಟ್ ಟಾಕ್ ಎಬೌಟ್" ಎಂಬ ಲೇಖನದ ಸ್ಥೂಲಾನುವಾದ.

ಆಗಲಿ, ಇಂಥ ವೈದ್ಯಹಸ್ತಕ್ಷೇಪಗಳ ನೇರ ಪರಿಣಾಮವಾಗಿ ಕಾಣಬರುವ ಅಸ್ವಸ್ಥತೆ, ಕೇಡು, ಮರಣ ಇವಕ್ಕೆ ವೈದ್ಯಜನ್ಯರೋಗನೆಂದು ಹೆಸರಿಸಿದ್ದಾರೆ. ವೈಜ್ಞಾನಿಕ ಹೆಸರು ಇಯಾಟ್ರೋಜೆನಿಸಿಸ್ (Iatrogenesis) ಈ ಶಬ್ದದ ಇಯಾಟ್ರಾಸ್ ಎಂಬ ಗ್ರೀಕ್ ಮೂಲಕ್ಕೆ, ವೈದ್ಯ, ಔಷಧ ಎಂಬ ಅರ್ಥಗಳಿವೆ.

ವೈದ್ಯನ ತಪ್ಪಿನಿಂದಾದ ವಿವಿಧ ಘಟನೆಗಳು ವೈದ್ಯಕೀಯ ನಿಯತಕಾಲಿಕಗಳಲ್ಲಿ ಪ್ರಕಟವಾಗುವುದಾದರೂ ಅವುಗಳನ್ನು ಸಾರ್ವಜನಿಕ ಅವಗಾಹನೆಗೆ ಈಡುಮಾಡಲು ನಾವು ವೈದ್ಯರು ಅಷ್ಟು ಆಸಕ್ತರಲ್ಲ. ಈ ಧೋರಣೆ ಬದಲಾಗಬೇಕು. ೩೦ ವರ್ಷಗಳಿಗೂ ಮೀರಿ ವೃತ್ತಿವೈದ್ಯದ ಅನುಭವ, ಅದಕ್ಕೆ ಬೆಂಬಲವಾಗಿ ಪರಿಶೋಧನೆಗಳು ಹಾಗೂ ಮುಖತಃ ಮಾತುಗಳು, ಇವುಗಳಿಂದ ರೋಗಿಯ ಜೀವಕ್ಕೆ ಅಪಾಯ ಒದಗಬಹುದಾದುದರ ಒಳನೋಟವನ್ನು ನಾನು ತೋರಿಸಬಲ್ಲೆ ಎಂದು ನನ್ನ ನಂಬಿಕೆ.

ಪ್ರಮುಖವಾದ ಕೇಡಿನ ಪ್ರಸಂಗಗಳೆಂದರೆ ಔಷಧಗಳನ್ನು ಯುಕ್ತಪ್ರಮಾಣ ಮೀರಿ ವಿಧಿಸುವುದು, ವೈದ್ಯಕೀಯ ತಪಾಸಣೆಗಳ ಹಾಗೂ ಎಕ್ಸ್‌ರೇ ಚಿತ್ರಣಗಳ ಅನಗತ್ಯ ಬೇಡಿಕೆ, ರೋಗದ ಪತ್ತೆ ತಪ್ಪಾಗಿರುವುದು, ಆಸ್ಪತ್ರೆಯಲ್ಲಿಯೇ ಸೋಂಕುತಗಲುವುದು, ಪ್ರಶ್ನಾರ್ಹವಾದ ಶಸ್ತ್ರಚಿಕಿತ್ಸೆ ಇವುಗಳು. ನನಗೆ ಇಷ್ಟವಾದ ವೈದ್ಯವೃತ್ತಿಯ ನಿರ್ವಹಣೆಯಲ್ಲಿ ಸೂಕ್ತಬದಲಾವಣೆಗಳಾಗಬೇಕಿದ್ದು ವೈದ್ಯಕ್ರಮಗಳ ದುರುಪಯೋಗದಿಂದ ನೀವು ಸ್ವರಕ್ಷಣೆ ಪಡೆಯಬಹುದಾದ ಮಾರ್ಗಗಳನ್ನು ಪೂರ್ವಭಾವಿಯಾಗಿ ಸೂಚಿಸುತ್ತೇನೆ.

ಬಹುಔಷಧಗಳು : ಔಷಧಗಳ ಅನಪೇಕ್ಷಿತ ಪರಿಣಾಮಗಳು ಮತ್ತು ಏಕಕಾಲಿಕವಾಗಿ ಒಂದಕ್ಕಿಂತ ಹೆಚ್ಚು ಔಷಧಗಳ ಪ್ರಯೋಗವಾದಾಗ ಅವುಗಳ ಪರಸ್ಪರ ಪ್ರಭಾವದಿಂದಾಗುವ ಅಪಾಯಗಳು, ವೈದ್ಯಜನ್ಯರೋಗಗಳಲ್ಲೆಲ್ಲ ಅತ್ಯಂತ ಸಾಮಾನ್ಯವಾದುವೆಂದು ತೋರುತ್ತದೆ. ನನಗೆ ತಿಳಿದಂತೆ ಕೊಂಚವಾದರೂ ಆನುಷಂಗಿಕ ಪರಿಣಾಮಗಳಿರದ ಔಷಧಿಗಳೇ ಇಲ್ಲ. ಉದಾಹರಣೆಯಾಗಿ ಏರಿದ ರಕ್ತಒತ್ತಡದ ಚಿಕಿತ್ಸೆಗಾಗಿ ವೈದ್ಯ ಮೂತ್ರವೃದ್ಧಿ ಮಾಡುವ ಔಷಧನನ್ನು ಕೊಡುತ್ತಾನೆ. ಅದರಿಂದ ಅನುಕೂಲಪರಿಣಾಮವಾಗಿ ಪಕ್ಷಾಘಾತಸಂಭವ ಕಡಿಮೆ ಆದರೂ, ಗೌಟ್‌ರೋಗ ಎರಗುವುದು, ಲೈಂಗಿಕ ಸಾಮರ್ಥ್ಯ ಕಡಿಮೆ ಆಗುವುದು, ಮಧುಮೂತ್ರರೋಗ ಉಲ್ಬಣಿಸುವುದು, ಈ ಸಂಭವಗಳಿರುತ್ತವೆ.

ಬ್ರಿಯಾನ್ ಸಿ., ಎಂಬಾತ ನೆಗಡಿಯ ಚಿಕಿತ್ಸೆಗಾಗಿ ತಾನು ಓದುತ್ತಿದ್ದ ವಿಶ್ವವಿದ್ಯಾಲಯದ ಆಸ್ಪತ್ರೆಗೆ ಸೇರಿಕೊಂಡಾಗ ತಾನು ಮಧ್ಯಂತರ ಪರೀಕ್ಷೆಯನ್ನು ತೆಗೆದುಕೊಳ್ಳಬೇಕಾಗಿದ್ದುದರಿಂದ ಶೀಘ್ರ ಪರಿಣಾಮಕ ಔಷಧವನ್ನು ಕೋರಿದ. ಸಾಮಾನ್ಯವಾಗಿ ಆನುಷಂಗಿಕ ಸೋಂಕಿನ ವಿರುದ್ಧ ಔಷಧಕೊಡುವಂತೆ ಅವನಿಗೂ ಪ್ರಬಲ ಪ್ರತಿಜೈವಿಕ ಒಂದನ್ನು (Antibiotic) ಕೊಡಲಾಯಿತು. ಮಾಮೂಲಿನಂತೆ ಒಂದು ವಾರ ಬಿಟ್ಟೇ ಅವನ ನೆಗಡಿ ವಾಸಿ ಆಯಿತು. ಆದರೆ ಕೆಲವು ಮದ್ದುಗಳ ಸಾಧಾರಣ ಪ್ರತಿಕ್ರಿಯೆಯಂತೆ ಈ ಮದ್ದೂ ಅವನಲ್ಲಿ ಯಕೃತ್ತಿನ ಉರಿಊತ ಉಂಟು ಮಾಡಿತು. ಅದರಿಂದ ಅವನು ಚೇತರಿಸಿಕೊಳ್ಳಲು ತಿಂಗಳುಗಳೇ ಆದವು.

ಕೆಲವು ಆಸ್ಪತ್ರೆಗಳಲ್ಲಿ ವ್ಯಾಪಕವಾಗಿ ಪ್ರತಿಜೈವಿಕಗಳನ್ನು ಅಗಾಧಪ್ರಮಾಣದಲ್ಲಿ ಬಳಸುತ್ತಾರೆ. ಬರ್ಲಿಂಗ್‌ಟನ್ನಿನ ವೆರುಮಾಂಟ್ ಕೇಂದ್ರಆಸ್ಪತ್ರೆಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದದ್ದು ಇದು: ಕ್ಲೋರಾಂಫೆನಿಕಾಲನ್ನು (ಕ್ಲೋರೋಮೈಸಿಟಿನ್ ಇತ್ಯಾದಿ;—ಅನು.) ಸೇವಿಸಿದವರ ಪೈಕಿ ೨೬% ರೋಗಿಗಳಿಗೆ ಅದು ಅನಗತ್ಯವಾಗಿಯೇ ಇತ್ತು ; ಅಲ್ಲದೆ ರಕ್ತ ತಯಾರಿಕಾಂಗಗಳಿಗೆ ತೀವ್ರಧಕ್ಕೆಮಾಡುವ ಈ ಔಷಧದ ಬದಲು ಕಡಿಮೆ ನಂಜಿನ ಬೇರೆ ಔಷಧ ಕೊಡಬಹುದಾಗಿತ್ತು.

ಆಸ್ಪತ್ರೆಗೆ ದಾಖಲಾದ ರೋಗಿಗಳಿಗೆ ಅಲ್ಲಿ ಸೋಂಕು ತಗಲದಿರಲೆಂದು ವೈದ್ಯರು ಮುನ್ನೆಚ್ಚರಿಕೆಯಾಗಿ ಪ್ರತಿಜೈವಿಕಗಳನ್ನು ವಿಧಿಸುವುದಿದೆ. ಆದರೆ ಹೀಗೆ ಮಾಡುವುದರಿಂದ ಅವು ದೇಹಕ್ಕೆ ಅನುಕೂಲಕರವಾಗಿರುವ ಕ್ರಿಮಿಗಳನ್ನು ತೊಡೆದುಹಾಕುತ್ತವೆ. ಅದರ ಫಲವಾಗಿ ಪ್ರತಿಜೈವಿಕಕ್ಕೆ ಮಣಿಯದ ವಿಷಾಣುಗಳ ಸೋಂಕುಂಟಾಗಲು ಸುಲಭವಾಗುತ್ತದೆ ಅಷ್ಟೆ. ಮುಂಚೆಯೇ ಸೋಂಕು ಉಂಟಾಗಿರುವುದು ಖಾತರಿ ಆಗಿದ್ದಾಗ ಮತ್ತು ಶಸ್ತ್ರಕ್ರಿಯೆಗಳನ್ನು ಜರಗಿಸುವಾಗ ಹಾಗೂ ಅನಂತರದಲ್ಲಿ ಮಾತ್ರ ಪ್ರತಿಜೈವಿಕಗಳ ಬಳಕೆಯನ್ನು ರೂಢಿಗೆ ತರಬೇಕು.

ಬೇರೆ ಮದ್ದುಗಳ ಅತಿಬಳಕೆಯಿಂದಲೂ ಗಹನದುಷ್ಪರಿಣಾಮಗಳು ಕಾಣಬರಬಹುದು. ಉದಾಹರಣೆಗೆ ಅಮೆರಿಕದಲ್ಲಿ ಶಾಮಕಗಳು, ಖಿನ್ನತೆಯ ವಿರುದ್ಧ ಔಷಧಗಳು ಶಾಂತಿಕಾರಕಗಳು ಇತ್ಯಾದಿ ಮಾನಸಿಕಪ್ರಭಾವಯುಕ್ತ ಔಷಧಿಗಳನ್ನು ಡಾಕ್ಟರುಗಳು ತಡೆಬಡೆಯಿಲ್ಲದೆ ವಿಧಿಸುತ್ತಾರೆ. ನೂರಕ್ಕೂಮೀರಿ ಇಂಥ ಮದ್ದುಗಳು ಬಳಕೆಯಲ್ಲಿವೆ. ಉದಾಹರಣೆಗೆ ವ್ಯಾಲಿಯಂ. ಇದು ಪ್ರಬಲವಲ್ಲದ ಆತಂಕಶಾಮಕ ಹಾಗೂ ಸ್ನಾಯು ವ್ಯಾಕೋಚಕ. (Muscle relaxant). ಶಾಂತಿಕಾರಕ ಮದ್ದನ್ನಾಗಿ (Tranquilliser) ಇದನ್ನು ಬಹುಸಾಮಾನ್ಯವಾಗಿ ವಿಧಿಸಲಾಗುತ್ತದೆ. ಆದರೆ ೩ ತಿಂಗಳುಗಳೊಳಗಿನ ಗರ್ಭಿಣಿಯರು ಇದನ್ನು ಬಳಸಿದಾಗ ಭ್ರೂಣದ ಅಂಗವಿಕಲತೆ ಮುಂತಾದ ಆನುಷಂಗಿಕ ದುಷ್ಪರಿಣಾಮಗಳ ಸಂಭವವಿದೆ. ಜೊತೆಗೆ ಖಿನ್ನತೆಯವಿರುದ್ಧ ಔಷಧಗಳು (Antidepressants), ಏರಿದ ರಕ್ತಒತ್ತಡಕ್ಕೆ ವಿಧಿಸುವ ಔಷಧಗಳು, ಅದಿರುವಾಯು ಶಾಮಕ ಔಷಧಗಳು, ಮದ್ಯಸಾರ, ಚಿಲ್ಲರೆ ಅಂಗಡಿಯಲ್ಲಿ ದೊರೆಯುವ ಮದ್ದುಗಳು ಇಂಥ ಅನೇಕ ಮದ್ದುಗಳಂತೆಯೇ ಶಾಂತಿಕಾರಕಗಳೂ ಅನಿರೀಕ್ಷಿತವಾದ ಪ್ರತಿಕ್ರಿಯೆಗಳನ್ನು ತೋರಿ ಹಾನಿಉಂಟುಮಾಡುವ ಸಂಭವವಿದೆ. ಹಲವಾರು ತಜ್ಞರುಗಳು ಆಯಾರೋಗಗಳಿಗೆ ವಿಧಿಸಿರುವ ಬೇರೆಬೇರೆ ಔಷಧಗಳನ್ನು ರೋಗಿ ಒಟ್ಟಿಗೇ ಸೇವಿಸುತ್ತಿರಬಹುದು. ಇವುಗಳ ಪರಸ್ಪರ ಪ್ರತಿಕ್ರಿಯೆಯೂ ಅದರಿಂದ ತೊಂದರೆಯೂ ಸಾಧ್ಯ. ಆದರೆ ಯಾವ ವೈದ್ಯನೂ ಔಷಧವನ್ನು ವಿಧಿಸುವಾಗ ರೋಗಿ ಮದ್ಯಪಾನ ಆಸಕ್ತನೇ, ಬೇರೆ ಏನಾದರೂ ಔಷಧಗಳನ್ನು ಸೇವಿಸುತ್ತಿರುವನೇ ಎಂದು ವಿಚಾರಿಸುವುದಿಲ್ಲ. ವಿಚಾರಿಸಿದ್ದೇ ಆದರೆ ಅದು ಕೇವಲ ಅಚಿಂತಿತ (Casual). ಸ್ಯಾಲಿ ಜಿ. ೭೦ ವರ್ಷ ವಯಸ್ಸಿನ ಮುದುಕಿ. ಉಸಿರಾಡುವುದಕ್ಕೆ ಕಷ್ಟವಾಗಿ ಆಸ್ಪತ್ರೆಗೆ ದಾಖಲಾಗಿದ್ದಳು. ಹೃದಯದ ಅನಿಯಮಿತಮಿಡಿತಸ್ಥಿತಿಗಾಗಿ ಆವಳು ಈ ಮೊದಲೇ ಡಿಗಾಕ್ಸಿನ್ ಎಂಬ ಔಷಧವನ್ನು ತೆಗೆದುಕೊಳ್ಳುತ್ತಿದ್ದಳು. ಆಸ್ಪತ್ರೆಯಲ್ಲಿ ಡಾಕ್ಟರು ಅವಳಿಗೆ ಮೂತ್ರೋತ್ತೇ

ಜಕವನ್ನು ಕೊಟ್ಟನಂತರ ಅವಳ ಉಸಿರಾಟ ಹದಕ್ಕೆ ಬಂತು. ಆದರೆ ಅವಳು ಹೊಟ್ಟೆ ತೊಳಸು ಎಂದು ಸಂಕಟಪಡುತ್ತಿದ್ದಾಗ ಅನನುಭವಿ ಆಗಿದ್ದ ಒಬ್ಬ ವಾರ್ಡುಡಾಕ್ಟರು (Internee) ಸಿಮೆಟಿಡಿನ್ ಎಂಬ ಔಷಧವನ್ನು ಅಭಿಧಮನಿಯ ಚುಚ್ಚುಮದ್ದಾಗಿ (I. V. injection) ವಿಧಿಸಿದ. ಮದ್ದು ಕೊಟ್ಟಮೇಲೆ ಬೆಳಗಾಗುವುದರೊಳಗಾಗಿ ಸ್ಯಾಲಿ ಮೃತಳಾಗಿದ್ದಳು. ಔಷಧಗಳ ಪರಸ್ಪರ ಕ್ರಿಯೆಗಳ ಪರಿಣಾಮವನ್ನು ಅವಳ ರೋಗಗ್ರಸ್ತಹೃದಯ ತಡೆದುಕೊಳ್ಳಲಾರದಾಗಿತ್ತು.

ಅಧಿಕ ಹಾಗೂ ಅನಗತ್ಯ ತನಿಖಾಕ್ರಮಗಳು: ಆರೋಗ್ಯಸ್ಥಿತಿಯನ್ನು ತಿಳಿಯಲು ದೇಹಾದ್ಯಂತ ಪರೀಕ್ಷೆಗೆ (General Checkup) ಹಾಗೂ ಆಸ್ಪತ್ರೆಗೆ ಸೇರಿದಮೇಲೆ ಮಾಡುವ ಮಾಮೂಲು ಪರೀಕ್ಷೆಗೆ (Routine examination) ಡಾಕ್ಟರುಗಳು ವಿಧಿಸುವ ತನಿಖಾಕ್ರಮಗಳು ಅನೇಕವು ಅನಾವಶ್ಯಕ ಇಲ್ಲವೇ ಅನುಚಿತವೆಂದು ಈ ಬಗ್ಗೆ ಮಾಡಿದ ಪರಿಶೋಧನೆಗಳ ವಿಶ್ಲೇಷಣೆಯಿಂದ ತಿಳಿದು ಬರುತ್ತದೆ. ಅಲ್ಲದೆ ಈ ತನಿಖೆಗಳನ್ನು ಕಟ್ಟುನಿಟ್ಟಾಗಿ ಮಾಡದೆ ಬೇಕಾಬಿಟ್ಟಿ ಮಾಡಿ ಮಾಹಿತಿ ಒದಗಿಸಿದರೆ ಅವು ತಪ್ಪೇ ಆಗಿಯೋ ತಪ್ಪು ವ್ಯಾಖ್ಯಾನಕ್ಕೆ ಈಡಾಗುವಂಥವಾಗಿಯೋ ಇರುತ್ತವೆ. ೫೦ ವರ್ಷ ವಯಸ್ಸಿನ ಇರ್ವಿಂಗ್ ಎಫ್. ಇದಕ್ಕೆ ನಿದರ್ಶನ. ಈತ ದೇಹಾದ್ಯಂತ ಪರೀಕ್ಷೆಗೆ ಒಳಗಾದ ಸಮಯದಲ್ಲಿ ಆರೋಗ್ಯವಂತನಂತೆಯೇ ಕಂಡು ಬಂದಿದ್ದ. ಹಲವು ದಿನಗಳ ನಂತರ ಅವನ ರಕ್ತಪರೀಕ್ಷೆಯ ಫಲಿತಾಂಶ ಕೈಸೇರಿದಾಗ ಅವನಿಗೆ ಪಾಂಡುರೋಗ (Anaemia) ಇದೆಯೆಂದು ತಿಳಿಯಿತು. ಸಾಮಾನ್ಯವಾಗಿ ವಯಸ್ಕ ಪುರುಷರು ಸಾಕ್ಷಾತ್ ರಕ್ತ ನಷ್ಟವಾಗುತ್ತಿದ್ದ ಹೊರತು ಅನೀಮಿಯಕ್ಕೆ ಒಳಗಾಗುವುದಿಲ್ಲವಾದ್ದರಿಂದ ವಿಶೇಷತನಿಖೆಗಾಗಿ ವೈದ್ಯ ಬೇರಿಯಮ್ ಮಿಶ್ರಣದ ಸೇವನೆ ಹಾಗೂ ವಸ್ತಿಕ್ರಮಗಳ ಎಕ್ಸ್‌ರೇ ಚಿತ್ರಣಗಳನ್ನು ವಿಧಿಸಿದ. ಇವುಗಳಿಂದ ವಿಶೇಷವೇನೂ ತಿಳಿಯಬರಲಿಲ್ಲ. ದಿಕ್ಕು ತೋಚದೆ ವೈದ್ಯ ಪುನಃ ರಕ್ತಪರೀಕ್ಷೆ ಮಾಡಿಸಿದ. ಅದು ಆರೋಗ್ಯಸ್ಥಿತಿಯಲ್ಲೇ ಇತ್ತು. ಪಾಂಡು ರೋಗದ ಸೂಚನೆ ಇರಲೇ ಇಲ್ಲ. ಮುಂಚೆ ಮಾಡಿದ್ದ ರಕ್ತಪರೀಕ್ಷೆಯ ಫಲಿತಾಂಶವೇ ತಪ್ಪಾಗಿತ್ತು. ಇಲ್ಲಿ ಗಮನಿಸಬೇಕಾದ ವಿಷಯ—ಇನ್ನೇನೂ ದೇಹಬಾಧೆಗಳು ವ್ಯಕ್ತವಾಗದೇ ಇದ್ದಾಗ ತಪ್ಪೇ ಆಗಿರಬಹುದಾಗಿದ್ದ ರಕ್ತ ಪರೀಕ್ಷೆಯನ್ನು ವೈದ್ಯ ಇನ್ನೊಂದು ಸಾರಿ ಮಾಡಿಸಿ ನೋಡುವುದರ ಬದಲು ದುಬಾರಿಯಾದ ಮತ್ತು ಅತ್ಯಂತ ಅಹಿತಕರವಾದ ತನಿಖಾ ಕ್ರಮಕ್ಕೆ ವ್ಯಕ್ತಿಯನ್ನು ಒಳಪಡಿಸಿದ್ದು.

೧೯೭೨ರಲ್ಲಿ ಒಂದು ವೈದ್ಯ ತಂಡ ಮ್ಯಾಸಚುಸೆಟ್ಸಿನ ೨೫ ಆಸ್ಪತ್ರೆಗಳಿಗೆ ದಾಖಲಾದ ರೋಗಿಗಳಿಗೆ ಮಾಡಿಸಿದ ವಿಶೇಷತನಿಖೆಗಳನ್ನು ಪುನರ್ವಿಮರ್ಶಿಸಲು ಪ್ರಾರಂಭಿಸಿತು. ೧೯೭೪ರಲ್ಲಿ ಜರ್ನಲ್ ಆಫ್ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ನಿನಲ್ಲಿ ಪ್ರಕಟಿಸಿದ ಪ್ರಾರಂಭಿಕ ವಿಮರ್ಶೆಯಂತೆ ೭ ಆಸ್ಪತ್ರೆಗಳಲ್ಲಿ ಈ ವಿಶೇಷತನಿಖೆಗಳಿಗೆ ವಿಧಿಸಿದ ರುಸುಮು ಸರಾಸರಿಗಿಂತ ೫೦% ಹೆಚ್ಚಾಗಿತ್ತಲ್ಲದೆ ಆ ತನಿಖೆಗಳಲ್ಲಿ ೩೦% ಅಪ್ರಕೃತವಾಗಿತ್ತು.

ವೈದ್ಯಕೀಯ ವಿಶೇಷ ತಪಾಸಣೆ ಎನ್ನುವುದು ಅಗಾಧವಾಗಿ ದೈತ್ಯದಂತೆ ಬೆಳೆದಿರುವುದಕ್ಕೆ ಡಾಕ್ಟರುಗಳೇ ಕಾರಣ. ಸ್ವತಃ ತಮ್ಮ ಪರೀಕ್ಷೆಗಳಿಂದಲೇ ರೋಗವನ್ನು ಪತ್ತೆ

ಮಾಡಬಹುದೆಂಬ ಆತ್ಮವಿಶ್ವಾಸ ಇವರುಗಳಿಗೆ ಬಹುಶಃ ಇಲ್ಲದಿರುವುದು ಇವರು ಯಾವ ಯಾವುದೋ ತನಿಖೆಗಳನ್ನು ವಿಧಿಸುವುದಕ್ಕೆ ಕಾರಣ ಎಂದು ತೋರುತ್ತೆ. ಪದವಿ ಪಡೆಯದೆ ಇನ್ನೂ ಅನುಭವಪಡೆಯುತ್ತಿರುವ ವಿದ್ಯಾರ್ಥಿಡಾಕ್ಟರುಗಳು (Internees) ಅಸಂಖ್ಯಾತವಾಗಿ ವಿಶೇಷ ತನಿಖಾಕ್ರಮಗಳನ್ನು ವಿಧಿಸುವುದರಲ್ಲಿ ನಿಸ್ಸೀಮರು. ಭಾಗಶಃ ಆಸ್ಪತ್ರೆಗಳೂ ಅನಗತ್ಯವಾದ ವಿಶೇಷತನಿಖೆಗಳಿಗೆ ಕಾರಣ. ಈ ವಿಶೇಷತನಿಖೆಗಳು ಅನೇಕವಕ್ಕೆ ದುಬಾರಿ ಸಲಕರಣೆ ಅಗತ್ಯ. ಈ ಸಲಕರಣೆಗಳು ನಿರಂತರವಾಗಿ ಬಳಸಲ್ಪಡದೆ ಮೂಲೆಗುಂಪಾಗಿದ್ದರೆ ಆಸ್ಪತ್ರೆಗೆ ನಷ್ಟ. ಆದ್ದರಿಂದ ಆಸ್ಪತ್ರೆಯ ಅಧಿಕಾರಿಗಳು ಬೇಕಾಗಲಿ ಬೇಡವಾಗಲಿ ಅವುಗಳ ಬಳಕೆಯನ್ನು ಉತ್ತೇಜಿಸುವವರಾಗಿರುತ್ತಾರೆ.

ಕ್ಷ ಕಿರಣಗಳ (X-rays) ಅಪಾಯವನ್ನು ಅರಿತಿದ್ದರೂ ಅನೇಕ ವೈದ್ಯರು ಮಾಮೂಲಾಗಿ ಎದೆಯ ಎಕ್ಸ್‌ರೇ ಚಿತ್ರಣವನ್ನು ವಿಧಿಸುತ್ತಾರೆ. ಶ್ವಾಸಕೋಶದ ಕ್ಯಾನ್ಸರ್, ಕ್ಷಯ, ಹೃದ್ರೋಗ ಇವುಗಳ ಪತ್ತೆ ಎಕ್ಸ್‌ರೇ ಚಿತ್ರಣದಿಂದ ಸುಲಭ ವಾಗುತ್ತದೆ ಎಂದು ಅವರು ಹೇಳುವ ಕಾರಣ. ಆದರೆ ಬೇರೆ ತನಿಖಾ ಕ್ರಮಗಳ ಉಪಜ್ಞೆಯಾಗಿದ್ದು ಇನ್ನೂ ಹೆಚ್ಚು ಖಚಿತವಾಗಿ ಈ ರೋಗಗಳ ಪತ್ತೆ ಆಗಬಹು ದಾಗಿರುವುದರಿಂದ ಅವರ ವಾದ ಹುರುಳಿಲ್ಲದ್ದಾಗಿದೆ. ೧೯೭೦ರಲ್ಲಿ ಅಮೆರಿಕ ಡಾಕ್ಟರುಗಳ ಆಯೋಗ ಒಂದು ಮಾಮೂಲಾಗಿ ಎದೆಯ ಎಕ್ಸ್‌ರೇ ಚಿತ್ರಣವನ್ನು ಮುಂದುವರಿಸ ಬಾರದೆಂದು ಹೇಳಿದೆ. ಲಕ್ಷಣವ್ಯಕ್ತವಾಗದ ಶ್ವಾಸಕೋಶದ ಕ್ಯಾನ್ಸರಿನ ನಿಖರ ಪತ್ತೆ ಗಾಗಿ ಎದೆ ಎಕ್ಸ್‌ರೇ ಚಿತ್ರಣ ಅವಶ್ಯಕವೆಂದು ಹೇಳುತ್ತಿದ್ದ ಅಮೆರಿಕನ್ ಕ್ಯಾನ್ಸರ್ ಸಂಸ್ಥೆ ಹಾಗೆ ಸಲಹೆ ಕೊಡುವುದನ್ನು ಈಚೆಗೆ ನಿಲ್ಲಿಸಿದೆ.

ವಿಶೇಷ ಮತ್ತು ನೂತನ ತನಿಖಾ ಕ್ರಮಗಳಿಂದ ರೋಗಗಳ ಪತ್ತೆ ಶೀಘ್ರವಾಗಿಯೂ ನಿಖರವಾಗಿಯೂ ಆಗುವುದು ಅನೇಕ ವೇಳೆ ನಿಜ. ಆದರೆ ಈ ಕ್ರಮಗಳ ಪ್ರತಿ ಜಟಿಲ ಹಂತದಲ್ಲು ತಪ್ಪಾಗುವುದಕ್ಕೂ ಅದರ ಫಲವಾಗಿ ವೈದ್ಯಜನ್ಯರೋಗ ಉಂಟಾಗುವು ದಕ್ಕೂ ಹೆಚ್ಚು ಹೆಚ್ಚು ಅವಕಾಶ ಕಲ್ಪಿಸಿದಂತಾಗಿದೆ. ಉದಾಹರಣೆಯಾಗಿ ಲಾರೆನ್ಸ್ ಎಂ. ಎಂಬ ೭೦ ವರ್ಷ ವಯಸ್ಸಿನ ವ್ಯಕ್ತಿಗೆ ಆದದ್ದನ್ನು ಗಮನಿಸಬಹುದು. ಎಕ್ಸ್‌ರೇ ಚಿತ್ರಣಗಳಿಂದಲೇ ಅವನ ರೋಗವನ್ನು ಪತ್ತೆ ಮಾಡಬೇಕಾಗಿದ್ದು ಅದಕ್ಕಾಗಿ ಅವನನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಕಕ್ಕಸಿಗೆ ಹೋಗಬೇಕೆಂದು ಕರೆಗಂಟೆ ಬಾರಿಸಿದಾಗ ಸಹಾಯಕರು ಯಾರೂ ಬರಲಿಲ್ಲ. ಮಂಚದ ಎತ್ತರವಾದ ಸುತ್ತು ಕಟಕಟೆಯನ್ನು ತಾನೇ ದಾಟಿಹೋಗಲು ಪ್ರಯತ್ನಿಸಿ ಕೆಳಕ್ಕೆ ಬಿದ್ದು ತೊಡೆಕೀಲನ್ನು ಮುರಿದು ಕೊಂಡ. ಇದರ ಚಿಕಿತ್ಸೆಗೆ ಇನ್ನಷ್ಟು ಎಕ್ಸ್‌ರೇ ಚಿತ್ರಣ ಅಗತ್ಯವಾದದ್ದಷ್ಟೇ ಅಲ್ಲದೆ ಶಸ್ತ್ರಕ್ರಿಯೆಯೂ ಅಗತ್ಯವಾಯಿತು. ಅವನನ್ನು ಹೊರರೋಗಿಯಾಗಿ (outpatient) ಇಟ್ಟುಕೊಂಡು ಎಕ್ಸ್‌ರೇ ಚಿತ್ರಣಗಳನ್ನು ತೆಗೆಯಬಹುದಾಗಿತ್ತು. ಆದರೆ ಕೇವಲ ಡಾಕ್ಟರಿನ ಸೌಕರ್ಯಕ್ಕಾಗಿ ಅವನನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಇಂಥ ಆಕಸ್ಮಿಕಗಳೂ ಆಸ್ಪತ್ರೆಯಲ್ಲೇ ಅಂಟುವ ಸೋಂಕುಗಳೂ ಸಾಮಾನ್ಯವೇ ಆಗಿರುವುದು ದುರದೃಷ್ಟ. ಸೋಂಕುಗಳೂ ಸಾಧಾರಣವಾಗಿ ಪ್ರತಿಜೈವಿಕಗಳಿಗೆ ಮಣಿಯದ ಕ್ರಿಮಿಗಳ (Resis-tent to antibiotics) ಸೋಂಕುಗಳೇ ಆಗಿದ್ದು ಅವುಗಳ ಚಿಕಿತ್ಸೆ ಬೇರೆ ಕಡೆ

ಅಂಟಿದ ಸೋಂಕುಗಳ ಚಿಕಿತ್ಸೆಗಿಂತ ಕಷ್ಟಸಾಧ್ಯ. ಇಂಥ ಸೋಂಕಿನಿಂದ ರಕ್ತದಲ್ಲಿ ವಿಷಾಣುಗಳು ಸಮೃದ್ಧಿಯಾಗುವ ಸ್ಥಿತಿ (ಬಾಕ್ಟೀರಿಮಿಯ) ಕಂಡುಬಂದರೆ ಅದು ಮಾರಕವೇ ಆಗುವ ಸಂಭವವಿದೆ

ಡಾ. ನೈಟ್‌ಸ್ಟೀಲ್ ಎನ್ನುವವರು ತಮ್ಮ ವಿಶ್ವವಿದ್ಯಾನಿಲಯದ ಆಸ್ಪತ್ರೆಯಲ್ಲಿ ೫ ತಿಂಗಳುಗಳ ಅವಧಿಯಲ್ಲಿ ಕಂಡುಬಂದ ವೈದ್ಯಜನ್ಯರೋಗಗಳ ವಿಚಾರವಾಗಿ ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸನ್ ಎಂಬ ನಿಯತಕಾಲಿಕದಲ್ಲಿ ವರದಿ ಮಾಡಿದ್ದಾರೆ. ತನಿಖೆ ಮಾಡಿದ ೮೧೫ ಮಂದಿ ರೋಗಿಗಳಲ್ಲಿ ೨೯೦ ಜನ ಆಸ್ಪತ್ರೆಜನ್ಯರೋಗಗಳಿಂದ ನರಳಿದ್ದರು. ಅವರಲ್ಲಿ ಕೆಲವರು ೨ರಿಂದ ೭ ಬಾರಿ ಹೀಗೆ ನರಳಿದ್ದುಂಟು. ೧೫ ಮಂದಿ ಅಂಥ ರೋಗಗಳಿಂದಲೇ ಮೃತರಾದರು. ಇನ್ನು ೬೧ ಮಂದಿಯಲ್ಲಿ ರೋಗ ಮಾರಕವೇ ಆಗಬಹುದೇನೋ ಎನ್ನುವಷ್ಟು ತೀವ್ರವಾಗಿತ್ತು ಇಲ್ಲವೇ ಗುರುತರವಾದ ದೌರ್ಬಲ್ಯವನ್ನು ಉಂಟುಮಾಡಿತು.

ನಾವು ಆಸ್ಪತ್ರೆಗೆ ಸೇರಿಸಲ್ಪಟ್ಟಾಗ ನಮಗೆ ಕೇಡು ಉಂಟಾಗುವ ಸಂಭವವನ್ನು ಅಲಕ್ಷಿಸುವಂತಿಲ್ಲ ಎಂಬುದು ವ್ಯಕ್ತ. ಈ ಅಪಾಯಗಳನ್ನು ಗಮನಿಸಿ ಕೂರುರೋಗ (Acute illness), ತೀವ್ರ ನೋವು, ಗಹನಶಸ್ತ್ರಕ್ರಿಯೆ ಇಂಥ ಸಂದರ್ಭಗಳಿಗೆ ಮಾತ್ರ ಆಸ್ಪತ್ರೆ ದಾಖಲಾತಿಯನ್ನು ನಿಗದಿಮಾಡಬೇಕು. ವಿಷಯ ಹೀಗೆ ಇರಬೇಕಾಗಿದ್ದರೂ ಸಾಮಾನ್ಯ ರೋಗಗಳ ಚಿಕಿತ್ಸೆಗಾಗಿ ಇಲ್ಲವೆ ಸಾಧಾರಣ ತನಿಖೆಗಳಿಗಾಗಿ ಜನ ಆಸ್ಪತ್ರೆಗೆ ಸೇರಿಸಲ್ಪಡುತ್ತಾರೆ. ಉಂಡಿಗೆ ಪರೀಕ್ಷೆ (Biopsy—ಕ್ಯಾನ್ಸರ್ ತನಿಖೆಗಾಗಿ) ಮತ್ತು ಹೃದಯದ ಅಪಧಮನಿ ಚಿತ್ರಣದಂಥ (Artiriogram) ವಿಶೇಷ ತನಿಖೆಗಳನ್ನೂ ವ್ಯಕ್ತಿಯನ್ನು ಹೊರರೋಗಿಯನ್ನಾಗಿಯೇ ಇಟ್ಟು ಸುರಕ್ಷಿತವಾಗಿ ಮಾಡಬಹುದು.

ಶಸ್ತ್ರಕ್ರಿಯೆಯಲ್ಲಿ ಎಡವಟ್ಟುಗಳು: ಬಾಸ್ಟನ್ನಿನ ಪ್ರಸಿದ್ಧ ಆಸ್ಪತ್ರೆ ಒಂದರಲ್ಲಿ ಶಸ್ತ್ರಚಿಕಿತ್ಸಾ ನಂತರದ ಜಟಿಲತೆಗಳನ್ನು ಒಂದು ವರ್ಷಕಾಲ ವೀಕ್ಷಿಸಲಾಯಿತು. ಶಸ್ತ್ರಕ್ರಿಯೆಗೆ ಒಳಪಟ್ಟ ಸುಮಾರು ೩೬೦೦ ಮಂದಿಯಲ್ಲಿ ೩೬ ಮಂದಿಗೆ ಶಸ್ತ್ರಕ್ರಿಯೆ ಜರಗಿಸಿದ ಸಮಯದಲ್ಲೇ ತಪ್ಪಾಗಿತ್ತು. (ಇವರಲ್ಲಿ ೨೩ ಜನ ಮುಂಚೆಯೇ ಬೇರೆ ಆಸ್ಪತ್ರೆಗಳಲ್ಲಿ ಇಂಥ ತಪ್ಪಿಗೆ ಈಡಾಗಿದ್ದರು.) ಒಟ್ಟು ೫೬ ತಪ್ಪುಗಳು ಬೆಳಕಿಗೆ ಬಂದವು. ಕೆಲವು ಕೈಯಾರ ಮಾಡಿದವು (Acts of Commission); ಕೆಲವು ಮಾಡಬೇಕಾದುದನ್ನು ಕೈಬಿಟ್ಟವು (Acts of Omission). ಎಲ್ಲ ಶಸ್ತ್ರಕ್ರಿಯೆಗಳೂ ಘನವಂತ ಶಸ್ತ್ರಕ್ರಿಯಾತಜ್ಞರಿಂದಲೇ ಮಾಡಲ್ಪಟ್ಟವು. ಕೈಬಿಟ್ಟು ಆದ ತಪ್ಪುಗಳು ಕೆಲವು ಇವು: ಉದರದೊಳಗಿನ ಹುಣ್ಣು (ಪತ್ತೆ ಆಗದೆ); ಉದರ ಪೊರೆಯ ಉರಿಯೂತ (Peritonitis—ಪತ್ತೆ ತಡವಾಗಿ ಕಾಲಮೀಂಚಿ); ತೊಡೆಯ ಅಪಧಮನಿಯಲ್ಲಿ ರಕ್ತಗರಣೆ (ಚಿಕಿತ್ಸೆ ತಡವಾಗಿ). ಇವುಗಳ ಫಲವಾಗಿ ಬಾಧೆ ಶಾಶ್ವತವಾಗಿ ಉಳಿಯಿತು. ಅನಾವಶ್ಯಕವಾಗಿ ಮಾಡಿದ್ದು ಇದು: ಉದರ ಶಸ್ತ್ರಕ್ರಿಯೆ—ವಾಸ್ತವವಾಗಿ ನ್ಯೂಮೋನಿಯ ರೋಗದಿಂದ ಉದರದಲ್ಲಿ ನೋವು ಕೂಡು ಬಂದಿದ್ದಾಗ

ಹೀಗೆ ಮಾಡಿದ್ದರು. ಒಟ್ಟು ೩೬ ಮಂದಿಯಲ್ಲಿ ೨೦ ಮಂದಿ ತಪ್ಪಿನ ಕಾರಣವಾಗಿಯೇ ಮೃತರಾದರು. ಐದು ಮಂದಿ ತೀವ್ರ ದುರ್ಬಲತೆಯಿಂದುಳಿದರು.

ಸಮರ್ಥನೀಯವಾದದ್ದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಶಸ್ತ್ರಕ್ರಿಯೆ ಜರಗುತ್ತೆ ಎಂಬುದಕ್ಕೂ ಗಣನೀಯವಾದಷ್ಟು ಋಜುವಾತು ಇದೆ: ಉದಾಹರಣೆಗೆ ಎದೆಯನ್ನು ಕೊಯ್ದು ನೇರವಾಗಿ ಹೃದಯದ ಶಸ್ತ್ರಚಿಕಿತ್ಸೆ ಮಾಡುವುದು ಅಗತ್ಯಕ್ಕಿಂತ ಹೆಚ್ಚಾದ ಸಂದರ್ಭಗಳಲ್ಲಿ ಕಂಡುಬರುತ್ತದೆ. ಒಬ್ಬ ಡಾಕ್ಟರು ಗರ್ಭಕೋಶವನ್ನಾಗಲಿ, ಪಿತ್ತಾಶಯವನ್ನಾಗಲಿ ನಿರ್ಮೂಲ ಮಾಡಬೇಕೆಂದು ಅಭಿಪ್ರಾಯಪಟ್ಟ ಸಂದರ್ಭದಲ್ಲಿ ಇನ್ನೊಬ್ಬ ಡಾಕ್ಟರಿನ ಸಲಹೆ ಕೇಳಿದಾಗ ಅವನು ಪರೀಕ್ಷಿಸಿ ಅವು ಅನವಶ್ಯಕ ಎಂದು ಅಭಿಪ್ರಾಯ ಪಟ್ಟು ಬರಿ ಔಷಧಗಳನ್ನೆ ವಿಧಿಸಬಹುದು. ವಾಸ್ತವವಾಗಿ ಪಿತ್ತಾಶಯದಲ್ಲಿ ಅಶ್ಮರಿಗಳು (ಕಲ್ಲುಗಳು–gall stones) ಇದ್ದಾಗ ಶಸ್ತ್ರಕ್ರಿಯೆ ಅಗತ್ಯ ಎಂದು ಶಸ್ತ್ರತಜ್ಞರ ಸಾಮಾನ್ಯ ಅಭಿಪ್ರಾಯವಾಗಿತ್ತು. ಕೆಲವು ಸಂದರ್ಭಗಳಲ್ಲಿ ಔಷಧ ಕೊಟ್ಟು ಅಶ್ಮರಿಗಳನ್ನು ಕರಗಿಸಬಹುದು ಎಂದು ಈಗ ತಿಳಿದಿದೆ. ಥೈರಾಯ್ಡ್ ಗ್ರಂಥಿಯ ಕ್ರಿಯಾಧಿಕ್ಯ ಸ್ಥಿತಿಗೆ ಮೊದಲಿಗೆ ಶಸ್ತ್ರಕ್ರಿಯೆಯನ್ನೆ ವಿಧಿಸಲಾಗುತ್ತಿತ್ತು. ಈಚೆಗೆ ವಿಕಿರಣಪಟು ಐಯೋಡಿನ್ನನ್ನು ಬಳಸಿ ಗ್ರಂಥಿಯ ಕ್ರಿಯೆಯನ್ನು ತಹಬಂದಿಗೆ ತರುವುದು ರೂಢಿಗೆ ಬಂದಿದೆ.

ಶಸ್ತ್ರಕ್ರಿಯೆಯ ಸಲಹೆಯನ್ನು ಹಗುರ ಮನಸ್ಸಿನಿಂದ ಎಂದೂ ಒಪ್ಪಿಕೊಳ್ಳ ಬಾರದು. ಶಸ್ತ್ರಕ್ರಿಯೆಯ ಸಾಹಸಕ್ಕೆ ಈಡಾಗುವ ವ್ಯಕ್ತಿ—ಸಂವೇದನಾನಾಶದ (Anaesthesia) ಮತ್ತು ಆಸ್ಪತ್ರೆಯಲ್ಲಿರುವಾಗಿನ ಸಂಭಾವ್ಯ ಜಟಿಲತೆಗಳ ವಿಷಯವೂ ಹಾಗಿರಲಿ—ಶಸ್ತ್ರಕ್ರಿಯೆ ಅವಶ್ಯಕ ಎನ್ನುವ ವಿಷಯದಲ್ಲಿ ಶಸ್ತ್ರಕ್ರಿಯಾತಜ್ಞ ಹೇಳಿದ ಸಮಯಕ್ಕೆತೋಚಿದ ಮಾತುಗಳಿಗಿಂತ ಹೆಚ್ಚಾಗಿ ನಿಜವಾಗಿ ಮನಒಪ್ಪಿಸುವಂಥ ವಿವರಣೆ ಪಡೆಯಬೇಕು. ಇದಕ್ಕಾಗಿ ಇನ್ನೊಬ್ಬ ಮತ್ತೂ ಒಬ್ಬ ಶಸ್ತ್ರವೈದ್ಯನ ಅಭಿಪ್ರಾಯ ಪಡೆಯಬೇಕಾದ ಅಗತ್ಯ ಬಹುಮುಖ್ಯ.

ಶಸ್ತ್ರಕ್ರಿಯೆಯ ಫಲವಾಗಿ ಉದ್ಭವಿಸುವ ವೈದ್ಯಜನ್ಯರೋಗಗಳು ಹೆಚ್ಚುತ್ತಲೇ ಇವೆ. ಇದಕ್ಕೆ ಮೃತಪ್ರಾಯರಾದ ರೋಗಿಗಳಿಗೆ ಶಸ್ತ್ರಕ್ರಿಯೆ ಮಾಡುವುದನ್ನು ಮುಂದು ವರಿಸುತ್ತಲೇ ಇರುವುದು ಭಾಗಶಃ ಕಾರಣ. ಡಾಕ್ಟರುಗಳು ಶತಮಾನಗಳಿಂದಲೂ ಚಿಕಿತ್ಸಾಶಾಸ್ತ್ರದಲ್ಲಿ ವೇದವಾಕ್ಯದಂತೆ ಇರುವ ಮಾತನ್ನು—ಮೊತ್ತಮೊದಲಾಗಿ, ಏನು ಕೇಡನ್ನೂ ಮಾಡಬೇಡ ಎನ್ನುವುದನ್ನು—ಮರೆತುಬಿಟ್ಟಿರುವುದು ಭಾಗಶಃ ಕಾರಣ. ಹೆಚ್ಚು ಹೆಚ್ಚು ಚಿಕಿತ್ಸಾಕ್ರಮಗಳಲ್ಲ, ಕಡಿಮೆಕ್ರಮ ವಾಸಿ ಎನ್ನುವುದನ್ನು ಡಾಕ್ಟರುಗಳು ಕಲಿತಿಲ್ಲ. ಆದ್ದರಿಂದ ರೋಗಿಗಳೇ ತಮ್ಮ ಸ್ವಂತಕ್ಕೆ ಅನ್ವಯಿಸುವಷ್ಟಾದರೂ ರೋಗದ ವಿಷಯ ತಿಳಿದುಕೊಳ್ಳುವುದು ಅಗತ್ಯ. ನೀವು ಈ ಬಗ್ಗೆ ಮಾಡಬಹುದಾದ್ದನ್ನು ಈ ಕೆಳಗೆ ಸೂಚಿಸಿದೆ:

೧. ಆರೋಗ್ಯವನ್ನು ಹಾಳು ಮಾಡುವ ದುರಭ್ಯಾಸಗಳನ್ನು ತ್ಯಜಿಸಲು ಔಷಧಿಗಳ ಶರಣು ಹೋಗುವುದರ ಬದಲು ಸಾಮಾನ್ಯ ವಿವೇಕದಂತೆ (Common

sense) ನಡೆದುಕೊಂಡು ಆರೋಗ್ಯವನ್ನು ಪುನಃ ಪಡೆದು ಕಾಪಾಡಿಕೊಳ್ಳುವುದು.

೨. ವೈದ್ಯಚಿಕಿತ್ಸೆ ಅಗತ್ಯವೇ ಆದರೆ ವಿಷಯಗ್ರಹಣ ಮಾಡಿಕೊಂಡು ವೈದ್ಯನೊಡನೆ ಯುಕ್ತವಾಗಿ ವಾದಿಸಲು ಸಮರ್ಥರಾದ ಸ್ವವಕೀಲರಾಗಿರಿ. ನಿಮ್ಮ ಮನಸ್ಸಿಗೆ ಅನವಶ್ಯಕವೆಂದು ತೋರಿದ ಎಕ್ಸ್‌ರೇ ಚಿತ್ರಣವನ್ನಾಗಲಿ, ಚಿಕಿತ್ಸೆಯನ್ನಾಗಲಿ, ಇತರ ತನಿಖೆ ಹಾಗೂ ಚಿಕಿತ್ಸಾಕ್ರಮವನ್ನಾಗಲಿ ಒಲ್ಲದೇ ಇರುವುದು ನಿಮ್ಮ ಹಕ್ಕು. ಅನುಮಾನ ಪರಿಹಾರಕ್ಕಾಗಿ ನೀವು ವಾದಮಾಡುವುದನ್ನು ಡಾಕ್ಟರು ಅನುಮೋದಿಸದಿದ್ದರೆ ಅವರನ್ನು ಬಿಟ್ಟು ನಿಮ್ಮ ಚಿಕಿತ್ಸಾಕ್ರಮವನ್ನು ರೂಪಿಸಲು ನೀವೂ ಭಾಗಿಯಾಗುವುದನ್ನು ಒಪ್ಪುವ ಡಾಕ್ಟರಲ್ಲಿ ಚಿಕಿತ್ಸೆ ಪಡೆಯಿರಿ.

೩. ವಿಧಿಸಿರುವ ಔಷಧದ ಹೆಸರೇನು ; ಅದರ ನಿರೀಕ್ಷಿತ ಕ್ರಿಯೆ ಏನು ; ಅದು ಯಾವ ಅಡ್ಡ ಪರಿಣಾಮಗಳನ್ನು ಉಂಟುಮಾಡೀತು ; ನೀವು ಸೇವಿಸುತ್ತಿರುವ ಇತರ ಮದ್ದುಗಳೊಡನೆ ಅದು ಏನಾದರೂ ಪ್ರತಿಕ್ರಿಯೆ ಉಂಟುಮಾಡೀತೆ ; ಎಂದೆಲ್ಲ ವಿಚಾರಿಸಿ ತಿಳಿದುಕೊಳ್ಳಿ. ವೈಯಕ್ತಿಕವಾಗಿ ಯಾವುದಾದರೂ ಮದ್ದು ನಿಮಗೆ ಒಗ್ಗದೇ ಇದ್ದರೆ ಅದನ್ನು ಡಾಕ್ಟರಿಗೆ ತಿಳಿಯಹೇಳಿ. ಅತ್ಯಂತ ಅವಶ್ಯಕವಾದ ಮದ್ದುಗಳನ್ನು ಮಾತ್ರ ಬಳಸಿ.

೪. ಡಾಕ್ಟರು ಸೂಚಿಸುವ ವಿಶೇಷ ತನಿಖೆ, ಎಕ್ಸ್‌ರೇ ಇವುಗಳಿಂದ ಆತನಿಗೆ ಏನು ಮಾಹಿತಿ ದೊರೆಯುತ್ತದೆ ಎನ್ನುವುದನ್ನೂ, ಅವುಗಳಿಂದಾಗುವ ಪ್ರಯೋಜನ, ಕೇಡು ಮತ್ತು ಅವುಗಳ ವೆಚ್ಚವನ್ನೂ ತಿಳಿದುಕೊಳ್ಳಿ. ಈ ತನಿಖೆಗಳನ್ನು ಮಾಡಿಸದಿದ್ದರೆ ಏನಾಗುತ್ತದೆ, ಬದಲಿ ಕ್ರಮಗಳು ಇವೆಯೆ ವಿಚಾರಿಸಿ.

೫. ಶಸ್ತ್ರಕ್ರಿಯೆ ಆಗಬೇಕೆಂದು ಹೇಳಿದಾಗ ಏಕೆ ಎಂದು ವಿಚಾರಿಸಿ. ಶಸ್ತ್ರಕ್ರಿಯೆಯ ಬದಲು ಬೇರೆ ಚಿಕಿತ್ಸಾಕ್ರಮಗಳಿವೆಯೆ, ಈ ಶಸ್ತ್ರಕ್ರಿಯೆ ಎಷ್ಟುಮಟ್ಟಿಗೆ ಬಳಕೆಯಲ್ಲಿದೆ, ಶಸ್ತ್ರಕ್ರಿಯೆ ಮಾಡುವವ ಅನುಭವಸ್ಥ ಶಸ್ತ್ರಜ್ಞನೇ. ಆತ ಈ ಮಾದರಿಯ ಶಸ್ತ್ರಕ್ರಿಯೆಯನ್ನು ಎಷ್ಟು ಬಾರಿ ಮಾಡಿದ್ದಾನೆ ಎಂಬುದನ್ನು ವಿಚಾರಿಸಿ. ಬೇರೆ ಆಸ್ಪತ್ರೆಯ ಶಸ್ತ್ರತಜ್ಞನ ಅಭಿಪ್ರಾಯವನ್ನೂ ಪಡೆಯಿರಿ. ಈ ಎರಡನೆಯ ಅಭಿಪ್ರಾಯ ಬರವಣಿಗೆಯಲ್ಲಿರಲಿ.

ನೀವು ನಿಮ್ಮ ಡಾಕ್ಟರಿನ ಸಂಗಡ ಇಂಥ ಸಂಪರ್ಕಪಡೆದಷ್ಟೂ ನಿಮ್ಮ ಮತ್ತು ನಿಮ್ಮ ಕುಟುಂಬದ ಆರೋಗ್ಯ ಹೆಚ್ಚಾಗುತ್ತದೆ. ನಿಮ್ಮಂತೆ ಹಲವಾರು ಜನ ಈ ನಡೆವಳಿಕೆಯನ್ನು ರೂಢಿಸಿಕೊಂಡರೆ ಸರ್ವರಿಗೂ ಅನುಕೂಲವಾದೀತು.

ಅನು : ಎಸ್. ರಾಮರಾವ್

ಪ್ರಕೃತಿಯ ಅಮೂಲ್ಯ ರತ್ನಾಭರಣಗಳ ಶೋಧನೆಯಲ್ಲಿ

ಬಾರ್‌ಬಾರಾ ವೋನಾರ್‌ಬರ್ಗ್

ಪರ್ವತಾರೋಹಿ ಪಾಲ್‌ವೆಮ್‌ಬ್ರಿನಿ ಎಂಬಾತ ಯೂರಿ ಬ್ರಿಸ್ಟೈನ್‌ಸ್ಟಾಕ್‌ನ ಕಡಿದಾದ ಕೋಡುಗಲ್ಲಿನ ತುದಿಯಿಂದ ಹಗ್ಗ ಹಿಡಿದುಕೊಂಡು ಎಡಕ್ಕೂ ಬಲಕ್ಕೂ ತೂಗುಯ್ಯಾಲೆಯಾಡುತ್ತಿದ್ದಾನೆ. ಕೋಡುಗಲ್ಲನ್ನು ಧೈರ್ಯದಿಂದ ತಾನೊರ್ವನೆ ಏರುವನು. ಹತ್ತು ದಿನಗಳಿಂದಲೂ ಈ ಪ್ರದೇಶದಲ್ಲಿ ಕೋಡುಗಲ್ಲುಗಳನ್ನು ಏರುತ್ತ, ಶಿಲೆಗಳ ಮೇಲೆ ಕ್ಷ-ಕಿರಣ ಬೀರುತ್ತ ಇದ್ದಾನೆ—ಆದರೆ ಎಲ್ಲ ನಿಷ್ಫಲ. ಅನಂತರ ಅವನು ಲೋಹವನ್ನೊಳಗೊಂಡ ಪದರ ಏರಿದಂತೆ ಬಂಡೆಯಲ್ಲಿ ಒಂದು ಸೀಳು ಗುರುತಿಸುವನು. ಅದನ್ನು ಅಗಲಿಸಿದಂತೆಲ್ಲ ಬಹು ಸುಂದರವಾಗಿ ತಿರುಚಿಕೊಂಡಂತೆ ಜೋಡಣೆಯಾಗಿರುವ ಥಳಥಳ ಮಿನುಗುವ ಬೆಣಚುಕಲ್ಲು ಅವನ ಕಣ್ಣನ್ನು ಕೋರೈಸುತ್ತದೆ. ಹತ್ತು ಮಿಲಿಯನ್ ವರುಷಗಳಿಂದ ಕತ್ತಲೆಯಲ್ಲಿ ಬಿದ್ದಿರುವ ಸ್ಫಟಿಕವನ್ನು ಕೈಯಲ್ಲಿ ಹಿಡಿಯುವವರಲ್ಲಿ ನಾನೇ ಮೊದಲಿಗನಾಗಬೇಕಾದರೆ ಅದೆಂತಹ ಭವ್ಯ ಸಂವೇದನಾನುಭವ ಮನಸ್ಸಿಗೆ ಆಗಬಹುದು!" ಎಂದೆನ್ನುತ್ತಾನೆ.

ಇಂತಹ ನಿಕ್ಷೇಪಗಳನ್ನು ಅರಸಿಕೊಂಡು ವಾರಾಂತ್ಯದಲ್ಲಿ ಹೆಚ್ಚು ಹೆಚ್ಚು ಬೇಟೆಗಾರರು ದೂರದ ಆಲ್‌ಪೈನ್ ಪ್ರದೇಶವನ್ನು ಪರಿಶೋಧಿಸುತ್ತಿರುತ್ತಾರೆ. ಪ್ರಸಕ್ತ, ೩೦೦೦ ಸದಸ್ಯರುಳ್ಳ, ಸ್ವಿಸ್ ಅಶೋಷಿಯೇಶನ್‌ನ ಹವ್ಯಾಸಿ ಪರಿಶೋಧಕರ ಸಂಸ್ಥೆ, ೨೧ ವರುಷಗಳ ಹಿಂದೆ ಸ್ಥಾಪನೆಯಾಯಿತು. ಖನಿಜಗಳ ವಿನಿಮಯ, ಅಂದರೆ ಸ್ಫಟಿಕಗಳ ಮಾರಾಟ ಹಾಗೂ ವ್ಯಾಪಾರದ ವಹಿವಾಟುಗಳು ಸ್ವಿಜರ್ಲೆಂಡಿನ ಮೂಲಕ ವೃದ್ಧಿಸಿವೆ. ಸಾವಿರಾರು ಶಿಲೆಗಳು,

---

೧೯೮೮ ರ ಜನವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಬಾರ್‌ಬಾರಾ ವೋನಾರ್‌ಬರ್ಗ್ ಅವರ "ಇನ್ ಸರ್ಚ್ ಆಫ್ ನೇಚರ್ಸ್ ಜ್ಯೂವೆಲ್ಸ್" ಲೇಖನದ ಅನುವಾದ.

ಕಡಿಮೆ ಬೆಲೆಯ ಸ್ಫಟಿಕಗಳಿಂದಿಡಿದು ಸಾವಿರಾರು ಫ್ರಾಂಕ್ಸ್ (೧ ಫ್ರಾಸಕ್ = ರೂ. ೮) ಬೆಲೆ ಬಾಳುವ ಅಮೆತಿಸ್ಟ್‌ವರೆಗೆ ಕೈಬದಲಾವಣೆಯಾಗುತ್ತಿವೆ.

ಭಾರೀ ಬೇಡಿಕೆ: ಸ್ಫಟಿಕಗಳ ಅನ್ವೇಷಣೆ ಒಂದು ಪ್ರಾಚೀನ ಕಲೆ. ಈಗಿನ ವಲೈಸ್ ಹಾಗೂ ಬೆರ್ನ್ ಜಿಲ್ಲೆಗಳಲ್ಲಿನ ಶಿಲಾಯುಗದ ಬೇಟೆಗಾರರು ಬಾಣದ ತುದಿಗೆ ಸ್ಫಟಿಕದ ಅಲಗನ್ನು ಬಳಸುತ್ತಿದ್ದರು. ಈ ಶಿಲಾ ಸ್ಫಟಿಕಗಳು ಕರಗದ ನಿರ್ಗಲ್ಲುಗಳಿಂದು ಅರಿವಿಗೆ ಯಾವಾಗ ಬಂದಿತೋ, ಅಂದಿನಿಂದ ಬಹು ಕಲಾತ್ಮಕವಾದ ಹೂಜಿಗಳು, ಸುಂದರ ಲೋಟಗಳು, ಹೂದಾನಿಗಳು ಹಾಗೂ ಆಭರಣಗಳು ಪ್ರಾಚೀನ ಕಾಲದಿಂದ ಕೈಯಿಂದ ಕೈಗೆ ಬದಲಾಗುತ್ತ ಬಂದಿವೆ. ತಾಯಿತಗಳಾಗಿ, ಧರಿಸಲ್ಪಡುವ ಈ ಕಣ್ ಕೋರೈಸುವ ಖನಿಜಗಳು, ಮಾರಿಕಣ್ಣು ದೋಷ, ವಸಡು ನೋವು ಹಾಗೂ ತಲೆ ಸುತ್ತುವಿಕೆಯನ್ನು ನಿವಾರಿಸುತ್ತದೆ ಎಂದು ಪ್ರತೀತಿ. ಪುಡಿಮಾಡಿ ಜೇನುತುಪ್ಪದೊಂದಿಗೆ ಬೆರೆಸಿದ ಸ್ಫಟಿಕ ಶಿಲೆಗಳನ್ನು ಹಾಲೂಡಿಸುವ ತಾಯಂದಿರಿಗೆ ಹಾಗೂ ಮೂರ್ಛೆ ರೋಗ ಬರುವವರಿಗೆ ಶಿಫಾರಸ್ಸು ಮಾಡುತಿದ್ದರು. ಅಮೆತಿಸ್ಟ್, ಕುಡುಕುತನದ ದುಷ್ಟಟವನ್ನು ನಿವಾರಿಸುತ್ತದೆ ಎಂದು ಹೇಳಲಾಗುತ್ತದೆ. ಸ್ಫಟಿಕದ ಚೆಂಡುಗಳು ಭವಿಷ್ಯ ಹೇಳಲು ಸಹಕಾರಿಯೆಂದು ಪ್ರತಿಯೋರ್ವ ಜ್ಯೋತಿಷ್ಯಗಾರನ ನಂಬಿಕೆ. ವಲಾಯ್ಸಿ ಪ್ರಾಂತದ ರೀಡ್‌ವಾಸಿ ಟೋನಿ ಇವಲ್ ಹಾಫ್ "ಸ್ಫಟಿಕದ ಚೆಂಡುಗಳಿಗೆ ನಾನು ಈಗಲೂ ಬೇಡಿಕೆಗಳನ್ನು ಸ್ವೀಕರಿಸುತ್ತಿದ್ದೇನೆ" ಎನ್ನುತ್ತಾನೆ. ಸೀಳಿಲ್ಲದ ೧೦ ಸೆಂ. ಮೀ. ಸುತ್ತಳತೆಯ ಸ್ಫಟಿಕ ಶಿಲೆಯ ಚೆಂಡು ಇಂದು ೧೦,೦೦೦ ಫ್ರಾಂಕ್‌ಗಳಿಗಿಂತಲೂ ಹೆಚ್ಚು ಬೆಲೆ ಬಾಳುತ್ತದೆ.

೧೬ ರಿಂದ ೧೮ ನೇ ಶತಮಾನದಲ್ಲಿ ಕುಶಲಕರ್ಮಿಗಳಿಂದ ಮದ್ಯದ ಬಟ್ಟಲು, ಹೂದಾನಿ, ಗೊಂಚಲು ದೀಪಾ–ಹಾಗೂ ಅಂಗಿಯ ಗುಂಡಿಗಳನ್ನು ತಯಾರಿಸಲು ಸ್ಫಟಿಕಶಿಲೆಗೆ ಭಾರಿ ಬೇಡಿಕೆ ಇತ್ತು. ಯಾವಾಗ ೧೮ ನೇ ಶತಮಾನದಲ್ಲಿ ಸೀಸದ ಸ್ಫಟಿಕಗಳನ್ನು ಕೃತಕವಾಗಿ ಸೃಷ್ಟಿಸುವ ಕಲೆ ಕರಗತವಾಯಿತೋ ಹಾಗೂ ಅಗ್ಗದ ಬೆಲೆಯ ಬ್ರೆಜಿಲಿಯನ್ ಸ್ಫಟಿಕಗಳು ಯೂರೋಪ್‌ನ್ನು ತಲುಪಿದವೋ ಅಂದಿನಿಂದ ಆಲ್‌ಫೈನ್ ಬೆಣಚುಕಲ್ಲು ಕಚ್ಚಾ ವಸ್ತುವಾಗಿ ತನ್ನ ಪ್ರಾಮುಖ್ಯವನ್ನು ಕಳೆದುಕೊಂಡಿತು. ಆದರೆ ಪುನಃ ೧೮೬೮ ರಲ್ಲಿ "ಸ್ಫಟಿಕ ಜ್ವರ" ಹಸ್ಲಿ ಕಣಿವೆಯಲ್ಲಿ ತಲೆದೋರಿತ . ಆಗ ಗುಟ್ಟೆನಾನ್‌ನ ಬೆರ್ನಿಸ್ ಗ್ರಾಮದ ನಾಲ್ವರು ಅನ್ವೇಷಕರು ಟ್ರೈಫೆನ್‌ನ ಹಿಮನದಿಯ ಮೇಲ್ಭಾಗದಲ್ಲಿ ಬೆಣಚುಕಲ್ಲಿನ ಗುಹೆಯೊಂದನ್ನು ಆವಿಷ್ಕರಿಸಿದರು. ಇಲ್ಲಿ ದೊರೆತ ಅತಿದೊಡ್ಡ ಸ್ಫಟಿಕ ೬೯ ಸೆಂ. ಮೀ. ಎತ್ತರ, ೧೩೩ ಕಿ. ಮೀ. ತೂಕವಿದ್ದು ಈಗ ಅದು ಬುಡಾಪೆಸ್ಟ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಜಿಯಮ್‌ನಲ್ಲಿದೆ.

ದಿಗ್ಭ್ರಮೆಗೊಳಿಸುವ ಅಪೂರ್ವ ವಸ್ತು: ೧೦ ರಿಂದ ೧೫ ಮಿಲಿಯನ್ ವರುಷಗಳ ಹಿಂದೆ ಭೂಗರ್ಭದಲ್ಲಿ ದೈತ್ಯಶಕ್ತಿ ಗುಡುಗಿ ಆಲ್ಫ್ಸ್ ಪರ್ವತಗಳು ಉದ್ಭವಗೊಂಡಾಗ ಸ್ವಿಜರ್ಲೆಂಡಿನ ಸ್ಫಟಿಕಗಳು ಸೃಷ್ಟಿಯಾದವು. ಶಿಲೆಗಳ ತಗ್ಗಿನ ಭಾಗದಲ್ಲಿ ಶೇಖರಣೆಯಾದ ಅಪಾರ ಉಷ್ಣತೆಯ ನೀರು, ಖನಿಜಗಳನ್ನು ನೆನಸಿ ಅಸಂಖ್ಯ ಜ್ಯಾಮಿತಿ ಆಕಾರದ ಸ್ಫಟಿಕಗಳ ರಚನೆಗೆ ಕಾರಣವಾಯಿತು.

ಆಲ್ಪ್ಸ್ ಪರ್ವತದ ಸರ್ವೇ ಸಾಧಾರಣ ಖನಿಜ ಬೆಣಚುಕಲ್ಲು. ಪಾರದರ್ಶಕ ವಾದ ಇದು ಸ್ಫಟಿಕ ರೂಪದಲ್ಲಿ ದೊರೆಯುತ್ತದೆ. ಸುಂದರವಾದ ಅಡುಲೇರಿಯ, ಶ್ವೇತವರ್ಣದ ಮಿರುಗುವ ಸ್ಫಟಿಕ ಅಮಿಯರ್ಥಸ್, ರೇಷ್ಮೆಯಂತೆ ನವಿರಾದ, ಶುಭ್ರತೆಯ, ಸೂಕ್ಷ್ಮ ಬಲೆಯ, ಮೊನಚಾದ ಸೂಜಿ ಸ್ಫಟಿಕಗಳು ಹಾಗೂ ಹಳದಿ ಮೈಕಾ ಅಥವಾ ಐರನ್ ಪೈರೈಟ್ ಬಗ್ಗೆ ಹೆಚ್ಚು ತಿಳಿದು ಬಂದಿಲ್ಲ. ಟಿಸಿನೋ ಬಳಿಯ ಮಗ್ಗಿ ವಿದ್ಯುತ್ ಸ್ಥಾವರದ ಸುರಂಗದಲ್ಲಿ ಓರ್ವ ಗಣಿ ಕಾರ್ಮಿಕ ಕಣ್‌ಕೋರೈಸುವ ಸುವರ್ಣ ಛಾಯೆಯ ಒಂದು ಘನಾಕೃತಿಯನ್ನು ಕಂಡು ಅದನ್ನು ಜೇಬಿಗೆ ಇಳಿಸಿದ. ದಿಗ್ಭ್ರಮೆಗೊಳಿಸುವ ಈ ಅಪೂರ್ವ ವಸ್ತುವನ್ನು ಅನಂತರ ತಜ್ಞನೋರ್ವ ಕೊಂಡು ಕೊಂಡ. ಇಂದು ಇದು ಬೆರ್ನ್‌ನ ನ್ಯಾಚುರಲ್ ಹಿಸ್ಟರಿ ಮ್ಯೂಜಿಯಮ್‌ನಲ್ಲಿ ಪ್ರದರ್ಶನಕ್ಕಿಟ್ಟಿದೆ.

ಸ್ವಿಸ್ ಪರ್ವತಗಳು ಗುಲಾಬಿ ಆಕಾರವಿರುವ ಫೆರಸ್ ಆಕ್ಸೈಡ್, ನಸು ಪಿಂಕ್ ಛಾಯೆ ಅಥವಾ ಕೆಂಪುವರ್ಣದ ಫ್ಲೂರ್‌ಸ್ಪಾರ್ ಮತ್ತು ತೆಕ್ಕೆಯಂತೆ ಹೆಣೆದಿರುವ 'ಗ್ವೆಂಡೆಲ್' ಎಂಬ ಸುಂದರ ಬೆಣಚುಕಲ್ಲಿನ ಸ್ಫಟಿಕಗಳ ನಿಕ್ಷೇಪದ ಬೀಡು. ಈ ಬೀಡು ಬಿಟ್ಟು ಬೇರೆಲ್ಲಿಯೂ ಇವು ದೊರೆಯಲಾರವು. ೧೯೭೪ ರಲ್ಲಿ ಒಬರ್‌ಹಾಸ್ಲಿ ವಿದ್ಯುತ್ ಸ್ಥಾವರದ ಸುರಂಗವನ್ನು ತೋಡುವಾಗ ಕಾರ್ಮಿಕರು ನೂರಾರು ನಯನ ಮನೋಹರ ಸ್ಫಟಿಕ ಹಾಗೂ ಗುಲಾಬಿ ವರ್ಣದ ಫ್ಲೂರ್‌ಸ್ಪಾರ್‌ಗಳಿಂದ ಅಡಕಗೊಂಡ ಗುಹೆಯೊಂದನ್ನು ಕಂಡರು. ಬೆರ್ನ್‌ನ ಪ್ರಾಂತೀಯ ಸರ್ಕಾರ ಈ ಗುಹೆಯನ್ನು ಸಂರಕ್ಷಣೆಯಲ್ಲಿಟ್ಟಿತು. ಸರ್ಕಾರದ ಧನಸಹಾಯ ಮತ್ತು ಸಾರ್ವಜನಿಕ ವಂತಿಗೆಗಳು ಮತ್ತೊಂದು ಸಮಾನಾಂತರ ಸುರಂಗದ ನಿರ್ಮಾಣಕ್ಕೆ ಸಹಕಾರಿಯಾದವು. ಬಾಯಿ ಮೇಲೆ ಬೆರಳಿಡುವಂತೆ ಆಶ್ಚರ್ಯವುಂಟುಮಾಡುವ "ಸ್ಫಟಿಕದ ಅರಮನೆ"ಯನ್ನು ನೋಡಲೆಂದೇ ತೆರೆದಿಟ್ಟಿರುವ ಎರಡು ಕಿಟಕಿಗಳೆಡೆ ಈ ಸುರಂಗ ಮಾರ್ಗ ಸಾಗುತ್ತದೆ.

ಹಿಂದಿನ ಕಾಲದಲ್ಲಿ ಪರ್ವತವಾಸಿಗಳಿಗೆ ಸ್ಫಟಿಕಗಳ ಬೇಟೆಯು ಒಂದು ಒಳ್ಳೆ ಆದಾಯದ ಮೂಲವಾಗಿತ್ತು. ಈ ದಿನ ಅವುಗಳು ಕಣ್ಣಿಗೆ ಬೀಳುವುದೇ ತುಂಬಾ ಅಪರೂಪ. ಆದ್ದರಿಂದ ಅನ್ವೇಷಣಕಾರರಿಗೆ ಇದೊಂದು ಜಿಗುಟುತನದ ಕ್ರಿಯೆ. ಪಾಲ್ ಮೆಮ್‌ಬ್ರಿನಿ ಒಮ್ಮೆ ೬ ವಾರಗಳನ್ನು ಡಿಸೆಂಟಿಸ್‌ನ ಉತ್ತರಕ್ಕೆ ೩೭೦೦ ಮೀ. ಎತ್ತರದ ಚೊಗಿಲ್‌ಸ್ಟಾಕ್ ಪ್ರದೇಶದಲ್ಲಿ ನಿಂತು ಗ್ರಾನೈಟ್ ಶಿಲೆಗಳನ್ನು ಅರಸುತ್ತ ಕಳೆದ. ಮಂಜಿನ ಹೊದಿಕೆಯ ಮೇಲೆ ತಾನೇ ನೆಟ್ಟಿದ್ದ ಪುಟ್ಟ ಟೆಂಟಿನಲ್ಲಿ ರಾತ್ರಿ ಮಲಗುತ್ತಿದ್ದ. ಪ್ರಯೋಜನಕಾರಿಯಾದ ಏನನ್ನಾದರೂ ಶೋಧಿಸುವ ಮುನ್ನವೇ ಚಳಿಗಾಲ ಬಂದದ್ದರಿಂದ ಆ ಜಾಗವನ್ನು ಖಾಲಿಮಾಡಬೇಕಾಯಿತು. "ಆದರೆ ಸೋಲನ್ನು ಬಹುಬೇಗ ಪ್ರತಿಯೋರ್ವನು ಮರೆಯುತ್ತಾನೆ. ಹಿಂಜರಿತಕ್ಕಿಂತ ಆಶಾಜನಕ ಸೆಲೆಯೊಂದರ ಪತ್ತೆ ಹೆಚ್ಚು ಶಕ್ತಿಯುತವಾದದ್ದು" ಎನ್ನುತ್ತಾನೆ ಪಾಲ್.

ಅನುಭವ, ತೀಕ್ಷ್ಣದೃಷ್ಟಿ ಹಾಗೂ ದೃಢ ವಿಶ್ವಾಸವೇ ಜಯದ ಸೋಪಾನ. "ಜೊತೆಗೆ ಅದೃಷ್ಟವೂ ಸಹ ಕೂಡಿಬರಬೇಕು" ಎಂದು ಸೇರಿಸುತ್ತಾನೆ ಅರ್ನೆಸ್ಟ್ ರೂಪಿಬಚ್, ೩೦ ವರುಷಗಳಿಂದ ತನ್ನ ಬಿಡುವಿನ ವೇಳೆಯಲ್ಲಿ ಸ್ಫಟಿಕಗಳ ಬೇಟೆಯಲ್ಲಿ

ತೊಡಗಿರುವ ಈತ. "ಅದೊಂದು ಸ್ಥಳವನ್ನು ಕಡಿಮೆ ಎಂದರೆ ೨೦ ಸಾರಿ ದಾಟಿದ್ದೇನೆ. ಒಂದು ಸಾರಿ, ಇದ್ದಕ್ಕಿದ್ದಂತೆ ಬಿಸಿಲಿನಲ್ಲಿ ಏನೋ ಒಂದು ಫಳೀರನೇ ಹೊಳೆದಂತಾಯಿತು" ಎಂದು ನೆನಪಿಸಿಕೊಳ್ಳುವ ಅವನು "ನಾನಾಗ ನಯನ ಮನೋಹರವಾದ ಪೆರಸ್ ಆಕ್ಸೈಡ್–'ಗುಲಾಬಿ'ಯನ್ನು ಕೈಯಲ್ಲಿ ಹಿಡಿದು ನಿಂತಿದ್ದೆ ಅಲ್ಲಿ"!

ಒಮ್ಮೊಮ್ಮೆ, ಈ ಸಿರಿಯ ಬೇಟೆ ಪ್ರಾಣಕ್ಕೆ ಕುತ್ತನ್ನೇ ಒಡ್ಡಬಲ್ಲದು. ೧೯೭೧ ರಲ್ಲಿ ಇಬ್ಬರು ಅನ್ವೇಷಣಕಾರರು ೩೦೦ ಕಿಲೋ ತೂಕದ ಅಮೆಥಿಸ್ಟ್‌ನ್ನು ಗ್ರಿಮಸೆಲ್ ಸರೋವರದ ಉತ್ತರಕ್ಕೆ ೮೦೦ ಮೀ. ಎತ್ತರದಲ್ಲಿರುವ ಜಿಂಗೆನ್‌ಸ್ಟಾಕ್‌ನಿಂದ ಸಾಗಿಸುವಾಗ ಭಾರಿ ದುರಂತಕ್ಕೆ ಈಡಾದರು. ಸಡಿಲಗೊಂಡ ಶಿಲಾ ಬಂಡೆಯೊಂದು ಇದ್ದಕ್ಕಿದ್ದಂತೆ, ಉರುಳಿ ಅನ್ವೇಷಣೆಕಾರರಲ್ಲಿ ಓರ್ವನನ್ನು ಹಾಗೂ ಅವನ ಅವಳಿ ಮಕ್ಕಳು ಮತ್ತು ಇಬ್ಬರು ಸಹಾಯಕರನ್ನು ಬಲಿ ತೆಗೆದುಕೊಂಡಿತು.

ಇಂದು ಈ ಅವಗಢಗಳ ನಡುವೆಯೂ ಇನ್ನೂ ಅನೇಕ ಅನ್ವೇಷಣೆಕಾರರು ಪರ್ವತಗಳ ಕೋಡುಗಳನ್ನೇರುವ ದುಸ್ಸಾಹಸ ಮಾಡುತ್ತಿದ್ದಾರೆ. ನಿಮ್ಮ ಕೈಯಲ್ಲಿ ಕೂಲ್ ಸ್ಟೋನ್‌ವೊಂದನ್ನು ಹಿಡಿದುಕೊಳ್ಳಿ. ಅದರ ನಯವಾದ ಭಾಗದ ಮೇಲೆ ಕೈಯಾಡಿಸಿ ಸೂರ್ಯನ ಬಿಸಿಲಿನಲ್ಲಿ ಬೆಳಕು ಮತ್ತು ಬಣ್ಣ ಪರಸ್ಪರ ಪ್ರಭಾವ ಬೀರಿ ಸ್ಫಟಿಕವು ಮಿನು ಮಿರುಗುವುದನ್ನು ಅವಲೋಕಿಸಿ. ಆಗ ನೀವು ಅದರ ಅಸಾದೃಶ್ಯ ಸೌಂದರ್ಯಕ್ಕೆ ಮನಸೋತು ಮಂತ್ರ ಮುಗ್ಧರಾಗುವಿರಿ, ಹಾಗೂ ಆಗ ನಿಮಗೆ ಆಲ್ಫ್ಸ್ ಪರ್ವತದಲ್ಲಿ ಗೋಚರಿಸದ ನಿಕ್ಷೇಪವನ್ನು ಹುಡುಕಲು ಉತ್ಸುಕರಾಗಿರುವ ಅಸಂಖ್ಯಾತ ಅನ್ವೇಷಕರ ಉತ್ಸಾಹ ನಿಮಗೆ ಅರಿವಾಗುವುದು.

ಅನು : ಎಸ್. ಎನ್. ಲಕ್ಷ್ಮೀಪತಿ

ನಮ್ರತೆಯು ಅಹಿಂಸೆಯ ಒಂದು ಅಂಗ.

ಗಾಂಧೀಜಿ

ಸಂಕಟ ಬಂದಾಗ...

ಆ್ಯನ್ ಕೈಸರ್ ಸ್ಟೆರ್ನ್ಸ್

ನಮ್ಮಲ್ಲಿ ಬಲುಮಟ್ಟಿಗೆ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಮಹತ್ವದ ಯಾವುದಾದರೂ ಸಂಕಟಕ್ಕೆ ಈಡಾಗುತ್ತಾರೆ; ನಷ್ಟವನ್ನು ಅನುಭವಿಸುತ್ತಾರೆ. ಬದುಕಿನಲ್ಲಿ ಇದು ಸಹಜವೂ ಹೌದು. ಐವತ್ತೈದು ವರ್ಷ ವಯಸ್ಸಿನವರೊಬ್ಬರು ಹೃದಯಾಘಾತಕ್ಕೆ ಈಡಾಗಿ, ಮುಂದೆ ತಮ್ಮ ಜೀವನ ವಿಧಾನವನ್ನೇ ಬದಲಿಸಬೇಕಾಗಿ ಬಂದಾಗ, ಹಿಂದಿನ ಜೀವನವನ್ನು ಜ್ಞಾಪಿಸಿಕೊಂಡು, ಯಾವುದೋ ಕೊರತೆಯ ಅನುಭವದಿಂದ ವ್ಯಥಿಸಬಹುದು; ಮುದ್ದು ಮಗುವನ್ನು ಕಳೆದುಕೊಂಡ ತಂದೆತಾಯಿಗಳು, ಅತ್ಯಂತ ಅಮೂಲ್ಯ ಪದಾರ್ಥದಿಂದ ಒಮ್ಮೆಲೆ ವಂಚಿತರಾದಂತೆ, ಅತೀವ ಸಂಕಟ ಪಡಬಹುದು; ಅಥವಾ ಯಾವುದೇ ವಯಸ್ಸಿನ ವ್ಯಕ್ತಿ, ವಿಚ್ಛೇದನ ಅಥವಾ ಸಾವಿನ ಕಾರಣವಾಗಿ ತನ್ನ ಪತಿ ಅಥವಾ ಪತ್ನಿಯಿಂದ ಅಗಲಿದಾಗ, ತನ್ನನ್ನೇ ಯಾರೋ ಸಂಪೂರ್ಣವಾಗಿ ದರೋಡೆ ಮಾಡಿದಷ್ಟು ಮಟ್ಟಿಗೆ ನೋವನ್ನು ಅನುಭವಿಸಬಹುದು. ಇಂಥ ಸಂಕಟದ ಸಂದರ್ಭಗಳಲ್ಲಿ, ನಮಗೆ ನಾವೇ ಸಮಾಧಾನ ಹೇಳಿಕೊಂಡು, ದುಃಖವನ್ನು ಮರೆತು ಹೊಸ ಬದುಕು ಸಾಗಿಸುವ ಕೌಶಲವಿರುವವರು ಕೆಲವರು ಮಾತ್ರ.

ಸಂಕಟವೆಂದರೇನೆಂಬುದರ ಬಗ್ಗೆ ನಮ್ಮಲ್ಲಿ ಅನೇಕರಿಗೆ ಸರಿಯಾದ ಅರಿವೇ ಇಲ್ಲ. ನಮ್ಮ ಕಾಲೇಜಿನಲ್ಲಿನ ಒಂದು ಘಟನೆಯನ್ನೇ ಕೇಳಿ. 'ಹೆಂಡತಿಯಿಂದ ವಿಚ್ಛೇದನ ಪಡೆದ ತನ್ನ ಚಿಕ್ಕಪ್ಪ ತುಂಬ ವ್ಯಥಿತನಾಗಿರುವುದರ ಬಗ್ಗೆ' ನನ್ನ ವಿದ್ಯಾರ್ಥಿಯೊಬ್ಬ ಆತಂಕ ವ್ಯಕ್ತಪಡಿಸಿದ. ಅವನ ಚಿಕ್ಕಪ್ಪ, ತನ್ನಿಂದ ವಿಚ್ಛೇದನ ಪಡೆದ ಹೆಂಡತಿಯ

೧೯೮೬ನೆಯ ಡಿಸೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಆ್ಯನ್ ಕೈಸರ್ ಸ್ಟೆರ್ನ್ಸ್ ಅವರ "ಹೌ ಟು ಲೀವ್ ಥ್ರೂ ಲಾಸ್" ಎಂಬ ಲೇಖನದ ಆಧಾರದಿಂದ.

ಬಗ್ಗೆಯೇ ಯಾವಾಗಲೂ ಮಾತನಾಡುತ್ತಿದ್ದನಂತೆ; ಆಗಾಗ ವ್ಯಥೆಯಿಂದ ಕಣ್ಣೀರು ಸುರಿಸುತ್ತಿದ್ದನಂತೆ. ಇದರಿಂದ ತರುಣ ವಿದ್ಯಾರ್ಥಿಗೂ ಬೇಸರವಾಗಿತ್ತು. 'ವಿಚ್ಛೇದನ ಪಡೆದು ಎಷ್ಟು ಸಮಯವಾಯಿತು?' ಎಂದು ಅವನನ್ನು ಕೇಳಿದಾಗ 'ನಾಲ್ಕು ತಿಂಗಳುಗಳಿಗಿಂತಲೂ ಹೆಚ್ಚು' ಎಂದ ಆ ವಿದ್ಯಾರ್ಥಿ. ಯಾವುದೇ ಸಂಕಟವನ್ನು ಮರೆಯಲು ಸುದೀರ್ಘ ಕಾಲ ಬೇಕು ಎಂದು, ಪಾಪ, ಆ ಮುಗ್ಧ ಹುಡುಗನಿಗೆ ತಿಳಿದಿರಲಿಲ್ಲ.

ಸಂಕಟ ಅಥವಾ ನಷ್ಟದ ಪ್ರಮಾಣ ಹಾಗೂ ಅದು ಸಂಭವಿಸಿದ ಸನ್ನಿವೇಶಗಳನ್ನು ಅವಲಂಬಿಸಿ, ಅವನ್ನು ಮರೆಯಲು ತಗಲುವ ಅಂದಾಜು ಸಮಯ ಎಷ್ಟು ಎಂಬುದು ನಿರ್ಧಾರವಾಗುತ್ತದೆ. ತನ್ನ ಪತಿ ಅಥವಾ ಪತ್ನಿ ಇನ್ನು ಹೆಚ್ಚು ಕಾಲ ಬದುಕುಳಿಯುದಿಲ್ಲ; ಅಥವಾ ತಾವು ಇನ್ನೇನು ಸದ್ಯದಲ್ಲಿಯೇ ವಿಚ್ಛೇದನ ಪಡೆಯುತ್ತೇವೆ ಎಂಬುದನ್ನು ತಿಳಿದಿರುವವರು ಅಂಥ ಸಂದರ್ಭವನ್ನು ಎದುರಿಸಲು ಅಗತ್ಯವಿರುವ ಸಿದ್ಧತೆಗಳನ್ನು ಮೊದಲೇ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮುಂದೆ ಬರುವ ನೋವು ಅವರಿಗೆ ಸಹಜವಾಗಿ ಸಹ್ಯವೆನಿಸುತ್ತದೆ. ತಮ್ಮ ದಾಂಪತ್ಯ ಸಂಬಂಧ ವಾಸ್ತವವಾಗಿ ಕೊನೆಗೊಳ್ಳು ವುದಕ್ಕೆ ತುಂಬ ಮೊದಲೇ ಅವರು ಒಂಟಿ ಜೀವನದ ಕಷ್ಟವನ್ನು ಸಾಕಷ್ಟು ಅನುಭವಿ ಸಿರುತ್ತಾರೆ ಹಾಗೂ ಅಂಥ ಘಟನೆ ಸಂಬಂಧಿಸಿದ ಅನಂತರದ ಕೆಲವೇ ವಾರಗಳಲ್ಲಿ ಅಥವಾ ತಿಂಗಳುಗಳಲ್ಲಿ ಅವರು ಮೊದಲಿನ ನೆಮ್ಮದಿಯನ್ನು ಪಡೆಯುತ್ತಾರೆ.

ಯಾರಾದರೂ ಆತ್ಮೀಯರ ಸಾವು ಇದ್ದಕ್ಕಿದ್ದಂತೆ ಸಂಭವಿಸಿದ, ಅಥವಾ ಮೂಲ ಸ್ವರೂಪದ ಯಾವುದಾದರೂ ಗಂಭೀರ ಶಸ್ತ್ರಚಿಕಿತ್ಸೆಗೆ ಒಮ್ಮೆಲೇ ಒಳಗಾಗ ಬೇಕಾಗಿ ಬಂದ, ಅಥವಾ ಅಪಘಾತ ಇಲ್ಲವೇ ಯಾವುದಾದರೂ ಅನಿರೀಕ್ಷಿತ ದುರಂತ ಸಂಭವಿಸಿದ ಸಂದರ್ಭಗಳಲ್ಲಿ ಸಂಕಟವು ವರ್ಷಕ್ಕಿಂತಲೂ ಹೆಚ್ಚು ಕಾಲ ಶಾಶ್ವತವಾಗಿ ಉಳಿಯಬಹುದು. ಆದರೆ ಯಾವುದೇ ಸನ್ನಿವೇಶವಿರಲಿ; ಸಂಕಟಕ್ಕೆ ಈಡಾದವನು ಅದರಿಂದ 'ಪಾರಾಗಲು' ಅಥವಾ 'ಮೊದಲಿನ ನೆಮ್ಮದಿಯನ್ನು ಪುನಃ ಪಡೆಯಲು' ಸಮರ್ಥನಾಗಿಯೇ ಆಗುತ್ತಾನೆ ಎಂಬ ನಿರೀಕ್ಷೆ ಅವಾಸ್ತವವಾಗಿದ್ದು, ಈ ಭಾವನೆ ಕೆಲವು ವೇಳೆ ಸಂಕಟಕ್ಕೀಡಾದವರನ್ನು ವ್ಯಾಕುಲರನ್ನಾಗಿ, ಅಪರಾಧಿ ಪ್ರಜ್ಞೆಯುಳ್ಳವರನ್ನಾಗಿ ಅಥವಾ ತಮ್ಮಲ್ಲಿಯೆ ತಮಗೆ ನಂಬಿಕೆಯಿಲ್ಲದವರನ್ನಾಗಿ ಮಾಡುವ ಸಂಭವವುಂಟು. ಇದರಿಂದ ಸಂಕಟವನ್ನು ಮರೆಯುವುದು ಇನ್ನಷ್ಟು ಪುಷ್ಟಿಕರವಾಗುತ್ತದೆ.

ಸಂಕಟವೆಂಬುದು ಮಾನಸಿಕ ರೋಗವೇನೂ ಅಲ್ಲ; ಆದರೆ ಹಾಗೆ ಕಂಡುಬರುವು ದಂತೂ ಖಚಿತ. ನಿದ್ರಾಹೀನತೆ, ವ್ಯಾಕುಲತೆ, ಭಯ, ಕೋಪ, ಅನ್ಯಮನಸ್ಕತೆ ಹಾಗೂ ಚಿಂತೆ—ಇವೆಲ್ಲವೂ ಒಟ್ಟಾಗಿ ಮನೋವಿಕಲ್ಪಕ್ಕೆ ಕಾರಣವಾಗಬಹುದು. ವಾಸ್ತವವಾಗಿ ಹೇಳುವುದಾದರೆ, ಇವುಗಳಲ್ಲಿ ಪ್ರತಿಯೊಂದೂ ಒಟ್ಟು ಸಂಕಟದ ಒಂದು ಭಾಗ ಅಥವಾ ಅಂಶ ಮಾತ್ರ ಎಂಬುದನ್ನು ನಾವು ಮರೆಯಬಾರದು.

ವಿಧುರನೊಬ್ಬ ಕಚೇರಿಯ ಕೆಲಸ ಪೂರೈಸಿ ರಾತ್ರಿ ತಡವಾಗಿ ಮನೆಗೆ ಬರಬಹುದು; ಬಾಗಿಲು ತೆರೆಯುತ್ತಿದ್ದಂತೆ, ಅಡುಗೆ ಮನೆಯಲ್ಲಿ ತನ್ನ ಮಡದಿ ಅಡುಗೆ ಮಾಡುತ್ತಿರುವ ಸದ್ದು ಅವನಿಗೆ ಕೇಳಿರಬಹುದು; ರುಚಿಕರ ಅಡುಗೆಯ ಪರಿಮಳದ ಅನುಭವವೂ

ಅವನಿಗಾಗಬಹುದು. ಆದರೆ ನಿಜವಾಗಿ ಅಡುಗೆ ಮನೆಯಲ್ಲಿ ಯಾರೂ ಇರುವುದಿಲ್ಲ; ಒಲೆಯ ಮೇಲೆ ಏನೂ ಇರುವುದಿಲ್ಲ. ಅವನಿಗೆ ಅನಿಸುತ್ತಿರುವುದೆಲ್ಲ ಬರಿಯ ಭ್ರಮೆ ಮಾತ್ರ. ಪರಸ್ಪರ ಅಗಲಿದ ಗಂಡ ಅಥವಾ ಹೆಂಡತಿಗೆ, ವಿಶೇಷವಾಗಿ ಅಗಲಿಕೆಯ ಮೊದಮೊದಲ ವಾರಗಳಲ್ಲಿ, ಇಂಥ ಅನುಭವಗಳಾಗುವುದು ಸಾಮಾನ್ಯ. ತನ್ನ ಮಡದಿ ಸತ್ತಿದ್ದಾಳೆಂದು ಆ ವಿಧುರ ಒಪ್ಪಿಕೊಳ್ಳುತ್ತಾನೆ, ಆಕೆ ಅಡುಗೆ ಮನೆಯಲ್ಲಿ ಮಾಡುವ ಸದ್ದು ತನಗೆ ಕೇಳಿಬರುವುದಂತೂ ನಿಜ ಎಂದು ಕೂಡ ಹೇಳುತ್ತಾನೆ. ಮಡದಿಯ ಅಗಲಿಕೆಯ ನೋವನ್ನು ಮರೆಯಲು ಅವನು ಹೋರಾಡುತ್ತಿರುವುದನ್ನು ಇದು ಸೂಚಿಸುತ್ತದೆ. ಅವನ ಹೆಂಡತಿ ಸತ್ತಿದ್ದಾಳೆ; ಆದರೆ ಅವಳ ನೆನಪು ಮಾತ್ರ ಸ್ಫುಟವಾಗಿ ಉಳಿದಿದೆ.

ಸಂಕಟದ ಪ್ರಾರಂಭದ ಹಂತಗಳಲ್ಲಿ ವ್ಯಕ್ತಿ ವ್ಯಥೆ ಮತ್ತು ನಿಶ್ಚಿಂತತೆ ಇವುಗಳ ನಡುವೆ ಅತ್ತ ಇತ್ತ ತುಯ್ಯುತ್ತಿರುತ್ತಾನೆ. ಇಂಥ ದುರ್ಘಟನೆಯೊಂದು ನಿಜವಾಗಿ ಸಂಭವಿಸಿತೇ ಎಂಬ ಬಗ್ಗೆ ಅವನಿಗೆ ಅಪನಂಬಿಕೆಯಿರುತ್ತದೆ. ಆದರೆ ಸಂಭವಿಸಿದ್ದು ನಿಜವಾದ್ದರಿಂದ ಅವನಿಗೆ ದಿಗ್‌ಭ್ರಮೆಯುಂಟಾಗಿರುತ್ತದೆ. ಕಾಲ ಕಳೆದಂತೆ ನಿಧಾನವಾಗಿ ವ್ಯಥೆ ಮಾಯವಾಗತೊಡಗುತ್ತದೆ. ಮತ್ತೆ ಬದುಕಿನಲ್ಲಿ ಹೊಸ ಚೈತನ್ಯ ಮೂಡಲಾರಂಭಿಸುತ್ತದೆ. ಸಂಭವಿಸಿದ ದುರ್ಘಟನೆ ಬರಿಯ ಒಂದು ನೆನಪಷ್ಟೇ ಆಗಿ ಕೆಲಕಾಲ ಉಳಿಯುತ್ತದೆ; ಕೊನೆಗೆ ಆ ನೆನಪೂ ಮನಸ್ಸಿನಿಂದ ದೂರವಾಗುತ್ತದೆ. ಆದರೆ ನೋವು ಗಾಢವಾಗಿರುವಷ್ಟು ಕಾಲ ಮಾತ್ರ ನೋವಿಗೀಡಾದವರ ಬದುಕು ವರ್ಣನಾತೀತ. ಉದಾಹರಣೆಗೆ ಹೇಳುವುದಾದರೆ, ಸಂಗಾತಿಯನ್ನು ಕಳೆದುಕೊಂಡ ವ್ಯಕ್ತಿಗೆ ಬೀದಿಯಲ್ಲಿ ಹೋಗುತ್ತಿರುವ ದಂಪತಿಗಳೆಲ್ಲ ಕೈ ಕೈ ಹಿಡಿದುಕೊಂಡೇ ಸಾಗುತ್ತಿರುವಂತೆ ಅನಿಸುತ್ತದೆ; ಅವರಿಗೆ ಎಲ್ಲೆಡೆ ಸಂತೋಷದಿಂದ ಕೂಡಿದ ಜೋಡಿಗಳೇ ಕಾಣಸಿಗುತ್ತಾರೆ. ಇಂಥ ಅನಿಸಿಕೆ ಅವರ ಒಂಟಿತನದ ಭಾವನೆಯನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. ಅಕಾಲ ಪ್ರಸವ ಅಥವಾ ಗರ್ಭಸ್ರಾವದ ಪರಿಣಾಮವಾಗಿ ಮಗುವನ್ನು ಕಳೆದುಕೊಂಡ ಮಹಿಳೆಗೆ, ಬೀದಿಯಲ್ಲಿ ಕಾಣಸಿಗುವ ಪ್ರತಿಯೊಂದು ಮಗುವೂ ತನ್ನೊಂದಿಗೆ ತೊದಲುತ್ತ ಮಾತನಾಡಿದಂತೆ ಅನಿಸುವುದು ಸಾಧ್ಯ.

ಸಂಕಟಪಡುತ್ತಿರುವ ವ್ಯಕ್ತಿಗಳು ಸದಾಕಾಲ ತಮ್ಮ ದುಃಖದ ಬಗ್ಗೆಯೇ ಆಲೋಚಿಸುತ್ತಿರುತ್ತಾರೆ. ತಮಗಿರುವಷ್ಟು ದುಃಖ ಇನ್ನಾರಿಗೂ ಇಲ್ಲ ಎಂದೇ ಭಾವಿಸುತ್ತಾರೆ. ತಮ್ಮ ಕಷ್ಟ ನಷ್ಟಗಳ ನೆನಪಿನಿಂದ ಯಾತನೆಯುಂಟಾಗುವುದು ಕಡಮೆಯಾಗುವವರೆಗೆ ಅವರು ಕೆಲವು ಸ್ಥಳಗಳಿಗೆ ಹೋಗಲು ಅಥವಾ ಕೆಲವು ಸ್ನೇಹಿತರನ್ನು ನೋಡಲು ಇಷ್ಟಪಡದೆ ಇರಬಹುದು. ಆತ್ಮೀಯರಾದವರನ್ನು ಕಳೆದುಕೊಂಡಾಗಲಂತೂ ವ್ಯಕ್ತಿಯ ಇಂಥ ವರ್ತನೆ, ದುಃಖವನ್ನು ಮರೆಯುವ ಪ್ರಯತ್ನದ ಒಂದು ಪ್ರಮುಖ ಭಾಗವೇ ಆಗಿರುತ್ತದೆ.

ಇತರರೆದುರು ತನ್ನ ಯಾತನೆಯನ್ನು ತೋಡಿಕೊಳ್ಳಲು ಹಿಂದೆಗೆಯದ ವ್ಯಕ್ತಿಗೆ ದುಃಖವನ್ನು ಮರೆಯುವುದು ಸುಲಭ ಸಾಧ್ಯವಾಗುತ್ತದೆ. ಅಲ್ಲದೆ ದುಃಖಿತ ವ್ಯಕ್ತಿ ದುಃಖ ಮರೆಯುವವರೆಗೆ ತನ್ನದೇ ಆದ ವಿಶಿಷ್ಟರೀತಿಯ ಕೆಲವು ವರ್ತನೆಗಳನ್ನು ತೋರಿಸ

ಬಹುದು. ಒಟ್ಟಿನಲ್ಲಿ ಏನಾದರೂ ಕೆಲವು ವಿವಿಧ ಚಟುವಟಿಕೆಗಳಿಂದ ಮಾತ್ರ ದುಃಖವನ್ನು ಮರೆಯುವುದು ಸಾಧ್ಯ ಎಂಬುದು ಇಲ್ಲಿ ಮುಖ್ಯವಾದ ವಿಚಾರ.

ವಿಶ್ವಾಸಾರ್ಹ ಸ್ನೇಹಿತರೊಡನೆ ಮಾತನಾಡುತ್ತ ಅವರ ಜೊತೆ ದುಃಖವನ್ನು ಹಂಚಿಕೊಳ್ಳುವುದೇ ನಮ್ಮಲ್ಲಿ ಹಲವರಿಗೆ ಸಂಕಟವನ್ನು ಮರೆಯುವ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿರುತ್ತದೆ. ನಿಮ್ಮ ದುಃಖವನ್ನು ಇತರರೆದುರು ತೋಡಿಕೊಳ್ಳುವುದು ಚೆನ್ನಲ್ಲ ಎಂಬ ಅಭಿಪ್ರಾಯದಿಂದ ನೀವು ಸಂಕಟ ಸಮಯದಲ್ಲಿ ಸ್ನೇಹಿತರಿಂದ, ಬಂಧುಬಾಂಧವರಿಂದ ದೂರವಾಗಿ ಒಂಟಿಯಾಗಿ ಉಳಿಯುವುದನ್ನೇ ಇಷ್ಟಪಟ್ಟರೂ, ಇತರರ ಸಹವಾಸದಲ್ಲಿ ಮಾತ್ರ ಬೇಗ ದುಃಖವನ್ನು ಮರೆಯುವುದು ಸಾಧ್ಯ ಎಂಬುದರಲ್ಲಿ ಸಂದೇಹವೇ ಇಲ್ಲ. ಸ್ವತಃ ಇಚ್ಛಿಸಿ, ಪ್ರತ್ಯೇಕವಾಗಿ ದೂರ ಉಳಿಯುವುದರಿಂದ ನಿಮ್ಮ ಯಾತನೆ ಇನ್ನಷ್ಟು ಹೆಚ್ಚುತ್ತದೆ ಎಂಬುದನ್ನು ಮರೆಯಬೇಡಿ. ಜನರೊಡನೆ ಬೆರೆಯುವುದು ಯಾವಾಗಲೂ ಒಳ್ಳೆಯದೇ. ದುಃಖವನ್ನು ಮರೆಯುವಲ್ಲಿ ಧಾರ್ಮಿಕ ನಂಬಿಕೆಗಳೂ ನೆರವಿಗೆ ಬರುತ್ತವೆ. ಪ್ರಯತ್ನಪಟ್ಟು ದುಃಖವನ್ನು ಮರೆಯಬಹುದು ಎಂಬ ಅಚಲ ವಿಶ್ವಾಸ ಮಾತ್ರ ಅತಿ ಮುಖ್ಯವಾದುದು.

ದುಃಖವನ್ನು ಮರೆಯುವಲ್ಲಿ ಕಾರ್ಯಚಟುವಟಿಕೆಗಳು ಪ್ರಬಲ ಅಸ್ತ್ರವಾಗುತ್ತದೆ ಎಂದು ಹೇಳಿದೆನಷ್ಟೆ! ಸಂಭವಿಸಿದ ದುರಂತದಿಂದ ಗಾಸಿಗೊಂಡು ಒಮ್ಮೆ ನಿಷ್ಕ್ರಿಯನಾದ ವ್ಯಕ್ತಿ ಪುನಃ ಮೊದಲಿನಂತೆ ಕೆಲಸ ಕಾರ್ಯಗಳಲ್ಲಿ ತೊಡಗುವುದು ಕಷ್ಟವೇನೋ ಸರಿ! ಯಾವ ಕೆಲಸವೇ ಇರಲಿ; ಮಾಡಲೇಬೇಕೆಂಬ ನಿರ್ಬಂಧವಿರುವಾಗ ಅದು ಜೀತ ಅಥವಾ ಗುಲಾಮಚಾಕರಿಯಂತೆ ದೇಹ–ಮನಸ್ಸುಗಳೆರಡಕ್ಕೂ ಕಷ್ಟ ತಂದೊಡ್ಡುತ್ತದೆ. ಆದರೆ ಸ್ವತಃ ಆಸಕ್ತಿ–ಅಭಿರುಚಿ ಬೆಳೆಸಿಕೊಂಡಾಗ ಯಾವ ಕೆಲಸವೇ ಇರಲಿ—ಅದು ದೇಹ–ಮನಸ್ಸುಗಳನ್ನು ಹಗುರಗೊಳಿಸುತ್ತದೆ. ಅಭಿರುಚಿಯಿಂದ ತೊಡಗುವ ಚಟುವಟಿಕೆಗಳು ಚಿಕಿತ್ಸಾಮೌಲ್ಯವನ್ನೂ ಹೊಂದಿರುತ್ತವೆ. ಆದರೆ ನಿಮ್ಮ ಕೆಲಸಕಾರ್ಯಗಳು ನಿಮ್ಮ ಶಕ್ತಿ ಸಾಮರ್ಥ್ಯಗಳಿಗೆ ತಕ್ಕುದಾದ ಒಂದು ಇತಿಮಿತಿಯೊಳಗಿರಬೇಕಾದ್ದು ಅತ್ಯಗತ್ಯ.

ಸಂಕಟದ ಸಮಯದಲ್ಲಿ ಮನೆಯಲ್ಲಿಯೇ ಇರಲು ನೀವು ಇಷ್ಟಪಡುವಿರಾದರೂ, ಇಡೀ ದಿನ ಮನೆಯಲ್ಲಿಯೇ ನಿಷ್ಕ್ರಿಯರಾಗಿ ಕುಳಿತುಕೊಳ್ಳಬೇಡಿ. ತರಕಾರಿಗಳನ್ನೋ, ಸಾಮಾನುಗಳನ್ನೋ ತರಲು ಅಂಗಡಿಗೆ, ಮಾರ್ಕೆಟ್ಟಿಗೆ ಹೋಗಿಬನ್ನಿ. ಹಳೆಯ ನಿಯತಕಾಲಿಕಗಳಾದರೂ ಸರಿಯೆ, ಸ್ವಲ್ಪ ಕಾಲ ಏನಾದರೂ ಓದಿ ಅಥವಾ ಬೆಳಗ್ಗೆ ಇಲ್ಲವೆ ಸಾಯಂಕಾಲ ತುಂಬ ದೂರ ತಿರುಗಾಡಿ ಬನ್ನಿ. ದುಃಖಕಾಲದಲ್ಲಿ ಶಾರೀರಿಕ ಶ್ರಮದಿಂದ ಕೂಡಿದ ಕೆಲಸದಲ್ಲಿ ತೊಡಗುವುದು ಕಷ್ಟ; ಆದರೆ ಇಂಥ ಶ್ರಮದಿಂದ ಮಾತ್ರ ನಿಮ್ಮ ಹೃದಯ ಹಾಗೂ ಆತ್ಮಗಳು ಹೊಸ ಲವಲವಿಕೆ–ಉತ್ಸಾಹ ಪಡೆಯಬಲ್ಲವು. ಇಸ್ಪೀಟು, ಚದುರಂಗ ಮೊದಲಾದ ಮನೆಯೊಳಗಣ ಆಟಗಳನ್ನಾಡುವುದು, ರೇಡಿಯೋ ಕೇಳುವುದು, ಟಿವಿ ನೋಡುವುದು ಅಥವಾ ಒಳ್ಳೆಯ ಪುಸ್ತಕವನ್ನು ಓದುವುದು—ಇವುಗಳಿಂದಲೂ ಕಳೆದುಹೋದ ಚಿತ್ತಸ್ವಾಸ್ಥ್ಯವನ್ನು ಪುನಃ ಸಂಪಾದಿಸುವುದು ಸಾಧ್ಯವಿದೆ. ಆದರೆ ಇಂಥ ಯಾವುದೇ ಹವ್ಯಾಸ, ನಿಮ್ಮ ದೈನಿಕ ಚಟುವಟಿಕೆಯಾಗಿ ರೂಪುಗೊಳ್ಳಬೇಕು.

ಇತರರಿಗೆ ನಿಮ್ಮಿಂದಾದ ಏನಾದರೂ ಸಹಾಯ ಮಾಡಿ; ಹೀಗೆ ಅನ್ಯರಿಗೆ ನೆರವಾದಾಗ, ನಿಮಗೆ ನಿಮ್ಮಲ್ಲಿ ಇನ್ನಷ್ಟೂ ಆತ್ಮವಿಶ್ವಾಸ ಮೂಡುತ್ತದೆ. ಸಂಕಟದಲ್ಲಿರುವಾಗಲೂ, ಇತರರಿಗೆ ಸಹಾಯವಾಗಲು ಸಾಧ್ಯವಾಯಿತಲ್ಲ ಎಂಬ ಭಾವನೆಯಿಂದ ನಿಮಗೆ ನಿಮ್ಮಲ್ಲಿ ಇನ್ನಷ್ಟು ಗೌರವ ಮೂಡಿ, ನಿಮ್ಮ ಸಂಕಟ ವೇಗಗತಿಯಲ್ಲಿ ಮರೆಯಾಗಬಲ್ಲುದು. ದುಃಖವೆಂದು ಸುಮ್ಮನೆ ತಲೆ ಕೆಳಗೆ ಹಾಕಿಕೊಂಡು ಕೈಕಟ್ಟಿ ಕುಳಿತುಕೊಳ್ಳಬೇಡಿ. ಏನಾದರೂ ಚಿಕ್ಕಪುಟ್ಟ ಕೆಲಸಗಳನ್ನು ಮಾಡುತ್ತಾ ಇರಿ. ಮಲಗುವ ಮುನ್ನ ಬಿಸಿನೀರ ಸ್ನಾನ ಮಾಡಿ. ಮನೆಯಲ್ಲಿ ನೀವಿರುವವರು ಒಬ್ಬರೇ ಆಗಿದ್ದರೂ, ಮನೆಯನ್ನು, ಪೀಠೋಪಕರಣಗಳನ್ನು, ಪಾತ್ರೆಪಡಿಗಳನ್ನು ಸದಾ ಓರಣವಾಗಿ ಇಟ್ಟುಕೊಳ್ಳಿ. ಇಂಥ ಕಾರ್ಯಚಟುವಟಿಕೆಗಳಿಂದ ನಿಮ್ಮ ಜೀವನದಲ್ಲಿ ಶಾಂತಿಸಮಾಧಾನಗಳು ಮೂಡುತ್ತವೆ.

ಸಮಾನ ವಯಸ್ಸು ಅಥವಾ ಸಮಾನ ಮನೋಧರ್ಮದ ಗೆಳೆಯರನ್ನು ಗಳಿಸಿಕೊಳ್ಳಿ. ಅವರೊಡನೆ ದಿನದ ಕೆಲಕಾಲವನ್ನು ಆಟದಲ್ಲೊ ಹರಟೆಯಲ್ಲೊ ಕಳೆಯಿರಿ. ಸಾಮುದಾಯಿಕ ಭವನಗಳ, ಕ್ಲಬ್‌ಗಳ ಸದಸ್ಯರಾಗಿ. ಉಪಯುಕ್ತವಾದ ರೀತಿಯಲ್ಲಿ ಕಾಲ ಕಳೆಯಲು ಸಾಕಷ್ಟು ಅವಕಾಶಗಳನ್ನು ಅವು ನಿಮಗೆ ಒದಗಿಸಿಕೊಡುತ್ತವೆ.

'ಸಜ್ಜನರು ದುರ್ಘಟನೆಗಳಿಗೆ ಈಡಾದಾಗ' ಎಂಬ ತಮ್ಮ ಗ್ರಂಥದಲ್ಲಿ ರಬಿ ಹೆರಾಲ್ಡ್ ಕುಶ್ನರ್ ಹೀಗೆನ್ನುತ್ತಾರೆ: "ನಾವು ನಡೆದ ದುರ್ಘಟನೆಗಳನ್ನೂ ಅವುಗಳಿಂದ ಉಂಟಾದ ನೋವನ್ನೂ ನೆನಪಿಗೆ ತರುವ ವಿಚಾರಗಳನ್ನು ಮರೆಯಬೇಕು. 'ಹೀಗೇಕೆ ನಡೆಯಿತು?' ಎಂದು ತಲೆಕೆಡಿಸಿಕೊಳ್ಳುವ ಬದಲು 'ಹೀಗೆ ನಡೆಯಿತಲ್ಲ! ಮುಂದೇನು ಮಾಡಬೇಕು?' ಎಂಬುದನ್ನು ಕುರಿತು ವಿಚಾರ ಮಾಡಬೇಕು."

ಇಪ್ಪತ್ತಮೂರನೆಯ ವಯಸ್ಸಿನಲ್ಲಿ, ಪದವಿ ತರಗತಿಯ ಪಠ್ಯಕ್ರಮಕ್ಕೆ ಸಂಬಂಧಿಸಿದ ನನ್ನ ಕೆಲಸದ ಒಂದು ಭಾಗವಾಗಿ, ಮೊತ್ತಮೊದಲ ಬಾರಿಗೆ ಆಸ್ಪತ್ರೆಯಲ್ಲಿರುವ ರೋಗಿಗಳ ಬಗ್ಗೆ ಕಾಳಜಿವಹಿಸಬೇಕಾದ ಸಂದರ್ಭ ನನಗೆ ಒದಗಿ ಬಂತು. ತುಂಬ ದಾರುಣವಾದ, ಗಂಭೀರವಾದ ರೋಗಗಳಿಂದ ನರಳುವ ರೋಗಿಗಳೊಂದಿಗಿನ ಸಂಪರ್ಕ, ಹಲವು ಹಳೆಯ ದುಃಖಕರ ನೆನಪುಗಳ ಬಿರುಗಾಳಿಯನ್ನು ನನ್ನಲ್ಲಿ ಕೆರಳಿಸಿತು. ಆಗ ನಾನು ನನ್ನ ಮೆಚ್ಚಿನ ಪ್ರಾಧ್ಯಾಪಕರೊಬ್ಬರ ಮಾರ್ಗದರ್ಶನ ಕೋರಿದೆ. ಅನೇಕ ವಾರಗಳ ಕಾಲ ನಾನವರ ಕೊಠಡಿಯಲ್ಲಿ ಕೆಲಸಮಯ ಅಳುತ್ತ ಕುಳಿತುಕೊಳ್ಳುತ್ತಿದ್ದೆ.

ಆ ಪ್ರಾಧ್ಯಾಪಕರು ಪುಟ್ಟ ಮಕ್ಕಳ ತಂದೆಯಾಗಿದ್ದರು. ಅವರ ಮಡದಿ ಕ್ಯಾನ್ಸರ್ ರೋಗಪೀಡಿತರಾಗಿ ಸಾವಿನ ದಾರಿ ಕಾಯುತ್ತಿದ್ದುದು ನನಗೆ ತಿಳಿದಿತ್ತು. ಅಂಥ ಸಮಯದಲ್ಲಿಯೂ ಅವರು ಸಮಾಧಾನಚಿತ್ತದಿಂದ ನನ್ನ ಸಮಸ್ಯೆಗಳಿಗೆ ಕಿವಿಗೊಡುತ್ತಿದ್ದರು. ಒಂದು ಸಲ, ನಾನು ಹೀಗೆ ಅಳುತ್ತ ಕುಳಿತುಕೊಳ್ಳುವುದು ತಪ್ಪೆನಿಸುತ್ತದೆ ಎಂದು ಅವರೊಡನೆ ಹೇಳಿದೆ. "ನಿಜವಾಗಿಯೂ ನಿಮ್ಮ ದುಃಖದ ಎದುರು ನನ್ನ ವ್ಯಥೆ ಏನೂ ಅಲ್ಲ" ಎಂದೆ. ಅಂದಿನಿಂದ ಮುಂದಿನ ಈ ಹದಿನೇಳು ವರ್ಷಗಳಲ್ಲಿ, ಹಲವು ಬಾರಿ ನಾನು ಆ ಪ್ರಾಧ್ಯಾಪಕರ ಈ ಕೆಳಗಿನ ಮಾತುಗಳನ್ನು ನೆನಪಿಗೆ ತಂದುಕೊಂಡಿದ್ದೇನೆ:

"ನನ್ನ ದುಃಖವನ್ನು ಪ್ರದರ್ಶಿಸಿ ನಿಮ್ಮ ದುಃಖವನ್ನು ಇನ್ನಷ್ಟು ಹೆಚ್ಚಿಸಲು ನಾನು ಬಯಸುವುದಿಲ್ಲ."

ಇತರರು ಹೆಚ್ಚು ದುಃಖಪೀಡಿತರಾಗಿದ್ದಾರೆ ಎಂಬ ಕಾರಣದಿಂದ, ನಿಮ್ಮ ಪರಿಸ್ಥಿತಿಗಾಗಿ ನೀವು ಸಂಕಟಪಡುವುದು ಚೆನ್ನಲ್ಲ ಎಂಬ ಭಾವನೆಯನ್ನು ನೀವು ಬಿಟ್ಟುಬಿಡಬೇಕಾದ್ದು ಅತ್ಯಾವಶ್ಯಕ. ನಮ್ಮ ಸಂಕಟಗಳನ್ನು ಗಂಭೀರವಾಗಿ ತೆಗೆದುಕೊಂಡು ಅವುಗಳಿಗಾಗಿ ಮರುಗುವ ಹಕ್ಕು ನಮಗೆ ಯಾವಾಗಲೂ ಇದ್ದೇ ಇರುತ್ತದೆ. ದುಃಖವನ್ನು ನುಂಗಿಕೊಳ್ಳುವುದು ಅಥವಾ ನನಗೆ ದುಃಖವೇ ಆಗಿಲ್ಲ ಎಂದು ನಂಬಲು ಪ್ರಯತ್ನಿಸುವುದು ಒಳ್ಳೆಯದಲ್ಲ; ಹೀಗೆ ಮಾಡುವುದರಿಂದ ಇನ್ನಷ್ಟು ಕೆಡುಕೇ ಉಂಟಾಗಬಹುದು. ನಮ್ಮ ಕಷ್ಟ–ನಷ್ಟ–ಸಂಕಟಗಳನ್ನು ಎದುರಿಸುವುದೆಂದರೆ, ಒಮ್ಮೆ ಕಳೆದುಕೊಂಡ ನಮ್ಮ ಸ್ವಾತಂತ್ರ್ಯವನ್ನು ಮತ್ತೆ ಸಂಪಾದಿಸುವುದೇ ಆಗಿರುತ್ತದೆ.

ಅನು : ಶಂಸ ಐತಾಳ

ಧೈರ್ಯವು ನಮ್ಮ ದೃಷ್ಟಿಯಲ್ಲಿ ಕಟ್ಟಿರಬೇಕು. ಧಾರ್ಮಿಕ ಶಿಕ್ಷಣ ವಿಲ್ಲದೇ ನಮ್ಮ ನಡೆನುಡಿಗಳಲ್ಲಿ ನೀತಿ ತುಂಬಲಿಕ್ಕಿಲ್ಲ. ನಾಸ್ತಿಕತೆ ನಮಗುಚಿತವಲ್ಲ. ಧಾರ್ಮಿಕ ದೃಷ್ಟಿಗೆ ನಾವು ಮಹತ್ವ ಕೊಡಬೇಕು.

ಗಾಂಧೀಜಿ

ಬಹುಮುಖ ಪ್ರತಿಭೆಯ ಪರಮಾಣು ವಿಜ್ಞಾನಿ ಡಾ|| ಭಾಭಾ

ಮೂರ್ತಿ ರಾಮನಾಥಪುರ

“ಅವರು ವಿಶ್ವಕಿರಣಗಳ ಸಂಶೋಧನೆಗೆ ಇನ್ನಷ್ಟು ವೇಳೆ ಮಿಗಿಸುತ್ತಿದ್ದರೆ” ಭೌತಶಾಸ್ತ್ರದ ನೋಬಲ್ ಪಾರಿತೋಷಕವನ್ನು ಖಂಡಿತವಾಗಿ ಪಡೆಯುತ್ತಿದ್ದರು—ವಿಜ್ಞಾನದ ಚರಿತ್ರೆಯನ್ನು ಬರೆದ ಅಧಿಕೃತ ಲೇಖಕ ಜೆ. ಡಿ. ಬರ್ನಾಲ್‌ರ ಮಾತು ಬಹಳ ಉಚಿತವಾದದ್ದು. ತರಬೇತಿಯಿಂದ ಇಂಜನಿಯರ್, ವೃತ್ತಿಯಿಂದ ತಾತ್ವಿಕ ಭೌತವಿಜ್ಞಾನಿ, ವಿಶ್ವವಿಖ್ಯಾತ ಪರಮಾಣು ವಿಜ್ಞಾನಿ, ನೆಹರು ಕಂಡ ಉದ್ಯಮಶೀಲ ತಾಂತ್ರಿಕ ಪರಿಣತ, ರಾಷ್ಟ್ರದ ಕನಸನ್ನು ನನಸಾಗಿಸಲು ಹೋರಾಡಿ ಸರಿಸುಮಾರು ಯಶಸ್ವಿಯಾದ ಆ ಮಹಾನ್ ವ್ಯಕ್ತಿಯೇ ಡಾ|| ಹೋಮಿ ಜಹಾಂಗೀರ್ ಭಾಭಾ.

೧೯೦೯, ಅಕ್ಟೋಬರ್ ೩೦ಕ್ಕೆ ಮುಂಬೈನ ಫಾರಸಿ ಕುಟುಂಬದಲ್ಲಿ ಹುಟ್ಟಿದ ಭಾಭಾರ ಬಾಲ್ಯ—ಶಿಕ್ಷಣ ಅಲ್ಲಿಯ ಕೆಥಡ್ರಲ್ ಮತ್ತು ಜಾನ್ ಕ್ಯಾನನ್ ಶಾಲೆಗಳಲ್ಲಿ ನಡೆಯಿತು. ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು. ಬಾಲ್ಯದಿಂದಲೇ ಭಾಭಾ ಬುದ್ಧಿವಂತ ವಿದ್ಯಾರ್ಥಿಯಾಗಿದ್ದರಲ್ಲದೆ ಸಂಗೀತ ಸಾಹಿತ್ಯಗಳಲ್ಲಿಯೂ ಅಭಿರುಚಿ ಗಳಿಸಿದ್ದರು. ಶ್ರೀಮಂತ ಮನೆತನದವರಾದ್ದರಿಂದ ಪ್ರೌಢಿಮೆಗಳಿಗೆ ಪುಸ್ತಕ ಭಂಡಾರ, ಧ್ವನಿ ಮುದ್ರಣಗಳು ಸಹಾಯಕವಾಗಿ ಅದರಲ್ಲಿ ಯಶಸ್ವಿಯಾದರು. ಅವರ ತಾತ ಮೈಸೂರಿನ ಶಿಕ್ಷಣ ಖಾತೆಯ ಮುಖ್ಯಾಧಿಕಾರಿಗಳಾಗಿಯೂ ಅತ್ಯಂತ ಜನಪ್ರಿಯರಾಗಿದ್ದರೆಂಬುದನ್ನು, ಹತ್ತಿರದ ಸಂಬಂಧಿಗಳಾದ ಜೆ. ಎನ್. ತಾತಾರವರು ‘ತಾತಾ ವಿಜ್ಞಾನ ಮಂದಿರ’ದ ಸ್ಥಾಪಕರಾಗಿದ್ದರೆಂಬುದನ್ನು ಇಲ್ಲಿ ಸ್ಮರಿಸ ಬಹುದು.

ಭಾಭಾರವರ ಮನೆಯ ಪರಿಸರದ ವಾತಾವರಣ ಭಾರತದ ವಿವಿಧ ಸಮಸ್ಯೆಗಳ ಪರಿಚಯಕ್ಕೆ ಕಾರಣವಾಯಿತು. ಹಳೆಯ ಸಂಬಂಧ

ದಿಂದ 'ತಾತಾ' ಮನೆತನದವರಲ್ಲಿ ಹೋಗಿ ಬರುತ್ತಿದ್ದರು. ಅಲ್ಲಿ ದೊಡ್ಡವರು ಭಾರೀ ಕೈಗಾರಿಕಾ ಪ್ರಗತಿ, ಉಕ್ಕು ನಿರ್ಮಾಣ, ರಾಸಾಯನಿಕ ವಸ್ತುಗಳ ಉತ್ಪಾದನೆ ಮುಂತಾದವುಗಳ ಬಗ್ಗೆ ಚರ್ಚಿಸುತ್ತಿದ್ದಾಗ ಬಾಲಕ ಭಾಭಾ ಬಹಳ ಗಮನವಿಟ್ಟು ಕೇಳುತ್ತಿದ್ದರು, ಹಾಗೆಯೇ ದೇಶ ಭಕ್ತಿಗೆ—ಹೆಸರಾದ ಅವರ ಮನೆತನದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮಗಳ ರೋಮಾಂಚಕ ಘಟನೆಗಳ ಮಾತುಗಳು ಭಾಭಾರವರಲ್ಲಿ ಉತ್ಕಟ ಅಭಿಮಾನವನ್ನು ಹುಟ್ಟಿಸುವುದರಲ್ಲಿ ಯಶಸ್ವಿಯಾಯಿತು.

ಮುಂಬೈನ ಎಲ್ಫಿನ್‌ಸ್ಟನ್ ಕಾಲೇಜ್ ಮತ್ತು ರಾಯಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗಳಲ್ಲಿ ವ್ಯಾಸಂಗ ಮುಗಿಸಿದ ಭಾಭಾ, ೧೯೨೭ರಲ್ಲಿ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ತೆರಳಿ ಕೇಂಬ್ರಿಡ್ಜ್ ವಿ. ವಿ. ನಿ. ದ ಗಾನವಿಲ್ ಮತ್ತು ಕೇಯಸ್ ಕಾಲೇಜಿನಲ್ಲಿ ಮೆಕಾನಿಕಲ್ ಎಂಜನಿಯರಿಂಗ್ ಅಭ್ಯಾಸಮಾಡಿದರು. ಈಗ ಅವರ ಆಸಕ್ತಿ ಗಣಿತ ಮತ್ತು ತಾತ್ವಿಕ ಭೌತಶಾಸ್ತ್ರದತ್ತ ಹರಿಯಿತು. ೧೯೩೦ಕ್ಕೆ ಭೌತಶಾಸ್ತ್ರದಲ್ಲಿ ಸಂಶೋಧನೆಗೆ ಪ್ರಾರಂಭಿಸಿದರು.

೧೯೩೦–೪೦ ತಾತ್ವಿಕ ಭೌತಶಾಸ್ತ್ರಗಳಲ್ಲಿ ಅತ್ಯಂತ ರೋಮಾಂಚಕಾರಕಯುಗ. ಕೇಂಬ್ರಿಡ್ಜ್‌ನ ಕ್ಯಾವೆಂಡಿಶ್ ಪ್ರಯೋಗಶಾಲೆಯಲ್ಲಿ ಭಾಭಾ ತಮ್ಮ ಮಹತ್ವಪೂರ್ಣ ಸಂಶೋಧನಾ ಕಾರ್ಯಗಳನ್ನು ಮುಂದುವರೆಸಿದರು. ಈ ಸಮಯದಲ್ಲಿಯೇ ಅವರಿಗೆ ಗಣಿತ ಶಾಸ್ತ್ರದಲ್ಲಿ ಕಾಸಬಲ್, ಐಸಾಟ್ ನ್ಯೂರ್ಟ ಇನ್ನಿತರ ವಿದ್ಯಾರ್ಥಿ ವೇತನಗಳು ಸಿಕ್ಕಿ, ಜಗತ್ತಿನ ಭೌತಶಾಸ್ತ್ರದ ಪ್ರಕಾಂಡ ಪಂಡಿತರುಗಳೊಡನೆ ಕೆಲಸ ಮಾಡುವ ಅವಕಾಶ ಸಿಕ್ಕಿತು. ವಿಶ್ವಕಿರಣ, ಕ್ವಾಂಟಂಥಿಯರಿ, ಮೂಲ ಕಣಶಾಸ್ತ್ರ—ಈ ಮೂರೂ ಪ್ರಬೇಧಗಳಲ್ಲಿ ಸಂಶೋಧನೆ ಮಾಡಿ ಭೌತಶಾಸ್ತ್ರಕ್ಕೆ ಅವರು ಕೊಟ್ಟಕೊಡುಗೆ ಅಪೂರ್ವ. ಹೈಟ್ಲರ್‌ನ ಜತೆಗೆ ಮಂಡಿಸಿದ ಭಾಭಾ ಹೈಟ್ಲರ್—ಕ್ಯಾಸೆಟ್ ಥಿಯರಿ (ಭಾಭಾ ಹೈಟ್ಲರ್ ಸೋಪಾನಪಾಕತತ್ವ), ಭೌತಶಾಸ್ತ್ರದಲ್ಲಿ ವಿಶ್ವದಾಖಲೆ ಮಾಡಿತು.

ಹೀಗೆ ಅವರು ಮಾಡಿದ ಅನೇಕ ಮಹತ್ವ ಪೂರ್ಣ ಸಂಶೋಧನೆಗಳಿಂದ ವಿಜ್ಞಾನಿಗಳ ಪ್ರತಿಷ್ಠಿತ ಸನ್ಮಾನ ೧೯೪೧ರಲ್ಲಿ ಸಿಕ್ಕಿತಲ್ಲದೆ ಲಂಡನ್ನಿನ ರಾಯಲ್ ಸೊಸೈಟಿಯ ಸದಸ್ಯತ್ವದ, ಗೌರವವೂ ದೊರೆಯಿತು. ವಿಜ್ಞಾನಿ ಭಾಭಾ ಅತ್ಯಂತ ಸೂಕ್ಷ್ಮ ಸಂವೇದಿಯಾದ ಕಲಾವಿದರಾಗಿದ್ದರೆಂಬುದಕ್ಕೆ ಅವರಿಗಿದ್ದ ಸಂಗೀತ–ಶಿಲ್ಪ–ನೃತ್ಯ ಹಾಗೂ ಇನ್ನಿತರ ಲಲಿತಕಲೆಗಳ ಮೇಲಿನ ತೀವ್ರ ಅಭಿರುಚಿಯೇ ಸಾಕ್ಷಿಯಾಗಿತ್ತು.

ಭಾಭಾ ಹಿಡಿದ ಕೆಲಸಗಳಲ್ಲಿ ಸಾಮರಸ್ಯ, ಸಮತೋಲನ ಪರಿಪೂರ್ಣತೆ, ಸೌಂದರ್ಯ ಸ್ಥಿತಿಯನ್ನು ಬಯಸುತ್ತಿದ್ದರು. ಹೀಗಾಗಿ ಭಾರತದ ವೈಜ್ಞಾನಿಕ ಇತಿಹಾಸವೇ ೧೯೪೦ ಸುಮಾರಿಗೆ ಬದಲಾಗುವಂತಹ ಸಂಶೋಧನೆ ನಡೆಯಿತು ಒಂದರ್ಥದಲ್ಲಿ ಮೇಲೆ ಹೇಳಿದ ಜೆ. ಡಿ. ಬರ್ನಾಲರ ಮಾತು ಒಬ್ಬರದಾಗಿರದೆ ಅನೇಕ ವಿದ್ವಾಂಸರ ಅಭಿಪ್ರಾಯವೂ ಆಗಿತ್ತು. ಅವರ ಬಹುಮುಖ ವ್ಯಕ್ತಿತ್ವ ಏಕಮುಖವಾಗಿ ಸಾಗಿದ್ದರೆ ಅವರು ನೋಬಲ್ ವಿಜೇತರಾಗುವುದರಲ್ಲಿ ಸಂದೇಹವೇನೂ, ಅಸಾಧ್ಯತೆಯೇನೂ ಇರುತ್ತಿರಲಿಲ್ಲ.

ಪರದೇಶಗಳಿಗೆ ಯುವ ಪ್ರತಿಭಾ ಪಲಾಯನ ತಪ್ಪಿಸಲು 'ಆಧುನಿಕ ವಿಜ್ಞಾನದ ಸಂಶೋಧನಾ ಸಂಸ್ಥೆ ಸ್ಥಾಪಿಸಿದರು. ಪರಮಾಣು ಶಕ್ತಿಯ ಶಾಂತಿಯುತ ಬಳಕೆಯಿಂದ

ಪ್ರಗತಿಯು ಕನಸುಕಂಡ ಮೊದಲ ಶಾಂತಿದೂತ. ಇದಕ್ಕೆ ಪ್ರೋತ್ಸಾಹ ಸಿಕ್ಕಂತೆ ೧೯೪೫ರಲ್ಲಿ ಬೆಂಗಳೂರಿನಲ್ಲಿ "ಟಾಟಾ ಮೂಲಭೂತ ಸಂಶೋಧನಾಲಯ" ಜನ್ಮ ತಾಳಿತು. ನಂತರ ಮುಂಬೈಗೆ ವರ್ಗವಾಗಿ ವಿಶ್ವಮಾನ್ಯತೆ ಪಡೆಯುವಷ್ಟು ರೋಮಾಂಚಕಾರಕ ಸಂಶೋಧನೆಗಳು ನಡೆದವು.

ಭಾರತದ ಉದ್ಯಮದ ಪ್ರಗತಿಗೆ ಎಲೆಕ್ಟ್ರಾನಿಕ್ ತಂತ್ರ ವಿದ್ಯೆಯ ಅಗತ್ಯಕಂಡ ಭಾಭಾ ಇದಕ್ಕೆ ಹೆಚ್ಚು ಗಮನ ಕೊಟ್ಟರು. ಇದರಿಂದ ೧೯೫೮ರಲ್ಲಿ ಟ್ರಾಂಬೆಯ ಪ್ರಶಾಂತ ಕಡಲದಂಡೆಯಲ್ಲಿ ಪರಮಾಣುಶಕ್ತಿ ಸಂಸ್ಥೆ ಸ್ಥಾಪನೆಯಾಯಿತು. ಇವರ ಮುಂದಾಲೋಚನೆಯಿಂದಲೇ ನಾವಿಂದು ಭಾರೀ ಕೈಗಾರಿಕೆಗೆ ಬೇಕಾಗುವ ಉಪಕರಣಗಳ ಮಟ್ಟಿಗೆ ಸ್ವಾವಲಂಬಿಗಳಾಗಿದ್ದೇವಲ್ಲದೆ, ಅನ್ಯದೇಶಗಳಿಗೂ ಎಲಕ್ಟ್ರಾನಿಕ್ ಉಪಕರಣಗಳನ್ನು ಕಳುಹುತ್ತಿದ್ದೇವೆ. ದೇಶದಲ್ಲೆಲ್ಲಾ ವಿದ್ಯುತ್ ಕೇಂದ್ರಗಳನ್ನು ತೆರೆದು, ಕೈಗಾರಿಕೆಗಳಿಗೆ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಪೂರೈಸುವ ಅಭಿಲಾಷೆ ಭಾಭಾರವರಲ್ಲಿತ್ತು. ಪರಮಾಣು ವಿಜ್ಞಾನವಲ್ಲದೆ, ಭವಿಷ್ಯದ ಒಳಿತಿಗಾಗಿ ವ್ಯೋಮಶಾಸ್ತ್ರ ಮತ್ತು ಕೃತಕ ಉಪಗ್ರಹ ವಾರ್ತಾ ಪ್ರಸಾರ ಸ್ಥಾಪನೆಯತ್ತಲೂ ಗಮನಕೊಟ್ಟರು.

ಸಂಪ್ರದಾಯ ಶರಣತೆ, ಆಲಸ್ಯ, ಕೆಲಸ ಮುಂದೂಡಿಕೆಗಳ ಪ್ರವೃತ್ತಿ ದೂರಗೊಳಿಸಲು ಶ್ರಮಿಸಿದರು—ಭಾಭಾ ಅವರ ಆದರ್ಶ ಆಡಳಿತದಿಂದ ಪ್ರಸಿದ್ಧ ವಿಜ್ಞಾನಿಯೊಬ್ಬ ದಕ್ಷ ಆಡಳಿತಗಾರನಾಗಬಲ್ಲನೆಂಬುದನ್ನು ತೋರಿಸಿ ಕೊಟ್ಟರು. ಅವರ ಪ್ರಮುಖ ಬೀಜ ಮಂತ್ರಗಳೆಂದರೆ : ಕೈಗಾರಿಕೆ, ಉದ್ಯಮ, ದೇಶದ ಆರ್ಥಿಕ ಮುನ್ನಡೆ.

ಡಾ|| ಭಾಭಾ ೧೯೫೫ರಲ್ಲಿ ಜಿನೀವಾದಲ್ಲಿ ನಡೆದ ವಿಶ್ವಪರಮಾಣು ವಿಜ್ಞಾನಿಗಳ ಸಮ್ಮೇಳನಾಧ್ಯಕ್ಷತೆಯಿಂದ, "ಭಾರತ ಶಾಂತಿಯುತ ಪ್ರಯೋಗಗಳಿಗೆ ಮಾತ್ರ ಪರಮಾಣುವಿನ ಬಳಕೆ ಮಾಡುತ್ತದೆ" ಎಂದು ಘೋಷಣೆ ಮಾಡಿದರು.

ಪಾಶ್ಚಾತ್ಯ ದೇಶಗಳ ಮುನ್ನಡೆಗೆ ಸಮವಾಗಿ, ನಮ್ಮ ದೇಶ ಆದಷ್ಟು ಬೇಗ ಔದ್ಯೋಗಿಕ ಪ್ರಗತಿಯನ್ನು ಸಾಧಿಸಲೇಬೇಕೆಂದು ಆಗಿನ ಪ್ರಧಾನಮಂತ್ರಿ ಜವಹರಲಾಲರ ಆಕಾಂಕ್ಷೆಯಾಗಿತ್ತು. ಅಲ್ಲದೆ ವೈಜ್ಞಾನಿಕ ಸಂಶೋಧನೆಗಳಿಗೆ ಡಾ|| ಭಾಭಾ ಸ್ಥಾಪಿಸಿದ ಸಂಸ್ಥೆಗಳು—'ಆಧುನಿಕ ಭಾರತದ ನಿಜವಾದ ದೇಗುಲಗಳು' ಎಂಬ ಪಂಡಿತ ನೆಹರೂರವರ ಮಾತು ಯೋಗ್ಯವಾದದ್ದೇ. ಆದ್ದರಿಂದ ಭಾಭಾ ರೂಪಿಸಿದ ದೊಡ್ಡದೊಡ್ಡ ಯೋಜನೆಗಳು ಕೈಗೆಟುಕದವು ಎಂದು ನೆಹರು ಎಂದೂ ಭಾವಿಸಿರಲಿಲ್ಲ.

ಡಾ|| ಭಾಭಾರವರ ಬಗೆಗೆ ಖ್ಯಾತ ಪಿಟೀಲುವಾದಕ ಯಹೂದಿಮೆನುಹಿನ್ನನ ಮಾತು ಮನನಯೋಗ್ಯ, "ಈ ಪ್ರತಿಭೆ ಮತ್ತೊಬ್ಬ ಲಿಯೋ ನಾರ್ಡೋಡವಿಂಚಿ". ಭಾಭಾರಲ್ಲಿ ಎಲ್ಲರಿಗೂ ಗೌರವ ಹುಟ್ಟಿಸುವ ಮುಖಭಾವ, ಮುಗ್ಧ–ಸರಳ ಮನಸ್ಸು, ಎದ್ದು ಕಾಣುವ ವ್ಯಕ್ತಿತ್ವವಿತ್ತು. ಅವರು ಒರಟುತನವಿಲ್ಲದ ಖಚಿತತೆಗೆ, ಮನ ನೋಯಿಸದ ನಿಷ್ಠುರತೆಗೆ, ಸೊಗಸಾದ ಮಾತುಗಾರಿಕೆಗೆ ಪ್ರಸಿದ್ಧರಾಗಿದ್ದರು. ಅವರ ದೂರದರ್ಶಿತ್ವ, ಮೂಲಭೂತ ವಿಜ್ಞಾನಿಗಳ ನೆಲಗಟ್ಟು ಸ್ಥಿರವಾಗಿ ಉಳಿಯುವಂತೆ ಮಾಡಿದವು.

ಪರಮಾಣು ಶಕ್ತಿಯನ್ನು ಶಾಂತಿಯುತವಾಗಿ ಬಳಸುವ ವಿಧಾನಗಳಲ್ಲಿ ಡಾ|| ಭಾಭಾ ಮುನ್ನಡೆದರು. ೧) ರೋಗರುಜಿನಗಳ ಪತ್ತೆ ಹಾಗೂ ಉಪಶಮನಗಳ ವ್ಯವಸ್ಥೆ, ೨) ಕೃಷಿ ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚು ಇಳುವರಿ ತರುವ ಬೆಳೆ ತಳಿ ನಿರ್ಮಾಣ, ೩) ವಿದ್ಯುತ್‌ಶಕ್ತಿ ಉತ್ಪಾದನೆ, ೪) ಆಹಾರ ಸಂರಕ್ಷಣೆ, ೫) ಕೀಟ ನಿರ್ಮೂಲನ, ೬) ಚರಂಡಿ ಶುದ್ಧೀಕರಣ ಹೀಗೆ ಇನ್ನೂ ಹಲವಾರು. ಭಾಭಾರವರಿಂದ ಪರಮಾಣು ಶಕ್ತಿಯ ಶಾಂತಿಯುತ ಬಳಕೆಗಳ ಬಗೆಗಿನ ಇಲ್ಲಿನ ವೈವಿಧ್ಯಪೂರ್ಣ ಸಂಶೋಧನೆಗಳು, ಬಡದೇಶವಾದ ಭಾರತವನ್ನು ವೈಜ್ಞಾನಿಕವಾಗಿ ಅಭಿವೃದ್ಧಿಗೊಂಡ ರಾಷ್ಟ್ರವೆಂದು ಸಾರಲು ಸಹಾಯ ಮಾಡಿವೆ. ಅವರ ಜನ್ಮದಿನದ ಸಂದರ್ಭದಲ್ಲಾದರೂ ಶ್ರೀ ಮಹಾ ಮೇಧಾವಿ, ವಿಜ್ಞಾನಿ, ಮಹಾಶಾಂತಿಪುರುಷನನ್ನು ನೆನೆದು ಅವರಿತ್ತ ಶಾಂತಿ ಮಾರ್ಗದಲ್ಲಿ ದೇಶ ಮುನ್ನಡೆಯುವುದರಲ್ಲಿ ಅರ್ಥವಿದೆ.

ಕ್ಷಾತ್ರತೆಯು ಶರೀರ ಪುಷ್ಟ-ಶಕ್ತಿಗಳಲ್ಲಿಲ್ಲ. ಮನೋನಿರ್ಧಾರ ಧೈರ್ಯಗಳಲ್ಲಿದೆ. ನಿರ್ಭಯವಾದ ಮನಸ್ಸಿನಲ್ಲಿದೆ. ಸಹನತೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ, ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು. ತೋಪು ಗುಂಡುಗಳ ಶಕ್ತಿಯಿಲ್ಲದಿದ್ದರೂ ಮೇಲಿನ ಶಕ್ತಿಗಳಿಂದ ವೈರಿಗಳನ್ನು ಗೆಲ್ಲಬಹುದು.

ಗಾಂಧೀಜಿ

ವಿಶ್ವದ ಕಾಣೆಯಾದ ವ್ಯಕ್ತಿಗಳ ಬಲುದೊಡ್ಡ ಕಚೇರಿ

ಡೆಬೊರಾ ಕೌಲಿ

ವ್ಯಾಕುಲರಾದ ನೂರಾರು ಕೈದಿಗಳು ನೋಡುತ್ತಿದ್ದಂತೆಯೇ ೩೫ ರ ಅ್ಯನ್–ಮೇರಿ ಕಾಸಿರ್‌ನಿಕ್‌ಳು ಬಾಗ್ದಾದಿನ ಉತ್ತರಕ್ಕಿರುವ ಇರಾಕಿ ಯುದ್ಧ ಕೈದಿಗಳ ಪಾಳೆಯದ ಧೂಳು ತುಂಬಿದ ಕಾಂಪೌಂಡಿನಲ್ಲಿ ದಾರಿ ಮಾಡಿಕೊಂಡು ಸಾಗಿದ್ದಾಳೆ. ಇರಾನಿ ಸೈನಿಕನೊಬ್ಬನನ್ನು ಪತ್ತೆಮಾಡುವ ಆಸೆಯಿಂದ ಆಕೆ ಅಲ್ಲಿಗೆ ಬಂದಿದ್ದಾಳೆ. ಟೆಹೆರಾನಿನಲ್ಲಿರುವ ಆತನ ತಾಯ್ತಂದೆಗಳು ಅನೇಕ ತಿಂಗಳುಗಳಿಂದ ಅವನ ಕಾಗದ ಕಂಡಿಲ್ಲ.

* ಎಲ್ ಸಾಲ್ವಡಾರ್‌ನ ಚಾಲಟೆನಾಂಗೊ ಪ್ರಾಂತ್ಯದಲ್ಲಿ ೨೭ ರ ಸೋಫಿರೋಸಿಲಿಯಾನ್ ಹೋರಾಟದಲ್ಲಿ ಸೆರೆ ಸಿಕ್ಕಿದ ಹದಿನಾರು ಮಂದಿ ಹದಿಹರೆಯದ ಹುಡುಗರನ್ನು ಸಂಪರ್ಕಿಸಲು ಅವಕಾಶ ಕೊಡಬೇಕೆಂದು ಗೆರಿಲ್ಲಾ ಮುಖಂಡರ ಮನ ಒಲಿಸಿದಳು. ವ್ಯಾಕುಲಚಿತ್ತರಾದ ಕುಟುಂಬದವರಿಗೆ ಆಕೆ ಭರವಸೆ ಕೊಡುತ್ತಾಳೆ.

* ದಕ್ಷಿಣಯೆಮನ್‌ನಲ್ಲಿ ನಾಗರಿಕ ಯುದ್ಧದ ಮಧ್ಯೆ, ಎಡನ್ನಿನಲ್ಲಿ ಬೆಂಕಿ ಉಗುಳುತ್ತಿದ್ದ ಬಂದೂಕುಗಳು ಹಾಗೂ ರಸ್ತೆ ಕಾಳಗಗಳ ನಡುವೆ ದಾರಿ ಮಾಡಿಕೊಳ್ಳುತ್ತಾ, ೩೮ ರ ಜಾರ್ಜ್‌ಸ್ಪೋಕ್ಲೆಸ್ ಆಸ್ಪತ್ರೆ ತಲುಪಲು ಹವಣಿಸುತ್ತಾನೆ, ಅಲ್ಲಿ ಆತ ವಾರ್ಡುಗಳಲ್ಲಿ ಹುಡುಕುತ್ತಾನೆ, ರೋಗಿಗಳು ಮತ್ತು ಕೆಲಸಗಾರರನ್ನು ಕಾಣೆಯಾದ ಡಜನ್ನುಗಟ್ಟಲೆ ಯೆಮೆನೀಯರ ಬಗ್ಗೆ ಪ್ರಶ್ನಿಸುತ್ತಾನೆ.

ಈ ಧೈರ್ಯಶಾಲಿ ಯುವ ವಿಚಾರಣಾಧಿಕಾರಿಗಳು ಅಂತರ ರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯ (ಐ.ಸಿ.ಆರ್.ಸಿ) ಪ್ರಮುಖ ಶಾಖೆಯಾದ ಜಿನೀವಾ ಮೂಲದ ಸೆಂಟ್ರಲ್ ಟ್ರೇಸಿಂಗ್ ಏಜೆನ್ಸಿಯ ಹೆಸರಾಗಿದ್ದು,

---

೧೯೮೮ ಫೆಬ್ರುವರಿ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾಗಿರುವ "ದಿ ವರ್ಲ್ಡ್ಸ್ ಲಾರ್ಜೆಸ್ಟ್ ಮಿಸಿಂಗ್ ಪರ್ಸನ್ಸ್ ಬ್ಯೂರೊ" ಲೇಖನದ ಅನುವಾದ.

ಯುದ್ಧದ ಮುನ್ನೆಲೆಯಲ್ಲಿ ಕಾಣೆಯಾಗಿದ್ದವರನ್ನು ಹುಡುಕುವುದು, ತಮ್ಮ ಕುಟುಂಬದವರೊಡನೆ ಸಂಬಂಧ ಮರುಗಳಿಸಿಕೊಳ್ಳಲು ಸಹಾಯ ಮಾಡುವುದು ಮತ್ತು ಸಂಭವನೀಯವಾದಾಗಲೆಲ್ಲ ಅವರನ್ನು ಪುನಃ ಸೇರುವಂತೆ ಮಾಡುವುದಕ್ಕೆ ಅವರು ಯತ್ನಿಸುತ್ತಿದ್ದರು. ಯುದ್ಧಕೈದಿಗಳ ಅಥವಾ ಒತ್ತೆಯಾಳುಗಳಿಗಾಗುವಂತೆ ಪುನರ್ಮಿಲನ ಸಾಧ್ಯವಾಗದಿದ್ದರೆ, ಏಜೆನ್ಸಿ ಸಂದೇಶಗಳು ವಿನಿಮಯವಾಗುವಂತೆ ಮಾಡುತ್ತದೆ. ೧೯೮೬ರಲ್ಲಿ ಏಜೆನ್ಸಿ ೭,೦೦೦ ಕಾಣೆಯಾಗಿದ್ದ ವ್ಯಕ್ತಿಗಳನ್ನು ಪತ್ತೆ ಮಾಡಿತು, ೬೯೦ ಕುಟುಂಬಗಳನ್ನು ಒಂದುಗೂಡಿಸಿತು. ೨.೩ ಮಿಲಿಯಕ್ಕಿಂತಲೂ ಹೆಚ್ಚು ಸಂದೇಶಗಳು ರೆಡ್‌ಕ್ರಾಸ್‌ನ ವಿಶೇಷ ಕ್ರಮಗಳಿಂದ ವಿನಿಮಯವಾದುವು.

ಕಾಣೆಯಾದ ಬಂಧು ಅಥವಾ ಸ್ನೇಹಿತನನ್ನು ಪತ್ತೆಹಚ್ಚಲು ಸಹಾಯ ಮಾಡಬೇಕೆಂದು ಪತ್ರ ಬಂದಾಗ ಉತ್ತರರೂಪವಾಗಿ ಹುಡುಕುವವರನ್ನು ನೇಮಿಸುವುದು ಸಾಮಾನ್ಯ. ಒಂದು ಕಾಲದಲ್ಲಿ 'ಪ್ರಪಂಚದ ಕಾಣೆಯಾದ ವ್ಯಕ್ತಿಗಳ ಬಹುದೊಡ್ಡ ಕಚೇರಿ' ಎಂದು ಕರೆಸಿಕೊಳ್ಳುತ್ತಿದ್ದ ಏಜೆನ್ಸಿ ೧೯೮೬ರಲ್ಲಿ ೨೧,೩೦೦ ಈ ತರಹೆಯ ಬೇಡಿಕೆಗಳನ್ನು ಪಡೆದಿತ್ತು. ಇತ್ತೀಚಿನ ಘರ್ಷಣೆಯ ಬಲಿಪಶುಗಳು ಬಲು ಚಿಂತಿತರು, ಆದರೆ ಇತರರು ಎರಡನೆಯ ಮಹಾಯುದ್ಧದಷ್ಟು ಹಿಂದಿನ ಘಟನೆಗಳಿಂದ ಉದ್ಭವಿಸಿದವರು. ಏಜೆನ್ಸಿಯ ಮುಖ್ಯಸ್ಥ ಫ್ರಾಂಕಾಯಿಸ್ ಪೆರೆಜ್ ಹೇಳುತ್ತಾರೆ—"ಬಂಧುವೊಬ್ಬರನ್ನು ಅಥವಾ ತಾವು ಪ್ರೀತಿಸುವ ಒಬ್ಬರನ್ನು ಕಳೆದುಕೊಂಡಿರುವ ಅನೇಕರಿಗೆ, ಅವರ ಕಡೆಯ ಭರವಸೆ ನಾವಾಗಿದ್ದೇವೆ. ರೆಡ್‌ಕ್ರಾಸಿನ ಬಹುತೇಕ ಚಟುವಟಿಕೆಗಳು ಯುದ್ಧಬಲಿಪಶುಗಳ ದೈಹಿಕ ಸುಸ್ಥಿತಿಯತ್ತಲೇ ಕಾಳಜಿ ವಹಿಸುತ್ತಿದ್ದರೆ, ನಾವು ಅವರ ಮಾನಸಿಕ ವೇದನೆಯನ್ನು ಕೊಂಚಮಟ್ಟಿಗಾದರೂ ಹಗುರಗೊಳಿಸಲು ಪ್ರಯತ್ನಿಸುತ್ತೇವೆ. ನಾವು ನೈತಿಕತೆಯನ್ನು ಪೋಷಿಸುತ್ತಿರುವವರು ಎಂದು ನೀವು ಹೇಳಬಹುದು.

ಬರೆಯುವ ನಿಯಮ: ಅವು ಅಷ್ಟೇ ಸರಿ. ಸುಮಾರು ೭೦ ದೇಶಗಳಿಗೆ ಸಂಬಂಧ ಕೂಡಿಸುವ ವಿಶ್ವವ್ಯಾಪಿ ಸಮಾಚಾರಜಾಲಕ್ಕೆ ವಂದನೆಗಳು. ತುರ್ತು ಪರಿಸ್ಥಿಯಲ್ಲಿ ಎರಡರಷ್ಟಾಗಬಲ್ಲ ೩೦ ಪ್ರತಿನಿಧಿಗಳು ಮತ್ತು ೧೦೦ ಸ್ಥಳೀಯ ಉದ್ಯೋಗಿಗಳು ಹೋರಾಟವೇ ದಿನದಿನದ ಸತ್ಯವಾಗಿರುವ ದೇಶಗಳಲ್ಲಿ ೧೮ ಸಿ.ಟಿ.ಎ ಕಚೇರಿಗಳಲ್ಲಿ ಕೆಲಸ ಮಾಡುತ್ತಾರೆ. ಎಲ್ಲಾ ಐ.ಸಿ.ಆರ್.ಸಿ ಪ್ರತಿನಿಧಿಗಳಂತೆ ಅವರಿಗೂ ಬಹುತೇಕ ಯುದ್ಧ ವಲಯಗಳನ್ನು ಪ್ರವೇಶಿಸಲು ಅಪ್ಪಣೆ ಉಂಟು. ಯುದ್ಧ ಬಲಿಪಶುಗಳನ್ನು ನಡೆಸಿಕೊಳ್ಳುವುದರ ಕುರಿತು ನಿಯಮಗಳನ್ನು ರೂಪಿಸಿದ ಜಿನೀವಾ ಸಭೆಗೆ ವಂದನೆಗಳು. ಪತ್ತೆಹಚ್ಚುವ ಕೌಶಲ್ಯದಲ್ಲಿ ವಿಶೇಷ ತರಬೇತಿ ಪಡೆದಿರುವ ಉದ್ಯೋಗಿಗಳು ರಾಷ್ಟ್ರೀಯ ರೆಡ್‌ಕ್ರಾಸ್ ಹಾಗೂ ರೆಡ್‌ಕ್ರೆಸೆಂಟ್ ಸೊಸೈಟಿಗಳಿಗೆ ಸೇರಿದವರಾಗಿದ್ದು ಸುಮಾರು ೫೦ ಇತರೆ ದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ಈ ಅಗಾಧ ಜಾಲ ಜಿನೀವಾದ ಪ್ರಧಾನ ಕಚೇರಿಯ ೧೦೦ ಮಂದಿ ಉದ್ಯೋಗಿಗಳ ಜೊತೆ ನಿಕಟವಾಗಿ ಕೆಲಸ ಮಾಡುತ್ತದೆ. ಎಲ್ಲೆಲ್ಲಿರುವ ಕೈದಿಗಳು ಮತ್ತು ತಡೆಹಿಡಿಯಲ್ಪಟ್ಟಿರುವವರ ಬಗ್ಗೆ ಬೃಹತ್ ವಿಷಯ ಸಂಗ್ರಹಣಾ ಬ್ಯಾಂಕನ್ನು ಅವರುಗಳು

ಬೆರಳತುದಿಯಲ್ಲೇ ಇಟ್ಟುಕೊಂಡಿರುತ್ತಾರೆ. ಕಟ್ಟಡದ ಮೂರು ಮಹಡಿಗಳಲ್ಲಿ ೧೧ ದಶಕಗಳ ವ್ಯಾಪ್ತಿಯ ಯುದ್ಧಬಲಿಪಶುಗಳ ವಿವರಗಳುಳ್ಳ ೬೦ ಮಿಲಿಯ ಸೂಚಕ ಪಟ್ಟಿಕೆಗಳನ್ನು ಪೆಟ್ಟಿಗೆಗಳಲ್ಲಿ ತುಂಬಿರಿಸಿದ್ದಾರೆ.

ಸ್ವಿಸ್ ಸರಕಾರ ದಾನವಾಗಿ ಕೊಟ್ಟಿರುವ ಐಬಿಎಂ-೩೮ ಕಂಪ್ಯೂಟರ್ ೧೯೮೧ ರಿಂದೀಚೆಗೆ ಗುರುತಿಸಲಾಗಿರುವ ೮೦೦೦,೦೦೦ ಕಾಳಗಗಳ ಬಲಿಪಶುಗಳ ಹೆಸರುಗಳನ್ನು ಗರ್ಭಿಸಿಟ್ಟುಕೊಂಡಿದೆ. ಏಜೆನ್ಸಿಯ ಉಪ ಮುಖ್ಯಾಧಿಕಾರಿ ನಿಕೊಲಾಸ್ ವೆಸಿ ಹೇಳುತ್ತಾರೆ—“ಈ ದಾಖಲೆಗಳು ನಮ್ಮ ಜೀವನರೇಖೆ. ನಮ್ಮ ಅಲಿಖಿತದ ನಿಯಮವೇನೆಂದರೆ ‘ನೀನು ಹೊಸ ಹೆಸರೊಂದನ್ನು ಕಂಡುಹಿಡಿದರೆ ಅದನ್ನು ಅಪ್ಪಳಿಸಿಹಾಕು’, ಆ ವ್ಯಕ್ತಿಗಾಗಿಯೆ ಯಾವಾಗ ಯಾರಾದರೂ ಹುಡುಕುತ್ತಿರಬಹುದೆಂಬುದನ್ನು ಹೇಳಲಾಗುವುದಿಲ್ಲ”.

ತಟಸ್ಥ ಪ್ರತಿನಿಧಿಗಳು : ೧೯೭೭ರಲ್ಲಿ ಹಂಗೆರಿಯ ಮಹಿಳೆಯೊಬ್ಬಳು ತನ್ನ ಮಗ ಜ್ಯಾನೋಸ್* ೧೦ ವರ್ಷಗಳ ಹಿಂದೆ ಮನೆಬಿಟ್ಟನೆಂದು ಬರೆದಾಗ ಇಂಥದೊಂದು ಸಂಗತಿ ಸಂಭವಿಸಿತು. ಆತನ ಕೊನೆಯ ಪತ್ರ ಎಲ್ ಸಾಲ್ವಡಾರ್‌ನಿಂದ ಒಂದು ವರ್ಷಕ್ಕೆ ಮುಂಚೆ ಬಂದಿತ್ತು. ದಾಖಲೆಗಳು ಆ ಯುವಕನ ಸುಳಿವೇನೂ ತೋರಿಸಲಿಲ್ಲ. ಅನಂತರ ೧೯೮೨ರ ಏಪ್ರಿಲ್‌ನಲ್ಲಿ ಎಲ್ ಸಾಲ್ವಡಾರ್‌ನ ಸುಳಿವುಗಾರ ಪ್ರತಿನಿಧಿಯೊಬ್ಬ, ಸೆರೆಹಿಡಿದಿಡುವ ಕೇಂದ್ರದಲ್ಲಿ ಸಂಪರ್ಕರಹಿತನೆಂದು ಹಿಡಿದಿಟ್ಟಿದ್ದ ಹಂಗೆರಿಯವನೊಬ್ಬನನ್ನು ಭೇಟಿಮಾಡಿದ. ಐದು ವರ್ಷಗಳ ಹಿಂದೆ ಹಂಗೆರಿಯಿಂದ ಬಂದ ಕೇಳಿಕೆಗೆ ಹೊಂದಿಸಿ ನೋಡಲು ಪ್ರಧಾನ ಕಚೇರಿಕೆಗೆ ಕಳುಹಿಸಿದ ೧೨೦ ಸೆರೆಯಾಳುಗಳಲ್ಲಿ ಅವನ ಹೆಸರೂ ಸೇರಿತ್ತು. ಅಲ್ಲಿನ ಪ್ರತಿನಿಧಿ ಜ್ಯಾನೋಸ್‌ನನ್ನು ಹುಡುಕಿದ ಮತ್ತು ಅವನ ತಾಯಿಗೆ ಆರು ವರ್ಷಗಳಲ್ಲಿ ಪ್ರಥಮ ಸಂದೇಶ ರವಾನಿಸಲು ಶಕ್ತನಾದ.

ಯಾವಯಾವಾಗ ಯುದ್ಧ ತಲೆಹಾಕುತ್ತದೋ ಆವಾಗಲೆಲ್ಲಾ ಮೊದಲು ಕುಸಿಯುವ ಕೆಲವು ವ್ಯವಸ್ಥೆಗಳಲ್ಲಿ ಅಂಚೆಯದೂ ಒಂದು. ಏಜೆನ್ಸಿಯ ‘ಅಂಚೆ ಪದ್ಧತಿ’ ಒಗಾಡೆನ್ ಮರುಭೂಮಿಯಲ್ಲಿನ ಇಥಿಯೋಪಿಯಾ/ಸೋಮಾಲಿಯಾ ಕಾದಾಟದಲ್ಲಿ ಎರಡೂ ಕಡೆಯ ಕೈದಿಗಳಿಗೆ ಮನೆಯವರಿಗೆ ಸಂದೇಶ ಕಳುಹಿಸಲು ಅವಕಾಶ ಕಲ್ಪಿಸಿದೆ. ಹಾಂಡುರನ್ ಶಿಬಿರಗಳಲ್ಲಿರುವ ನಿಕಾರಾಗುವ ನಿರಾಶ್ರಿತರಿಗೆ ಮನೆಯಿಂದ ಸಂದೇಶಗಳನ್ನು ಪಡೆಯುವುದಕ್ಕೆ ಸಹಾಯ ಮಾಡಿತು. ಇಸ್ರೇಲಿನಲ್ಲಿರುವ ಪ್ಯಾಲೆಸ್ಟೈನ್ ಕೈದಿಗಳು ಮತ್ತು ಇಸ್ರೇಲಿನವರು ಆಕ್ರಮಿಸಿಕೊಂಡಿದ್ದ ಪ್ರಾಂತ್ಯದವರು ವಾರಕ್ಕೊಮ್ಮೆ ತಮ್ಮ ಕುಟುಂಬದವರೊಡನೆ ೨೦೦ ಸಂದೇಶಗಳನ್ನು ವಿನಿಮಯ ಮಾಡಿಕೊಳ್ಳುವಲ್ಲಿ ನೆರವಾಯಿತು.

ಏಜೆನ್ಸಿಯ ದಾಖಲೆಗಳು ಅದರ ಅತೀವ ಪ್ರಮುಖ ಉಪಕರಣ. ಬೀಭತ್ಸ, ಹಲವು ಬಾರಿ ಅಪಾಯಕರವಾದ ಕೆಲಸವನ್ನು ನಿರ್ವಹಿಸುವ ೨೫-೪೫ರ ವಯೋಮಾನದಲ್ಲಿರುವ ಎಲ್ಲಾ ಸುಳಿವುಗಾರ ಪ್ರತಿನಿಧಿಗಳೂ ಸ್ವಿಸ್ ರಾಷ್ಟ್ರೀಯರು (ತಮ್ಮ ತಟಸ್ಥತೆ

*ಏಜೆನ್ಸಿ ಸಹಾಯ ಮಾಡಿರುವ ವ್ಯಕ್ತಿಗಳ ಹೆಸರುಗಳನ್ನು ಬದಲಾಯಿಸಲಾಗಿದೆ.

ಯನ್ನು ಖಾತರಿ ಪಡಿಸಲು), ಹೇರಳ ಮುನ್ನುಗ್ಗುವಿಕೆ, ಹಾಗೂ ಹಲವು ಸಲ ಧೈರ್ಯದ ಅಂಶಗಳಿಂದ ಅಚ್ಚುಕಟ್ಟಾಗಿ ಸುಸಜ್ಜಿತರಾಗಿ ಅವರು ಕಾರು, ಬಸ್ಸು, ರೆಡ್‌ಕ್ರಾಸಿನ ಜೀಪು, ಒಂದೊಂದು ಸಲವಂತೂ ಯುದ್ಧದ ಸಾಲುಗಳ ನಡುವೆ ತೂರಿಕೊಂಡು ಹಾಗೂ ಬಂದೂಕಿನ ಬೆಂಕಿಯಿಂದ ನುಣುಚಿಕೊಳ್ಳುತ್ತಾ ಪ್ರಯಾಣಿಸುತ್ತಾರೆ.

ಆಫ್ರಿಕದ ಚಾಡ್‌ದೇಶದಲ್ಲಿ ಒಂದು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ಪದೇ ಪದೇ ನಡೆಯುತ್ತಿರುವ ಯುದ್ಧದ ಪಿಡುಗಿನಿಂದಾಗಿ ಪ್ರತಿನಿಧಿ ಗಿಯಾನಿಯಾ ಸ್ಪಿನಾಟ್ಸ್ ಮತ್ತು ಇಬ್ಬರು ಸಹೋದ್ಯೋಗಿಗಳು ೧೯೮೦ರ ಜನವರಿಯಲ್ಲಿ ವಿಸ್ತಾರವಾದ ಬಂಡೆಗಳಿರುವ ಉತ್ತರದ ಪಾಳುಭೂಮಿಯಲ್ಲಿ ಚದರಿಹೋಗಿರುವ ಸುಮಾರು ೧೦೦೦ ಯುದ್ಧಕೈದಿಗಳನ್ನು ಉತ್ತರದಲ್ಲಿರುವ ಓಯಸಿಸ್ ಇರುವ ಸ್ಥಳಗಳಲ್ಲೆಲ್ಲಾ ಹುಡುಕುತ್ತಾ ೧೦ ದಿನಗಳನ್ನು ಕಳೆದರು. "ನಾವು ಅವರೆಲ್ಲರನ್ನೂ ಪತ್ತೆಹಚ್ಚಿದೆವು" ಎನ್ನುತ್ತಾರೆ ಸ್ಪಿನಾಟ್ಸ್. ಅವರ ಕುಟುಂಬದವರಿಗಾಗಿ ಆತ ಸಂದೇಶಗಳನ್ನು ಕೊಂಡೊಯ್ದರು. ಅದು ಎರಡು ವರ್ಷಗಳಲ್ಲಿ ಮೊದಲ ಬಾರಿಗೆ ಪಡೆದುದಾಗಿತ್ತು.

ಜಟಿಲತೆಗಳು : ಇಪತ್ತು ಸಿ.ಟಿ.ಎ ಪ್ರತಿನಿಧಿಗಳಿಗೆ ಪರ್ಶಿಯನ್ ಖಾರಿ ಪ್ರದೇಶ ಉದ್ರೇಕಿಸುವ ಸ್ಥಳ. ಇಲ್ಲಿ ೧೯೮೦ರ ಸೆಪ್ಟೆಂಬರ್‌ನಿಂದ ಇರಾನ್ ಮತ್ತು ಇರಾಕ್ ಯುದ್ಧ ಮಾಡುತ್ತಲೇ ಇವೆ. ಇರಾನಿನ ಶಿಬಿರದಲ್ಲಿ ೪೬,೦೦೦ಕ್ಕೂ ಹೆಚ್ಚು ಇರಾಕಿಯರನ್ನು ತಡೆ ಹಿಡಿದು ಇರಿಸಿಕೊಂಡಿದ್ದರೆ ಇರಾಕಿನಲ್ಲಿ ಸುಮಾರು ೧೩,೦೦೦ ಇರಾನಿಗಳು ಇದ್ದಾರೆ. ಇವತ್ತಿನವರೆಗೆ ಈ ಕೈದಿಗಳು ಮತ್ತು ಮನೆಯವರ ನಡುವೆ ೯ ಮಿಲಿಯಕ್ಕೂ ಮೀರಿ ಸಂದೇಶಗಳು ವಿನಿಮಯವಾಗಿವೆ. ೧೯೮೪ ಅಕ್ಟೋಬರ್ ಮತ್ತು ೧೯೮೬ ಡಿಸೆಂಬರ್‌ಗಳ ನಡುವೆ ಇರಾನಿನ ಶಿಬಿರಗಳೊಳಗೆ ಪ್ರವೇಶಿಸಲು ಸಿ.ಟಿ.ಎ.ಗೆ ಅನುಮತಿ ನಿರಾಕರಿಸಲಾಯಿತು. ಆದ್ದರಿಂದ ಇರಾನಿ ಅಧಿಕಾರಿಗಳ ಮುಖಾಂತರ ಇರಾಕಿ ಕೈದಿಗಳಿಗೆ ಕಾಗದ ಪತ್ರಗಳನ್ನು ರವಾನಿಸುತ್ತಾರೆ.

ಈಗಲೂ ಸಂದೇಶಗಳು ಈ ತರಹದಲ್ಲೇ ರವಾನೆಯಾಗುತ್ತಿದ್ದರೂ, ಈಗ ಇರಾನ್ ಮತ್ತು ಇರಾಕ್‌ನಲ್ಲಿ ಕೂಡಾ, ಪ್ರತಿನಿಧಿಗಳು ಶಿಬಿರಗಳನ್ನು ಕ್ರಮಬದ್ಧವಾಗಿ ಸಂದರ್ಶಿಸುತ್ತಾರೆ. ಹೊಸ ಇಂಟರ್ನಿಗಳನ್ನು ದಾಖಲು ಮಾಡುವುದು, ಕಾಣೆಯಾಗಿರುವ ಬಂಧುಗಳನ್ನು ಹುಡುಕುವುದು ಅಥವಾ ಸುಮ್ಮನೆ ಸಮಾಧಾನ ಮಾಡುವುದು ಮತ್ತು ಸಂತೈಸುವುದು ನಡೆದಿದೆ. ಸಿ.ಟಿ.ಎ.ನ ಇರಾನ್/ಇರಾಕ್ ವಿಭಾಗದ ನೂತನ ಮುಖ್ಯಸ್ಥ ವ್ಯಾಸ್ಸಿಮೊಕಟಾಲ್ಡಿ ಹೇಳುತ್ತಾರೆ—"ಆ ಕೈದಿಗಳಲ್ಲಿ ಬಹಳ ಎದೆಗುಂದಿಕೆ ಮತ್ತು ಏಕಾಂಗಿ ತನ, ಅದರಲ್ಲೂ ನಾಕು-ಐದು ವರ್ಷಗಳಿಂದ ಅಲ್ಲೇ ಇರುವ ಕೆಲವರಲ್ಲಿ ಇರುತ್ತದೆ. ಒಂದು ಪತ್ರ ಎಂದರೆ ಎಷ್ಟೆನಿಸುತ್ತದೆ ಎನ್ನುವುದನ್ನು ಎಲ್ಲೋ ಕೆಲವರು ಮಾತ್ರ ಅರ್ಥಮಾಡಿಕೊಂಡಿರುತ್ತಾರೆ."

ಆಗ್ನೇಯ ಏಷ್ಯಾದಲ್ಲಿ ಸುಳಿವುಗಾರ ಪ್ರತಿನಿಧಿಯ ಕೆಲಸವು ಹೆಸರುಗಳ ಕಾಗುಣಿತದಲ್ಲಿನ ವ್ಯತ್ಯಾಸಗಳು ಮತ್ತು ಹೆಸರುಗಳನ್ನು ನಮೂದಿಸುವಾಗ ಜಟಿಲವಾಗಬಹುದು. ಉದಾಹರಣೆಗೆ ವಿಯಟ್ನಾಮಿನ ನಿರಾಶ್ರಿತರು ಒಂದು ಹೆಸರಿಗೇ ಆರು ವಿವಿಧ ವ್ಯತ್ಯಾಸ

ಗಳನ್ನು ಉಪಯೋಗಿಸಬಲ್ಲರು. ಕಾಂಪೂಚಿಯಾದ (ಮೊದಲಿನ ಕಾಂಬೋಡಿಯ) ಖ್ಮೇರ್ ನಿರಾಶ್ರಿತರು ಗೋಲ್‌ಪಾಟ್ ತುಕಡಿಯಲ್ಲಿ ತಮ್ಮ ಗುರುತನ್ನು ಮರೆಮಾಚಿ ಕೊಳ್ಳಲು ಹಲವುಸಲ ನಿರ್ಬಂಧಕ್ಕೀಡಾಗುತ್ತಿದ್ದರು, ಮನಃಪೂರ್ವಕವಾಗಿ ಐದು ವಿವಿಧ ಹೆಸರುಗಳನ್ನು ಕೊಡುತ್ತಿದ್ದರು. ಜಾರ್ಜ್ ಸ್ವಾಕ್ಲಿನ್ ಸ್ಮರಿಸಿಕೊಳ್ಳುತ್ತಾರೆ—"ಖ್ಮೇರರ ನಿರ್ಗಮನ ಅಧಿಕತಮವಾಗಿದ್ದಾಗ ನಮ್ಮ ಸೂಚಕ ಪಟ್ಟಿಕೆ ಎರಡು ಟನ್ ತೂಕವಿತ್ತು."

ಈ ತರಹದ ಚಮತ್ಕಾರಿಕ ಸಮಸ್ಯೆಗಳಿದ್ದಾಗ್ಯೂ, ಏಜೆನ್ಸಿಯ ಪ್ರತಿನಿಧಿಗಳು ಹೇಗೋ ಆಶ್ಚರ್ಯಕರವಾಗಿ ಭೇದಿಸಿ, ನಿಭಾಯಿಸುತ್ತಾರೆ. ಉದಾಹರಣೆಗೆ ಆ್ಯಂಡ್ರೆ ಕೋಲೋಂಬ್ ಥಾಯ್‌ಗಡಿಯಲ್ಲಿ ನಿರಾಶ್ರಿತರ ಶಿಬಿರದಲ್ಲಿ ಕಾಂಪೂಚಿಯನ್ನನ ಜೊತೆ ಕೆಲಸ ಮಾಡುತ್ತಿದ್ದ, ಫ್ರಾನ್ಸಿನಲ್ಲಿ ವಾಸಿಸುತ್ತಿದ್ದ ಕಾಂಬೋಡಿಯನ್ ಮಹಿಳೆ ಸೋಪ್ರೋಅನ್ ವನ್ನ ತನ್ನ ಮಗಳನ್ನು ಅರಸುತ್ತಾ ಬಂದಳು. ಆಕೆ ಫಾಮ್ ಪೆನ್ಹ್‌ನಿಂದ ಐದು ವರ್ಷಗಳ ಹಿಂದೆ ಏರ್‌ಲಿಫ್ಟ್ ಆಗಿ ಬಂದಿದ್ದವಳು. ಆಕೆ ಆರು ತಿಂಗಳ ಮಗುವನ್ನು ಹಿಂದೆಯೇ ಬಿಟ್ಟು ಬರುವುದು ಅನಿವಾರ್ಯವಾಗಿತ್ತು. ಕೋಲೋಂಬ್ ನೆನೆಸಿಕೊಳ್ಳುತ್ತಾನೆ—"ಆಕೆಯ ಬಳಿ ಇದ್ದುದೆಲ್ಲಾ ಮಗುವಿನ ಹೆಸರು ಮತ್ತು ವಯಸ್ಸು ಮಾತ್ರ. ಆ ಸಮಯದಲ್ಲಿ ನಿರಾಶ್ರಿತರ ಗಡಿ ಶಿಬಿರಗಳಲ್ಲಿ ಅರ್ಧ ಮಿಲಿಯನ್ ನಿರಾಶ್ರಿತರಿದ್ದರು."

ಧೈರ್ಯಗುಂದದೆ ಕೋಲೋಂಬ್ ನಿರಾಶ್ರಿತರ ಹೆಸರುಗಳಿದ್ದ ಪಟ್ಟಿಗಳನ್ನು ಕೂಲಂಕಶವಾಗಿ ಹುಡುಕಿದ. ಪ್ರತಿಯೊಂದು ಸಂಭವನೀಯ ಹೆಸರನ್ನು, ಮಗುವಿನ ಹುಟ್ಟಿದ ತಾರೀಕು ಮತ್ತು ಸ್ಥಳ, ಕೊನೆಯ ವಿಳಾಸ, ನೆಂಟರ ಹೆಸರುಗಳು ಎಲ್ಲವನ್ನೂ ಪರಿಶೀಲಿಸಿದ, ಕೊನೆಗೊಮ್ಮೆ ಆತ ಮಗುವಿನ ಚೆಹರೆಪಟ್ಟಿಗೆ ಸನಿಹವಾಗಿ ಹೋಲುತ್ತಿದ್ದ ಒಂದು ಪಟ್ಟಿಕೆಯನ್ನು ಕಂಡುಹಿಡಿದ. ಆ ಹೆಣ್ಣು ಮಗು ೩೦೦ ಕಿಲೊ ಮೀಟರ್ ದೂರದಲ್ಲಿದ್ದ ಶಿಬಿರವೊಂದರಲ್ಲಿ ಇರುವುದನ್ನು ದಾಖಲೆಗಳು ತೋರಿಸಿದುವು. ಅದಕ್ಕೆ ಆ್ಯಂಡ್ರೆ ಶಿಬಿರಕ್ಕೆ ಬಂದು, ಮಗುವನ್ನು ಗುರುತಿಸಿದರು ಹಾಗೂ ಹೊರಕ್ಕೆ ಅದರ ತಾಯಿಯ ಬಳಿಗೆ ಕರೆದುಕೊಂಡುಬಂದ. "ನನ್ನ ಕೆಲಸದಲ್ಲಿ ಅದೂ ಒಂದು ಮಹತ್ತರ ಕ್ಷಣ" ಕೋಲೋಂಬ್ ನುಡಿಯುತ್ತಾರೆ.

೧೮೭೦ರ ಫ್ರಾಂಕೊ–ಪ್ರಷ್ಯನ್ ಯುದ್ಧದಲ್ಲಿ ದಿ ಸೆಂಟ್ರಲ್ ಟ್ರೇಸಿಂಗ್ ಏಜೆನ್ಸಿ ಆರಂಭವಾಯಿತು. ಪ್ರಥಮ ಐ ಸಿ.ಆರ್.ಸಿ. ಪ್ರತಿನಿಧಿಗಳು ಗಾಯಗೊಂಡ ಸೈನಿಕರಿಗೆ ಸಹಾಯ ಮಾಡುವ ಧ್ಯೇಯದಿಂದ ಹೊರಟಾಗ, ತಮ್ಮಗಳ ಮನೆಯವರಿಗೆ ತಾವು ಬದುಕಿರುವೆವೋ ಅಥವಾ ಸತ್ತಿರುವೆವೋ ಎಂಬುದರ ಅರಿವೇ ಇಲ್ಲದಿರುವುದಕ್ಕಾಗಿ ಬಹಳ ಮಂದಿ ಕೈದಿಗಳು ಖಿನ್ನರಾಗಿದ್ದುದನ್ನು ಕಂಡರು. ಕೈದಿಗಳ ಪಟ್ಟಿಗಳನ್ನು ತಯಾರಿಸಲಾಯಿತು. ಸ್ವಿಸ್ ಗಡಿನಗರ ಬೇಸೆಲ್‌ನಲ್ಲಿ ಏಜೆನ್ಸಿಯೊಂದನ್ನು ಸ್ಥಾಪಿಸಿ, ಅದರ ಮುಖಾಂತರ ಕೈದಿಗಳು ತಮ್ಮ ಮನೆಯವರೊಡನೆ ಪತ್ರ ವ್ಯವಹಾರ ನಡೆಸುವಂತಾಯಿತು.

ಮೊದಲನೆ ಮಹಾಯುದ್ಧದ ಸಮಯ ಜಿನೇವಾದಲ್ಲಿ ಸ್ಥಾಪಿತವಾದ ದಿ ಇಂಟರ್ ನ್ಯಾಷನಲ್ ಪ್ರಿಸನರ್ಸ್ ಆಫ್ ವಾರ್ ಏಜೆನ್ಸಿ ಸುಮಾರು ೭ ಮಿಲಿಯನ್ ಹೆಸರು

ಗಳನ್ನು ಯಾದಿಗೆ ಸೇರಿಸಿತು. ಇದರಲ್ಲಿ ಪದಾತಿ ದಳದ ಕ್ಯಾಪ್ಟನ್ ಚಾರ್ಲ್ಸ್ ಡ ಗಾಲ್ ಮತ್ತು ಕೈಮುಂಚ—ಹೊರುಕ ಮಾರಿಸ್ ಶಿವೇಲಿಯರ್‌ರ ಹೆಸರುಗಳೂ ಇದ್ದವು. ಎರಡನೆಯ ಮಹಾಯುದ್ಧ ದಿನವೊಂದಕ್ಕೆ ಸುಮಾರು ೧೦೦,೦೦೦ ಪತ್ರಗಳನ್ನು ಹೊತ್ತು ತಂದಾಗ, ಏಜೆನ್ಸಿಯು ಸುಮಾರು ೩,೦೦೦ ಸ್ವಯಂಸೇವಕ ಸಹಾಯಕರನ್ನು ತೆಗೆದುಕೊಂಡರು. ಅವರು ಬೆರಳಚ್ಚು ಮಾಡಿದ ೩೫ ಮಿಲಿಯನ್ ಪಟ್ಟಿಕೆಗಳು ಯುದ್ಧ ಕೈದಿಗಳ ಬಗ್ಗೆ ಅಧಿಕಾರಯುತ ಸಮಾಚಾರವನ್ನು ಹೋಲುತ್ತಿತ್ತು, ಅವರ ಬಗ್ಗೆ ಸಮಾಚಾರ ಕೋರಿ ಬಂದ ಪತ್ರಗಳೂ ಇದ್ದುವು.

ಯುದ್ಧ ವರ್ಷಗಳ ಸಮಯದಲ್ಲಿ ಯೂರೋಪಿನಲ್ಲೆ ೭೦೦,೦೦೦ ಕೈದಿಗಳಿಗೆ ತಮ್ಮ ತಮ್ಮ ಮನೆಯವರೊಡನೆ ಸಂಬಂಧ ಕಲ್ಪಿಸಿಕೊಟ್ಟುದಲ್ಲದೆ, ಸರಿ ಸುಮಾರು ೧೫೦ ಮಿಲಿಯನ್ ಪತ್ರಗಳ ವಿನಿಮಯವೂ ನಡೆಯಿತು. ೧೯೪೫ರಲ್ಲಿ ಏಜೆನ್ಸಿಯು ಐ.ಸಿ.ಆರ್.ಸಿ.ಯ ಖಾಯಂ ಭಾಗವಾಯಿತು. ೧೯೬೦ರಲ್ಲಿ ದಿ ಸೆಂಟ್ರಲ್ ಟ್ರೇಸಿಂಗ್ ಏಜೆನ್ಸಿ ಎಂದು ಹೆಸರಾಯಿತು.

ಇಂದು, ಈ ಎರಡನೆಯ ಮಹಾಯುದ್ಧದ ದಾಖಲೆಗಳು ಅಡಕವಾಗಿ ಸಂಗ್ರಹಿಸಿಡಲೆಂದು ಭಾಗಶಃ ಮೈಕ್ರೊಫಿಲಂಗೆ ವರ್ಗಾವಣೆಯಾಗಿ, ಅವನ್ನು ಇನ್ನೂ ಉಪಯೋಗಿಸಲಾಗುತ್ತಿದೆ. ಅನೇಕ ಯುದ್ಧ ಕೈದಿಗಳಿಗೆ ಸೆರೆಯಾಳಾಗಿ ಇದ್ದುದಕ್ಕೆ ಇದೊಂದೇ ದಾಖಲೆಯಾಗಿತ್ತು. ನಿವೃತ್ತಿ ವಯಸ್ಸು ಸಮೀಪಿಸುತ್ತಿರುವವರು ಜೈಲಿನಲ್ಲಿ ಕಳೆದ ಕಾಲದ ಬಗ್ಗೆ ಪುರಾವೆಯೆಂದು ತೋರಿಸಿ ಹೆಚ್ಚಿಗೆ ನಿವೃತ್ತಿ ವೇತನ ಪಡೆಯಲು ಅರ್ಹತೆ ಗಳಿಸಲೆಂದು ತಾವು ಕೈದಿಗಳಾಗಿದ್ದುದರ ಬಗ್ಗೆ ಪ್ರಮಾಣ ಪತ್ರ ಬೇಕೆಂದು ಬರೆಯುತ್ತಿದ್ದಾರೆ. (೧೯೭೫ ಮತ್ತು ೧೯೭೬ರಲ್ಲಿ ೧೪,೦೦೦ಕ್ಕೂ ಮೀರಿ ಕೊಡಲಾಗಿದೆ.) ಪಶ್ಚಿಮ ಜರ್ಮನಿಯ ಅರೋಲ್‌ಸೆನ್‌ನಲ್ಲಿರುವ ದಿ ಇಂಟರ್‌ನ್ಯಾಷನಲ್ ಟ್ರೇಸಿಂಗ್ ಸರ್ವಿಸ್ ನಾಜಿಗಳ ಬಲಿಪಶುಗಳಾದ ನಾಗರಿಕರು ಮತ್ತು ಸ್ಥಾನಪಲ್ಲಟಗೊಂಡವರ ಶಿಬಿರಗಳಲ್ಲಿನ ಕಳೆದ ನಿರಾಶ್ರಿತ ಜನಗಳಿಗೂ ಇವೇ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ.

ಎರಡನೆಯ ಮಹಾಯುದ್ಧದ ಪರಿಣಾಮವಾಗಿ ಕಾಣೆಯಾದ ಬಂಧುಗಳನ್ನು ಹುಡುಕುವ ಕೆಲಸ ಈಗಲೂ ನಡೆಯುತ್ತಲೇ ಇದೆ. ದೃಷ್ಟಾಂತವಾಗಿ ಹೇಳುವುದಾದರೆ ಪಶ್ಚಿಮ ಜರ್ಮನಿಯ ಯುವಕ ಜೋಹನ್ ತನ್ನ ರಷ್ಯನ್ ತಂದೆ ಕೆಂಪು ಸೇನೆಯಲ್ಲಿ ಲೆಫ್ಟಿನೆಂಟ್ ಆಗಿದ್ದನೆಂದೂ ಸೆರೆಸಿಕ್ಕಿ ಪೂರ್ವದ ಜರ್ಮನಿಯ ಹಳ್ಳಿಯೊಂದರಲ್ಲಿ ದುಡಿಯಲು ಕಳಿಸಲ್ಪಟ್ಟನೆಂದೂ ಗೊತ್ತಾಗಿರುವುದಾಗಿ, ಆತನಿಂದ ಕೋರಿಕೆ ಪತ್ರ ಬಂತು. ಅಲ್ಲಿ ಆತನಿಗೆ ಜೋಹನ್ನನ ತಾಯಿಯ ಭೇಟಿ ಆಯಿತು. ಯುದ್ಧ ಕೊನೆಗೊಂಡಾಗ ಕೆಂಪು ಸೇನೆ ಮುಂಬರಿದು ಬಂದುದರಿಂದ ಅವರಿಬ್ಬರೂ ಬೇರೆಯಾಗಬೇಕಾಯಿತು. ಏಜೆನ್ಸಿಯ ದಾಖಲೆಗಳಲ್ಲಿ ಆ ಮನುಷ್ಯನ ಬಗ್ಗೆ ಏನೂ ಇರಲಿಲ್ಲ. ಆದುದರಿಂದ ಅವರು ಕೋರಿಕೆಯನ್ನು ರಷ್ಯದ ರೆಡ್‌ಕ್ರಾಸ್ ಮತ್ತು ರೆಡ್‌ಕ್ರೆಸೆಂಟ್ ಸೊಸೈಟಿಗಳ ಮೈತ್ರಿ ಕೂಟಕ್ಕೆ ಕಳುಹಿಸಿಕೊಟ್ಟರು. ಮುಂದಿನ ಜನವರಿಯಲ್ಲಿ ರಷ್ಯನರಿಂದ ಬಂದ ಉತ್ತರ ಒಳ್ಳೆಯ ಸುದ್ದಿಯನ್ನು ಕೊಟ್ಟಿತು. ಅವರು ಆತನನ್ನು ಲೆನಿನ್‌ಗ್ರಾಡ್‌ನಲ್ಲಿ ಕಂಡಿದ್ದರು. ಏಜೆನ್ಸಿಯ ಪ್ರತಿನಿಧಿಗೆ "ನಾನು ಎಷ್ಟು ಸಂತೋಷವಾಗಿದ್ದೇನೆಂದು ನೀವು ಊಹಿಸಲೇ ಲಾರಿರಿ" ಎಂದು ಜೋಹನ್ ಹೇಳಿದ.

ಪ್ರಭಾವೋತ್ಪಾದಕ ದಾಖಲೆ: ಕೆಲಸವನ್ನು ಸುಸಂಘಟಿಸುವ ಪ್ರಯತ್ನದಲ್ಲಿ ಈಗ ಏಜೆನ್ಸಿಯು ಬೇರೆಬೇರೆ ಪ್ರದೇಶಗಳಲ್ಲಿ ಸೆಮಿನಾರುಗಳನ್ನು ನಡೆಸುತ್ತಾ ಬಂದ ಕೋರಿಕೆಗಳನ್ನು ನಿರ್ವಹಿಸಲಾಗುವಂತೆ ರಾಷ್ಟ್ರೀಯ ರೆಡ್‌ಕ್ರಾಸ್ ಮತ್ತು ರೆಡ್‌ಕ್ರೆಸೆಂಟ್ ಸೊಸೈಟಿಯವರು ತಮ್ಮ ಸ್ವಂತ ಸಿಬ್ಬಂದಿಗೆ ತರಬೇತಿ ನೀಡಲು ಸಹಾಯ ಮಾಡುತ್ತಿದೆ. ರಾಷ್ಟ್ರೀಯ ತುರ್ತುಸಮಯಗಳಲ್ಲಿ ಹುಡುಕುವ ಸಮಸ್ಯೆಗಳನ್ನು ನಿರ್ವಹಿಸಲು ಅವರು ಹೆಚ್ಚು ಕ್ಷಮತೆ ಹೊಂದಿರುವಂತೆ ಮಾಡುತ್ತದೆ.

ನಾಗರಿಕ ಅಶಾಂತಿ ಹೆಚ್ಚುತ್ತಿರುವಂತೆಯೇ ಏಜೆನ್ಸಿಯ ಮತ್ತೊಬ್ಬರಿಗಾಗಿ ಕಾರ್ಯ ನಿರ್ವಹಿಸಲು ಕೊಟ್ಟ ನಿಯೋಗವೂ ಕೂಡಾ. ವಾರ್ಷಿಕ ಬಜೆಟ್ ೫ ಮಿಲಿಯನ್‌ಗೂ ಹೆಚ್ಚು ಸ್ವಿಸ್‌ಫ್ರಾಂಕು*ಗಳಲ್ಲಿ ಅದು ಕೆಲಸ ನಡೆಸುತ್ತದೆ. ಅದರಲ್ಲಿ ಅರ್ಧದಷ್ಟನ್ನು ಸ್ವಿಸ್ ಸರಕಾರ ದಾನವಾಗಿ ಕೊಡುತ್ತದೆ, ಉಳಿದ ಅರ್ಧ ಭಾಗ ಜಿನೇವಾ ಕನ್‌ವೆನ್‌ಷನ್ಸ್‌ಗೆ ಸಹಿ ಮಾಡಿರುವ ದೇಶಗಳಿಂದ ಬರುತ್ತದೆ. ಸ್ವಿಸ್ ಸರಕಾರ ೧೯೮೮ರಲ್ಲಿ ತೆರೆದ ನೂತನ ಸಿ.ಟಿ.ಎ. ಕಟ್ಟಡಕ್ಕಾಗಿ ೧೫ ಮಿಲಿಯನ್ ಸ್ವಿಸ್ ಫ್ರಾಂಕ್‌ಗಳನ್ನು ಕಾಣಿಕೆ ನೀಡಿದೆ.

ಕಳೆದ ಶತಮಾನದುದ್ದಕ್ಕೂ ದಿ ಸೆಂಟ್ರಲ್ ಟ್ರೇಸಿಂಗ್ ಏಜೆನ್ಸಿಯು ದಿಟವಾಗಿಯೂ ಪ್ರಭಾವೋತ್ಪಾದಕ ದಾಖಲೆಯನ್ನು ನಕ್ಷಿಸಿದೆ. ಇದಕ್ಕಾಗಿ ಅವರು ಸಾಕಷ್ಟು ಕಷ್ಟಪಟ್ಟಿದ್ದಾರೆ. ತನ್ನ ೩೦ ವರ್ಷಗಳ ವೃತ್ತಿಜೀವನದಲ್ಲಿ ೧೨ಕ್ಕೂ ಹೆಚ್ಚು ತೊಂದರೆ ಸ್ಥಳಗಳಲ್ಲಿ ಕೆಲಸ ಮಾಡಿರುವ ನಿಕೊಲಾಸ್ ವೆಸ್ಸಿ ಹೇಳುತ್ತಾನೆ—"ನಮಗೆ ಅನೇಕ ಕಷ್ಟಕರ ಕೆಲಸಗಳನ್ನು ಮಾಡಬೇಕಾಗಿ ಬರುತ್ತದೆ. ಯಾವಾಗಲೂ ಒಬ್ಬ ವ್ಯಕ್ತಿಗೆ ಪ್ರೀತಿಪಾತ್ರನೊಬ್ಬ ಮರಣಹೊಂದಿದನೆಂದೋ ಅಥವಾ ವಿಷಾದವಾಗುತ್ತದೆ, ನಮಗೆ ಏನೂ ಸುದ್ದಿ ಇಲ್ಲವೆಂದೋ ತಿಳಿಸುವುದು ಸುಲಭವಲ್ಲ. ಆದರೆ ನಾವು ಯಾವನಾದರೂ ಕಾಣೆಯಾಗಿದ್ದ ವ್ಯಕ್ತಿಯನ್ನು ಪತ್ತೆಮಾಡುವುದರಲ್ಲಿ ಸಫಲರಾದರೆ ಮತ್ತು ಸಂಸಾರದವರನ್ನು ಒಂದುಗೂಡಿಸಲು ನಮಗೆ ಸಾಧ್ಯವಾದರೆ ಆ ಅನುಭವ ವರ್ಣನಾತೀತ."

ಅನು: ಎಂ. ಎಸ್. ಸುಮಿತ್ರಾ

* ಒಂದು ಸ್ವಿಸ್‌ಫ್ರಾಂಕ್ ಬೆಲೆ ಸುಮಾರು ೮–೩೦ ರೂ.

ಕಷ್ಟದ ಜೀವನವೇ ಶಿಸ್ತನ್ನೂ ಕಲಿಸುವ ಶಾಲೆ.

ಗಾಂಧೀಜಿ

ಪ್ರಿಯಕರ

ರಫಿಯಾ ಮಂಜೂರುಲ್ ಅಮೀನ್

ಅಡವಿಯ ದಟ್ಟವಾದ ನೆರಳು ದೂರದಿಂದಲೇ ಕಾಣುತಿತ್ತು. ತುಸು ದೂರದಮೇಲೆ "ಸಂರಕ್ಷಿತ-ಅರಣ್ಯ"ವೆಂಬ ಕಪ್ಪು ಹಲಗೆ ಯಿತ್ತು. ಅದರಲ್ಲಿ ಪ್ರವೇಶಿಸಿ ಸ್ವಲ್ಪ ಮುಂದೆ ಹೋಗುತ್ತಲೂ ಅರಣ್ಯರಕ್ಷಕರ ಕೆಲವು ಗುಡಿಸಲುಗಳಿದ್ದವು. ಅವು ಬಿದಿರು ಮತ್ತು ತೆಂಗಿನ ಗರಿಗಳಿಂದ ಕಟ್ಟಲ್ಪಟ್ಟಿದ್ದವು. ಗಾಳಿ ಮತ್ತು ಚಳಿಯನ್ನು ತಡೆಯಲು ಗುಡಿಸಲುಗಳ ಮೇಲೆ ಎರೆಮಣ್ಣನ್ನು ಲೇಪಿಸಿತ್ತು. ಈ ಗುಡಿಸಿಲುಗಳಲ್ಲಿ ಅರಣ್ಯರಕ್ಷಕರೇ ಅಲ್ಲದೆ, ಬಿದಿರುಮೆಳೆ, ತೇಗಿನ ಮರಗಳನ್ನು ಕಡಿಯಲು ಬಂದ ಕೂಲಿಗಳೂ ವಾಸಿಸುತ್ತಿದ್ದರು— ಈ ಎಲ್ಲರೂ ಇರುವಾಗ ಆ ಗುಡಿಸಲುಗಳಿಗೂ ಒಂದು ಜೀವಕಳೆ ಇರುತಿತ್ತು. ಹಬ್ಬ ಹುಣ್ಣಿಮೆಯಂದು ಗುಡಿಸಲುಗಳಿಂದ ಡೊಳ್ಳಿನ ಶಬ್ದ ಕೇಳಿಬರುತಿತ್ತು. ಕೂಲಿಗಳು ಅವರ ಹೆಂಡಂದಿರು ಸೆರೆಯ ಮತ್ತಿನಿಂದ ತೃಪ್ತರಾಗಿ ಪ್ರಾದೇಶಿಕ ಲೋಕಗೀತೆಗಳನ್ನು ಹಾಡುತ್ತ, ತಪ್ಪಡಿಯ ತಾಳಕ್ಕೆ ಮನದಣಿ ಕುಣಿಯುತ್ತಿದ್ದರು. ಈ ಕೂಲಿಗಳು ತಮ್ಮ ಪಾಲಿನ ನಿಶ್ಚಿತ ಕೆಲಸಮುಗಿಸಿ ಕೂಲಿಪಡೆದು ಹೊರಟು ಹೋಗುತ್ತಿದ್ದರು. ಆ ಮೇಲೆ ಆ ಗುಡಿಸಿಲುಗಳಲ್ಲಿ ಕೇವಲ ತನಾ ಮತ್ತು ಅವನ ಕುಟುಂಬ ಉಳಿಯುತ್ತಿತ್ತು. ಆಗ ತನಾನ ಹೆಂಡತಿ, ಬಿಟ್ಟು ಹೋದ ಕೂಲಿಗಳ ಗುಡಿಸಲುಗಳಿಗೆ ತನ್ನ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದಳು. ಬಿಟ್ಟವರು ಮರೆತುಹೋದ ಪದಾರ್ಥಗಳೇನಾದರೂ ಉಳಿದಿದ್ದರೆ ತನ್ನ ಕೈಸೇರುವವೆಂದು ಅವಳ ಆಶೆ. ಆದರೆ ಅವಳಿಗೆ ಯಾವಾಗಲೂ ನಿರಾಶೆಯೇ ಕಾದಿರು ತಿತ್ತು. ಹಾಗಿದ್ದರೂ ಬರಿದಾದ ಗುಡಿಸಿಲುಗಳನ್ನು ಒಳಹೊಕ್ಕು ನೋಡವುದು ಅವಳ ಅಭ್ಯಾಸ. ಒಂದು ಸಲ ಬರಿದಾದ ಒಂದು ಮಣ್ಣಿನ ಕೊಡ ಅವಳಿಗೆ ಸಿಕ್ಕಿತು. ಅದನ್ನು ತೆಗೆದು ಕೊಂಡು ತನ್ನ ಗುಡಿಸಿಲಿಗೆ ಬಂದಿದ್ದಳು. ಎರಡು ದಿವಸದ ಮೇಲೆ, ಕೊಡವನ್ನು ಮರೆತುಹೋದ ಕೂಲಿಯವಳು ತಿರುಗಿ ನಾಲ್ಕು

ವೈಲಿ ಪ್ರವಾಸಮಾಡಿ ಬಂದು, ಜಗಳವಾಡಿ ತನ್ನ ಕೊಡವನ್ನು ತೆಗೆದುಕೊಂಡು ಹೋದಳು.

ತನಾ ಆದಿವಾಸಿಯಾಗಿದ್ದ. ಅರಣ್ಯರಕ್ಷಕನಾಗಿ ಅವನು ಅಲ್ಲಿಗೆ ಬಂದಾಗ ಕೇವಲ ಅವನ ಹೆಂಡತಿಮಾತ್ರ ಅವನ ಜೊತೆಗೆ ಬಂದಿದ್ದಳು. ಅವನ ಎಂಟೂ ಮಕ್ಕಳು ಈ ಗುಡಿಸಿಲಿನಲ್ಲಿಯೇ ಜನಿಸಿದ್ದವು. ಈಗ ಅವನು ಮತ್ತು ಅವನ ಹೆಂಡತಿ ವಯಸ್ಸಿನ ಮೊದಲೇ ಮುದುಕರಾಗಿದ್ದರು. ಅವನ ದೊಡ್ಡ ಮಗ ಮೆಟ್ರಿಕ್ ಪಾಸಾಗಿ ಪಟ್ಟಣಕ್ಕೆ ತೆರಳಿದ್ದ. ಅವನು ಅರಣ್ಯರಕ್ಷಕನಾಗಲು ಬಯಸುತ್ತಿದ್ದಿಲ್ಲ. ಏಕೆಂದರೆ ಜೀವನದುದ್ದಕ್ಕೂ ತನ್ನ ತಂದೆಯಂತೆ ಅರಣ್ಯದಲ್ಲೇ ತುಕ್ಕು ಹಿಡಿದವನಂತೆ ಇರುವುದು ಅವನಿಗೆ ಬೇಡ ವಾಗಿತ್ತು. ಇತರ ಆದಿವಾಸಿಗಳಾದ ಅವನ ಸಂಗಡಿಗರಿಗೆ ಬಡತಿ ಸಿಕ್ಕಿತ್ತು. ಒಬ್ಬೊಬ್ಬ ರಾಗಿ ಅವರು ಪಟ್ಟಣಕ್ಕೆ ಹೋಗಿ ನೆಲೆಸಿದ್ದರು.

ತನಾನ ಮಕ್ಕಳಲ್ಲಿ ಮೂರನೆಯವಳು ಗಾಚಿ. ಅಂಗ ಸೌಷ್ಠವ ಮತ್ತು ರೂಪದಲ್ಲಿ ಅವಳು ತನಾನ ಇತರ ಮಕ್ಕಳಿಗಿಂತ ಚೆಲುವೆ—ಆದರೂ ಅವಳನ್ನು ಗೌರವಿಸುವವರು ಯಾರೂ ಇರಲಿಲ್ಲ. ಏಕೆಂದರೆ ಅವಳು ಮೂಕಿ. ಎಂಟು ಮಕ್ಕಳನ್ನು ಹಡೆದ ತನಾನ ಹೆಂಡತಿ ಜೀವನದ ಓಟದಲ್ಲಿ ಉಸಿರುಗಟ್ಟಿದವಳಂತಾಗಿದ್ದಳು. ಅವಳು ಈಗ ಗುಡಿಸಿಲಿನ ಮೂಲೆಯಲ್ಲಿ ಬಿದ್ದುಕೊಂಡು ಯಾವಾಗಲೂ ಕೆಮ್ಮುತ್ತಿದ್ದಳು. ಗಾಚಿಯ ಅಕ್ಕ ಸೋನಿ. ಅವಳು ಈ ಎಲ್ಲ ಕುಟುಂಬದ ಮೇಲ್ವಿಚಾರಣೆ ಮಾಡುತ್ತಿದ್ದಳು. ಅವಳು ಗಾಚಿಯನ್ನು ಹೊಡೆದು ಬಡಿದು ಸ್ವಲ್ಪ ಕೆಲಸವನ್ನೇನೋ ಮಾಡಿಸಿಕೊಳ್ಳುತ್ತಿದ್ದಳು. ಸೋನಿ ಸ್ವಲ್ಪ ಮರೆಯಾಗುತ್ತಲೂ ಗಾಚಿ—ಜಿಂಕೆಯಂತೆ ಚಂಗನೆ ನೆಗೆದು, ಬಡಿತ ಬೈಗಳಿಂದ ತಪ್ಪಿಸಿಕೊಂಡು, ಅರಣ್ಯದಲ್ಲಿ ಕಾಣೆಯಾಗುತ್ತಿದ್ದಳು—ಇದರಿಂದ ಸೋನಿಗೂ ಹಗುರ. ಗಾಚಿ ಮನೆಯಲ್ಲಿದ್ದರೆ, ಸೋನಿಗೊಂದು ತಲೆಭಾರ. ಗಾಚಿ ಎದುರಿಗಿದ್ದಷ್ಟೂ, ಏನಾದರೂ ಒಂದು ಕಷ್ಟವನ್ನು ತಂದೊಡ್ಡುತ್ತಿದ್ದಳು.

ಅವರ ಕುಟುಂಬದಲ್ಲಿಯ ಹುಡುಗಿಯರಿಗಂತೂ ಸ್ಕೂಲಿಗೆ ಹೋಗುವ ಆವಶ್ಯ ಕತೆಯೇ ಇರಲಿಲ್ಲ. ಪಾಪ! ಸೋನಿ ತನ್ನ ಇಬ್ಬರು ತಮ್ಮಂದಿರನ್ನು ಬೆಳಿಗ್ಗೆ ಸಿದ್ಧಮಾಡಿ, ಅವರ ಕೈಯಲ್ಲಿ ಸ್ಕೂಲಿನ ಬಿಡುವಿನಲ್ಲಿ ತಿನ್ನಲು ರೊಟ್ಟಿಯನ್ನು ಕೊಟ್ಟು ಕಳಿಸುತ್ತಿದ್ದಳು —ಗಾಚಿ ಅವರ ಹಿಂದೆ ಹಿಂದೆಯೇ ಹೋಗಿ ಆ ರೊಟ್ಟಿಗಳನ್ನು ತಮ್ಮಂದಿರಿಂದ ಕಸಿದು ಕೊಂಡು ಓಡಿ ಹೋಗುತ್ತಿದ್ದಳು. ಆ ರೊಟ್ಟಿಗಳನ್ನು ಸಂರಕ್ಷಿತ ಅರಣ್ಯದ ಮಂಗಗಳಿಗೆ ಕೊಡುತ್ತಿದ್ದಳು. ಏಕೆಂದರೆ ಗಾಚಿಗೆ ಅವುಗಳೆಂದರೆ ಪ್ರೀತಿ. ಒಂದು ಬಗೆಯ ಸ್ನೇಹ. ಕೇವಲ ಮಂಗಗಳೇ ಅಲ್ಲ, ಆ ಅರಣ್ಯದ ಎಲ್ಲ ಪ್ರಾಣಿಗಳೂ ಗಾಚಿಯನ್ನು ಚೆನ್ನಾಗಿ ಬಲ್ಲವು. ಗಾಚಿಗೂ ಅವುಗಳ ಮೇಲೆ ಅಂತಃಕರಣ. ಪರಸ್ಪರ ಇವರ ಸಂಬಂಧ ಬಹಳ ಗಾಢ ವಾಗಿತ್ತು. ಆ ಪ್ರಾಣಿಗಳು ಗಾಚಿಯನ್ನು ಮೂಕಿಯೆಂದು ಅಣಕಿಸಿ ಮನಸ್ಸು ನೋಯಿಸು ತ್ತಿರಲಿಲ್ಲ. ಅವಳೂ ಅವುಗಳನ್ನು ಬೆದರಿಸುತ್ತಿರಲಿಲ್ಲ. ಅರಣ್ಯದಲ್ಲಿ ರಕ್ತ ಕುಡಿಯಬಲ್ಲ ಭಯಾನಕ ಮೃಗಗಳಿರುವ ಕಡೆಗೆ ಮಾತ್ರ ಗಾಚಿ ಹೋಗುತ್ತಿರಲಿಲ್ಲ. ಅವಳಿಗೆ ಆರನೆಯ ಸಹಾಯಕ ಇಂದ್ರಿಯದಿಂದ ಕಾಡುಮೃಗದ ಇರುವಿಕೆಯ ಅರಿವಾಗುತಿತ್ತು. ಕೂಡಲೇ ಅವಳು ಅಲ್ಲಿಂದ ರಭಸದಿಂದ ಓಡಿ ಹೋಗುತ್ತಿದ್ದಳು.

ಅವಳಿಗೆ ಹದಿನೈದು ಹದಿನಾರು ವರುಷಗಳಾದರೂ ಹುಡುಗಾಟಿಕೆ ಹೋಗಿರಲಿಲ್ಲ. ಅವಳು ಬೆದರಿಕೆಗೆ ಲೆಕ್ಕಿಸುತ್ತಲೂ ಇರಲಿಲ್ಲ. ಮನೆಯಲ್ಲಿಯೂ ಅವಳನ್ನು ವಿಶೇಷವಾಗಿ ಕೇಳುವವರೂ ಇರಲಿಲ್ಲ. ಬಹಳ ಹೊತ್ತಿನವರೆಗೆ ಅವಳು ಕಾಡಿನಿಂದ ಮನೆಗೆ ಬರದಿದ್ದರೆ, ಅವಳ ತಾಯಿಗೆ ಮಾತ್ರ ಚಿಂತೆಯಾಗುತಿತ್ತು. ತನಾಗೆ ಗಾಚಿಯನ್ನು ಹುಡುಕಿಕೊಂಡು ಬರಲು ಒತ್ತಾಯಿಸುತ್ತಿದ್ದಳು. ಅವನೋ ಮೌನವಾಗಿ ಚಿಲುಮೆಯನ್ನು ಎಳೆಯುತ್ತ ಕುಳಿತಿರುತ್ತಿದ್ದ, ಅವನಿಗೆ ಗೊತ್ತು, ಗಾಚಿ ಅರಣ್ಯದಲ್ಲಿ ಸರಸರನೆ ಸರಿದಾಡುವ ಸುಂಟರ ಗಾಳಿ. ಕೆಡಕಾಗುವ ಸಂಭವ ಕಂಡರೆ ಕೂಡಲೇ ಮನೆಗೆ ಬರುವಳು. ಹಸಿವಾದರೆ ಪಾತ್ರೆ ಯಿಂದ ಅವಳೇ ತೆಗೆದುಕೊಂಡು ತಿನ್ನುವಳು, ಇಲ್ಲವೇ ತಾಯಿಯ ತೇಪೆ ಹಚ್ಚಿದ ಹೊದಿಕೆಯ ಅಡಿಯಲ್ಲಿ ಮುದುಡಿಕೊಂಡು ಮಲಗುವಳು. ಹಾಗೆ ಮಲಗಿದಾಗ ಗಾಚಿಯೂ ಹೊದಿಕೆಗೆ ಹಾಕಿದ ತೇಪೆಯೆಂದೇ ಕಾಣುವಳು.

ರಾತ್ರಿಯಾಗುತ್ತಲೂ ಅರಣ್ಯದ ರಹಸ್ಯಗಳೆಲ್ಲ ಮೈಮುರಿದು ಎದ್ದು ನಿಲ್ಲುವವು. ಮಿಂಚು ಹುಳುವಿನ ಗುಂಪುಗಳು ಚಕಮಕಿಯ ಕಿಡಿಗಳಂತೆ ಹಾರಾಡುವವು. ಕಾಡೆಮ್ಮೆಗಳ ದೊಡ್ಡ ಗುಂಪು ಕರಿಕೋಟು, ಬಿಳಿಜೋಡು ಧರಿಸಿ ರಾಯಭಾರದ ತಂಡ ಶಾಂತಿ ಸ್ಥಾಪನೆಗೆ ಹೊರಟಂತೆ ಕಾಣುವವು. ಚಿರತೆಗಳ ಹಚ್ಚನ್ನ ಕಿಡಿಗಾರುವ ಕಣ್ಣುಗಳು ಯಾರ ರಕ್ತವನ್ನಾದರೂ ಹೆಪ್ಪುಗಟ್ಟುವಂತೆ ಮಾಡುವವು. ಎಲೆ ಅಲ್ಲಾಡಿದರೂ ಚಕಿತ ವಾಗಿ ಚಂಗನೆ ನೆಗೆಯುವ ಜಿಂಕೆಯ ಹಿಂಡುಗಳು, ಹಿಮಹೊದ್ದಿಸಿದಂತಿರುವ ಮೊಲಗಳು, ಫೂತ್ಕರಿಸುತ್ತ ಸರಸರ ಸರಿಯುತ್ತಿರುವ ಸರ್ಪಗಳು, ಉದ್ದೇಶರಹಿತ ಕೀಟಗಳ ಚೀತ್ಕಾರವು ಅಲ್ಲಲ್ಲಿ ಪ್ರಕಟವಾಗುವುವು. ಏನೇ ಇದ್ದರೂ ಪಟ್ಟಣ ವಾಸಿಗಳಿಗಿಂತ ಈ ವನ್ಯಪ್ರಾಣಿಗಳೇ ಸಾಧುವಾದವು. ಹಾಗೆಂದೇ ಅರಣ್ಯದಲ್ಲಿ ಜೊತೆಜೊತೆಯಾಗಿ ಬಾಳು ನೂಕುತ್ತಿರುವವು. ಅವುಗಳ ಭಾಷೆ ಬೇರೆ ಬೇರೆಯಾಗಿದ್ದರೂ ಅವುಗಳಲ್ಲಿ ಎಂದೂ ಚುನಾವಣೆಯಾಗಿಲ್ಲ. ಭಾಷೆಯನ್ನೇ ಮೂಲವಾಗಿರಿಸಿಕೊಂಡು ರಕ್ತಪಾತವಾಗಿಲ್ಲ. ಯಾವ ಪ್ರಾಣಿಯೂ ಬೇರೆ ಪ್ರಾಣಿಯ ಭೂಮಿಯನ್ನು ದೋಚಿಕೊಂಡಿಲ್ಲ. ಪಾತಿವ್ರತ್ಯದ ಮಾರಾಟವಾಗಿಲ್ಲ. ಈ ಪ್ರಾಣಿಗಳು ಯಾರಿಗೂ ಬಾಧಕವಾಗಿಲ್ಲ.

ಈ ಸಂರಕ್ಷಿತ ಅರಣ್ಯಗಳಲ್ಲಿ ಕಳ್ಳರು ಹೇಗೋ ನುಗ್ಗಿಯೇ ನುಗ್ಗುತ್ತಿದ್ದರು. ಅವರ ದುಷ್ಟ ಸ್ವಭಾವ ಅವರನ್ನು ಈ ದುಷ್ಕೃತ್ಯಗಳನ್ನು ಮಾಡಲು ಪ್ರೇರೇಪಿಸುತಿತ್ತು. ಅವರು ಹೆಬ್ಬಾವುಗಳ, ಜಿಂಕೆಗಳ, ಕರಡಿ, ಹುಲಿ ಮತ್ತು ಚಿರತೆಗಳ ಚರ್ಮಗಳನ್ನು ಕದಿಯುವರು. ಅಲ್ಲದೇ ತೇಗಿನ ಮತ್ತು ಬಿದಿರಿನ ಮೆಳೆಗಳನ್ನು ಕಡಿದು ಕದಿಯುವರು. ಮೇಲಧಿಕಾರಿಗಳಿಗೆ ಸುದ್ದಿ ಮುಟ್ಟುವ ಮೊದಲೇ ಈ ಕಳ್ಳರು ಕಾಣೆಯಾಗುವರು. ಯಾವಾಗಲೋ ಕೆಲವರು ಸಿಕ್ಕರೂ, ಅವರು ಹಲವು ತಿಂಗಳ ಸೆರೆಮನೆವಾಸ ಅನುಭವಿಸುವರು. ಕೆಲವರು ರಾಜಕಾರಣಿಗಳ ಬಲದಿಂದ, ಶಿಕ್ಷೆಯಿಂದ ತಪ್ಪಿಸಿಕೊಳ್ಳು ತ್ತಿದ್ದರು. ಇಂಥ ಜನರು, ನಿರ್ಭಯರಾಗಿ ಈ ಸಂರಕ್ಷಿತ ಅರಣ್ಯದಲ್ಲಿ ಬೇಟೆಯಾಡಿ ತಮ್ಮ ಚಟವನ್ನು ತೀರಿಸಿಕೊಳ್ಳುತ್ತಿದ್ದರು. ಇವರ ಗುಂಡಿನೇಟಿನ ಶಬ್ದ ಅಧಿಕಾರಿಗಳ ಕಿವಿಗೆ ತಾಕಿಯೂ ತಾಕಿದಂತೆ ಮಾಯವಾಗಿ ಬಿಡುತಿತ್ತು. ಯಾರೂ ಈ ಬೇಟೆಗಾರರಿಗೆ ನಷ್ಟಮಾಡಿದ್ದು ಕಂಡು ಬರಲಿಲ್ಲ.

ಅಕ್ಕತಂಗಿ ಅಣ್ಣ ತಮ್ಮಂದಿರೊಡನೆ ಜಗಳವಾಡುವುದು ಗಾಚಿಗೆ ಮೋಜು. ಅವಳಿಗೆ ಅದಕ್ಕೂ ಪ್ರಿಯವಾದ ಕೆಲಸ ಇನ್ನೊಂದು ಬೇರೆಯೇ ಇತ್ತು. ಅದರ ಅರಿವು ಅವಳಿಗೆ ಮತ್ತು ತೇಗಿನ ಮರಗಳ ಆಚೆಗೆ ಇರುವ ಕೊಳಕ್ಕೆ ಮಾತ್ರ ಗೊತ್ತು. ಕೊಳದ ಅಚೆ ಬಿದಿರಿನ ಮೆಳೆ ಪ್ರಾರಂಭವಾಗುತ್ತಿತ್ತು. ಈ ಕೊಳದ ಅಂಚಿನಲ್ಲಿ ಗಾಚಿ ಗಂಟೆ ಗಟ್ಟಲೇ ಕುಳಿತಿರುತ್ತಿದ್ದಳು. ಮೊಳಕಾಲಮೇಲೆ ಕೈಯೂರಿ ಮೌನವಾಗಿ, ಅಚಲೆಯಾಗಿ. ಈ ನೀರವತೆಯ ಒಡನಾಟ ಯಾರೂ ಅವಳಿಗೆ ಕಲಿಸಿರಲಿಲ್ಲ. ಮೂಕಿಯಾದುದರಿಂದ ಅದನ್ನು ಅವಳು ತನ್ನ ಅದೃಷ್ಟದಲ್ಲಿಯೇ ಪಡೆದಿದ್ದಳು. ತನ್ನ ಅಂತರಂಗದ ತುಮುಲದಲ್ಲಿ, ಆ ನೀರವತೆಯನ್ನು ಬೆರೆಸಿ ಸಮಾಧಾನಮಾಡಿಕೊಳ್ಳಲೆತ್ನಿಸುತ್ತಿದ್ದಳು. ಕೊಳದ ತೆರೆಗಳು, ಅಂತರಂಗದಲ್ಲಿ ಸದಾ ಆವರಿಸಿದ್ದ ಅವಳ ಕಳವಳಕ್ಕೆ ಸಮಾಧಾನ ಹೇಳವು. ಮೌನವಾಗಿ ಕುಳಿತಿರುವುದೇ ಅವಳ ಅಚ್ಚುಮೆಚ್ಚಿನ ಕೆಲಸ. ಇವಳ ಒಬ್ಬ ಅಚ್ಚುಮೆಚ್ಚಿನ ಪ್ರಿಯಕರನೂ ಇದ್ದ. ಅವನು, ದೊಡ್ಡ ದೊಡ್ಡ ಕಣ್ಣುಗಳುಳ್ಳ, ಮಿರಿಮಿರಿ ಮಿಂಚುವ, ಚುರುಕು ಶರೀರದ ಅರಣ್ಯದ ಒಡನಾಡಿ ಜಿಂಕೆ. ಜಿಂಕೆಗಳ ಗುಂಪೊಂದು ಇವಳಿಗೆ ತುಂಬ ಪರಿಚಿತ. ಗಾಚಿ ಹತ್ತಿರದಲ್ಲಿಯೇ ಕುಳಿತಿದ್ದರೂ, ಆ ಜಿಂಕೆಗಳು ತಮ್ಮ ಕತ್ತನ್ನು ಚಾಚಿ ಕೊಳದ ಸ್ವಚ್ಛನೀರಿನಲ್ಲಿ ತಮ್ಮ ಬಾಯಿಯ ಅಂಚನ್ನು ಮುಳುಗಿಸಿ ನೀರು ಕುಡಿಯುತ್ತಿದ್ದವು. ಆ ಗುಂಪಿನಲ್ಲಿಯೇ ಪ್ರಮುಖನಾಗಿ ಗಾಚಿಯ ಪ್ರಿಯಕರ ಇರುತ್ತಿದ್ದ. ಮಾತನಾಡದ ಗಾಚಿ, ಅಂತರಾಳದಲ್ಲಿಯೇ ಮನಸ್ಸಿನಿಂದ ತನ್ನ ಪ್ರಿಯಕರನಿಗೊಂದು ಹೆಸರು ಕೊಟ್ಟಿರಬೇಕು. ಹೌದು! ಮನಸ್ಸಿಗೂ ನಾಲಗೆ ಇರುವುದು. ಮನಸ್ಸಿನ ಮಾತು ಮನದ ಕಿವಿಗಳಿಗೆ ಕೇಳುವುದು. ಹೊರಗಿನ ಮಾತು ಅವಳಿಗೆ ಕೇಳವು. ತನ್ನ ಪ್ರಿಯಕರ ಜಿಂಕೆಯ ಮೇಲೆ ಅವಳಿಗೆ ಅಗಾಧ ಪ್ರೇಮ. ಅವಳೇ ಅರಿಯದ ಕರುಳಿನ ಸಂಬಂಧ. ಇಂಥ ಸನ್ನಿವೇಶವೇ ಕಾಳಿದಾಸನ ಶಕುಂತಲೆಯ ಜನನಕ್ಕೆ ಮೂಲ.

ಒಂದು ದಿವಸ ಗಾಚಿ ಮೌನವಾಗಿ ಕುಳಿತಿರುವಾಗ ಮೋಹನ ಅನಿರೀಕ್ಷಿತ ಅಲ್ಲಿಗೆ ಬಂದ. ಮೋಹನ ಕಳ್ಳರ ತಳಿಗೆ ಸೇರಿದಂಥವ. ಅವನು ಬರಿಯ ಬಿದಿರಿನ ಮೆಳೆಗಳನ್ನು ಕದ್ದುಕೊಂಡು ಹೋಗುವ ಗುಂಪಿಗೆ ಸೇರಿದವನಾಗಿದ್ದರೂ, ರಾತ್ರಿಯ ಅಂಧಕಾರದಲ್ಲಿ ಬಂದೂಕಿನಿಂದ ಮೊಲಗಳ ಮತ್ತು ಜಿಂಕೆಗಳ ಬೇಟೆಯಾಡುವವನಾಗಿದ್ದ. ಅವನಿಗೆ ಹತ್ತಿರದಲ್ಲಿ ಒಂದು ಕೊಳವಿದೆಯೆಂದು ಗೊತ್ತಿತ್ತು. ಅವನಿಗಾದ ವಿಪರೀತ ಬಾಯಾರಿಕೆ ಅವನನ್ನು ಅಲ್ಲಿಗೆ ಕರೆದುತಂದಿತ್ತು. ಈ ಮೊದಲೂ ಅವನು ಅಲ್ಲಿಗೆ ಬಂದಿದ್ದ. ಆದರೆ ಅವನು ಗಾಚಿಯನ್ನು ಅಲ್ಲಿ ಮೊದಲಿಗೆ ಎಂದೂ ಕಂಡಿರಲಿಲ್ಲ. ಮೋಹನನ ಬರುವು ಗಾಚಿಗೂ ಆಶ್ಚರ್ಯವನ್ನುಂಟುಮಾಡಿತ್ತು. ಅವಳು ಈ ಮೊದಲು ಸಂರಕ್ಷಿತ ಅರಣ್ಯವನ್ನು ನೋಡಲು ಬರುವ ಬಿಳಿಯ ಸಫಾರಿಗಾಡಿಗಳನ್ನು ಮಾತ್ರ ನೋಡಿದ್ದಳು. ಅವು ಕಾಣುತ್ತಲೂ ಮರೆಯಾಗಿಬಿಡುತ್ತಿದ್ದಳು. ತನ್ನ ಮೌನವನ್ನು ಮುರಿಯುವುದಕ್ಕೂ ಬಿಡುತ್ತಿರಲಿಲ್ಲ.

ಮೋಹನನನ್ನು ನೋಡಿ ಗಾಚಿ ಗಾಬರಿಯಾಗಿ ಎದ್ದುನಿಂತಳು. ಅವಳು ಮೂಕಿ ಎನ್ನುವುದು ಮೋಹನಗೆ ಬಹು ಬೇಗ ಗೊತ್ತಾಯಿತು.

"ಅಯ್ಯೋ! ಇವಳು ಮೂಕಿ!! ಒಳ್ಳೇದೇ ಆಯಿತು. ಇವಳಿಗೆ ಮಾತು ಬಂದಿದ್ದರೆ ನನ್ನ ಕಳ್ಳತನವನ್ನು ಓಡಿಹೋಗಿ ಅಧಿಕಾರಸ್ಥರಿಗೆ ತಿಳಿಸುತ್ತಿದ್ದಳು" ಎಂದು ಆಲೋಚಿಸಿದ. ಮೂಕಿಯಾದರೂ ಸುದ್ದಿ ತಿಳಿಸಬಹುದೆಂದು, ಅಪಾಯವೆಂದೂ ಬಗೆದ. ಅದಕ್ಕೇ ಮನಸ್ಸಿನಲ್ಲಿಯೇ ಯುಕ್ತಿ ಮಾಡಿದ. ಎರಡೂ ಕೈಗಳನ್ನು ಜೋಡಿಸಿ ಗಾಚಿಯ ಎದುರಿಗೆ ನಿಂತ. ಸಂಜ್ಞೆಯಿಂದಲೇ ತಾನೂ ಮೂಕನೆಂದೂ, ನೀರಡಿಕೆ ಯಾದುದಕ್ಕೆ ಇಲ್ಲಿಗೆ ಬಂದನೆಂದೂ ತಿಳಿಸಿದ. ತನ್ನಿಂದ ಅವಳಿಗೆ ಅಪಾಯವಾಗದೆಂದೂ ಮನಗಾಣಿಸಿದ. ನೀರು ಕುಡಿದು ಹೊರಡಲನುವಾದ. ಆದರೆ ಗಾಚಿಯ ಸೌಂದರ್ಯ ಅವನನ್ನು ತಡೆದು ನಿಲ್ಲಿಸಿತು. ಮೋಹನ ಮೂಕನಿದ್ದುದನ್ನು ಕಂಡು ಗಾಚಿಯ ಮನ ಅವನ ಕಡೆಗೆ ವಾಲಿತು. ತನ್ನಂತೆ ಮೂಕನಿದ್ದವ ಅವಳಿಗೆ ಸಿಕ್ಕಿದುದು ಜೀವನದಲ್ಲಿ ಮೊದಲನೆಯ ಸಲ. ಹೀಗಾಗಿ ಅವನನ್ನು ನಂಬಿದಳು.

ಮೋಹನ ವ್ಯವಹಾರಚತುರ. ಗಾಚಿಯ ಒಲವಿನ ದೃಷ್ಟಿಯನ್ನು ಕೂಡಲೇ ಗುರುತಿಸಿದ. ಹುಡುಗಿ ಸುಂದರಿ–ಮೇಲೆ ಮೂಕಿ–ಹುಡುಗನ ದೃಷ್ಟಿಯಲ್ಲಿ ಅವಳ ಸೌಂದರ್ಯ ಇಮ್ಮಡಿಸಿತು. ಎರಡನೆಯ ದಿವಸವೂ ಗಾಚಿಯ ಆಕರ್ಷಣೆ ಅವನನ್ನು ಅಲ್ಲಿಗೆ ಎಳೆದುತಂದಿತು. ಅವನ ಕಳ್ಳ ಹೃದಯಕ್ಕೆ, ಅವಳ ಮೋಹದ ಮೋಸದ ಮುಸುಕು ಅದು. ಅವನ ಆಶೆ ಜಿಂಕೆಯ ಮೇಲೆ. ಅದನ್ನು ಮಾರಿದ ಮೇಲೆ ಬರುವ ಹಣದ ಮೇಲೆ. ದೂರದಲ್ಲಿಯೇ ನಿಂತುಕೊಂಡ. ಗಾಚಿ ಕೊಳದಲ್ಲಿ ತನ್ನ ಹಿಂಬಡವನ್ನು ತಿಕ್ಕಿ ತಿಕ್ಕಿ ತೊಳೆದುಕೊಳ್ಳುತ್ತಿದ್ದಳು. ಅವಳು ಅಲ್ಲಿಯೇ ಇದ್ದರೂ ಜಿಂಕೆಗಳ ಗುಂಪು ನಿರ್ಭಯದಿಂದ ಕೊಳದ ಬಳಿಯಲ್ಲಿಯೇ ಸೇರಿತ್ತು. ಮೋಹನನ ಸದ್ದು ಗುರುತಿಸಿ ಎಲ್ಲ ಜಿಂಕೆಗಳೂ ಚೆಂಗನೆ ನೆಗೆದು ಓಡಿಹೋದವು. ಗುಂಪಿನಲ್ಲಿಯೇ ಗಾಚಿಯ ಪ್ರಿಯಕರ ಮಾತ್ರ ಹಾಗೆಯೇ ನಿಂತಿತ್ತು. ಅದಕ್ಕೆ ಗಾಚಿಯ ಅಭಯವಿತ್ತು. ಅದರ ಮೇಲೆ ಗಾಚಿ ತನ್ನ ಕೈಗಳನ್ನು ಇಟ್ಟಿದ್ದಳು.

ಮೋಹನನ ಮನಸ್ಸು ಇನ್ನೊಂದು ಬಗೆಯಿತು. ಗಾಚಿಯ ಪ್ರಿಯಕರನನ್ನೇ ಎಳೆದೊಯ್ದರೆ ಹೆಚ್ಚಿನ ಲಾಭವೆನಿಸಿತು. ಮೊದಲೇ ಅವನೊಬ್ಬ ಕಳ್ಳ ಬೇಟೆಗಾರ. ಬಂದೂಕಿನಿಂದ ಜಿಂಕೆ, ಮೊಲ, ಕಾಡು ಹಂದಿಗಳ ಬೇಟೆಯನ್ನು ಆಡುವವ. ಬಂದೂಕಿನ ಗುಂಡುಗಳೂ ಇತ್ತೀಚೆಗೆ ಬಹಳ ಪ್ರಯಾಸದಿಂದ ದೊರೆಯುತ್ತಿದ್ದವು. ಅವುಗಳ ಬೆಲೆಯೂ ಹೆಚ್ಚಾಗಿತ್ತು. ಅದಕ್ಕೇ ಗಾಚಿಯ ಸಹಾಯದಿಂದ ಜೀವಂತ ಜಿಂಕೆಗಳನ್ನು ಹಿಡಿದು, ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಬಹುದೆಂದೆಣಿಸಿದ. ಇದನ್ನು ಆಲೋಚಿಸುತ್ತ ಸ್ವಲ್ಪ ಮುಂದಕ್ಕೆ ಸರಿದ. ಗಾಚಿಗೆ ಇವನ ಕುತಂತ್ರ ತಿಳಿಯದು. ತನಗಾಗಿ ಮುಂದೆ ಬರುತ್ತಿದ್ದಾನೆಂದು ತಿಳಿದಳು. ತನ್ನ ಪ್ರಿಯಕರ ಜಿಂಕೆಯ ಕೊರಳಿಗೆ ಬಾಹುಗಳನ್ನು ಹಾಕಿ, ಅವನನ್ನು ನೋಡಿ ನಕ್ಕಳು. ಮೋಹನ ಇನ್ನೂ ಮುಂದುವರೆದ. ಅವಳ ಪ್ರಿಯಕರ ಜಿಂಕೆಯ ಮೇಲೆ ಕೈ ಇರಿಸಿದ. ಅದರ ಬೆನ್ನಿನ ಮೇಲೆ ಕೈಯಾಡಿಸುತ್ತ, ಆಡಿಸುತ್ತ ತನ್ನ ತೋಳುಗಳಲ್ಲಿ ಜಿಂಕೆಯನ್ನು ತೆಗೆದುಕೊಳ್ಳಬೇಕೆಂದ. ಸೂಕ್ಷ್ಮಮತಿಯಾದ ಅವಳಿಗೆ ಈ ವಿಚಾರ ಹೊಳೆಯಿತು. ಅವಳು ಚೆಂಗನೆ ಎದ್ದು ನಿಂತಳು. ಅವಳ ಹುಬ್ಬುಗಳು ಗಂಟಿಕ್ಕಿದವು. ತಿರಸ್ಕಾರ ಅವಳ ಮುಖದಿಂದ ಸ್ಫುಟವಾಗಿ ಕಾಣುತ್ತಿತ್ತು.

“ಅರೆ! ನಾನು ಚೇಷ್ಟೆ ಮಾಡಿದೆ” ಎಂದು ಮೋಹನ ಸನ್ನೆಯಿಂದ ತಿಳಿಸಿದ. ಪ್ರಿಯಕರನನ್ನು ಗಾಚಿಗೆ ಒಪ್ಪಿಸಿ, ದೂರ ಸರಿದ. ಅದನ್ನು ಸರಳವಾಗಿ ಪಡೆಯಬಹುದೆಂದು ತೂಕ ಹಾಕಿದ್ದ. ಆದರೆ ನಿರಾಶೆಯಾಯಿತು.

ಎರಡನೆಯ ದಿವಸ ಸಂಜೆಯಾಗಿ, ಕತ್ತಲೆ ಕಾಲಿಟ್ಟಿತು. ಮೋಹನ ಬರಲಿಲ್ಲ. ಗಾಚಿಗೆ ಸಮಾಧಾನವಾಯಿತು. ಕುಳಿತು ಕುಳಿತು ಸೋತಳು. ಜಿಂಕೆಗಳ ಹಿಂಡೂ ಹೊರಟುಹೋಗಿತ್ತು. ಕೇವಲ ತನ್ನ ಪ್ರಿಯಕರ ಜಿಂಕೆಯನ್ನು ಮಾತ್ರ ನಿಲ್ಲಿಸಿಕೊಂಡಿದ್ದಳು. ಏಕಾಕಿಯಾಗಿರುವುದು ಅವಳಿಗೆ ಕಷ್ಟವಾಗಿತ್ತು. ಅಷ್ಟರಲ್ಲಿ ಏನೋ ಸದ್ದು ಪ್ರಿಯಕರನನ್ನು ಎಚ್ಚರಿಸಿತು. ಕಣ್ಣರಳಿಸಿ ಬೇರೆ ಕಡೆಗೆ ನೋಡಿತು. ಅದರ ಚಲನೆಯಿಂದ ಗಾಚಿಯೂ ತಿರುಗಿ ನೋಡಿದಳು. ದೂರದಲ್ಲಿ ಮೋಹನ ನಿಂತುಕೊಂಡಿದ್ದ. ಅವನ ಕೈಯಲ್ಲಿ ಬಂದೂಕು ಇತ್ತು. ಅವನಿಗೆ ಪ್ರಿಯಕರ ಜಿಂಕೆ ಬೇಕಾಗಿತ್ತು. ಹಣದ ಅಗತ್ಯ ಬಹಳವಿತ್ತು. ಜಿಂಕೆ ಕೊಳ್ಳಲು ಗಿರಾಕಿಗಳೂ ಸಿದ್ಧರಿದ್ದರು.

“ಏ! ಮೂಕಿ!! ಆ ಜಿಂಕೆಯನ್ನು ನನ್ನ ವಶಕ್ಕೆ ಕೊಡು” ಎಂದು ನಟನೆಯನ್ನು ದೂರವಿರಿಸಿ, ಮೋಹನ ತಾಳ್ಮೆ ತಪ್ಪಿ ಗಡಿಸಿನಿಂದಲೇ ನುಡಿದು ಸನ್ನೆ ಮಾಡಿದ.

ಗಾಚಿಯ ಮುಖದ ಮೇಲೆ ತೀವ್ರ ವೇದನೆ ಆವರಿಸಿತು. ಇಬ್ಬರ ನಡುವಿನ ಮನದ ತಂತಿ ಕೂಡಲೇ ಸಿಡಿಯಿತು. ಮೋಹನನ ಇಚ್ಛೆಯನ್ನು ಅರಿತಳು. ಪ್ರಿಯಕರನ ಮೇಲಿನ ತನ್ನ ಹಿಡಿತವನ್ನು ಇನ್ನೂ ಬಿಗಿಮಾಡಿದಳು. ಪ್ರಿಯಕರನ ಇರುವಿಕೆ, ಸ್ಪರ್ಶ, ಹೊಡೆದುಕೊಳ್ಳುತ್ತಿದ್ದ ಅದರ ಹೃದಯ, ಇವಳ ಧೈರ್ಯವನ್ನು ಕಲಕಿದ್ದವು. ಯಾವ ಬೆಲೆಗೂ ಪ್ರಿಯಕರನನ್ನು ಅವಳು ಮೋಹನನಿಗೆ ಒಪ್ಪಿಸಲು ಸಿದ್ಧಳಿರಲಿಲ್ಲ.

“ಪ್ರಿಯಕರನನ್ನು ಜೀವಂತ ಕೊಡದಿದ್ದರೆ, ಅದನ್ನು ಗುಂಡಿನಿಂದ ಕೊಂದು ಹಾಕುವೆ” ಎಂದು ಸನ್ನೆಮಾಡಿ, ಮೋಹನ ಬಂದೂಕಿನಿಂದ ಗುರಿ ಇಟ್ಟ. ಗಾಚಿ ಮುಗುಳು ನಗೆಯಿಂದ ಜಿಂಕೆಯನ್ನು ಕೊಡುವವಳಂತೆ ನಟಿಸಿ, ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಪ್ರಿಯಕರನ ಸಮೇತ ಕಾಣೆಯಾದಳು. ಮೋಹನ ಹಿಂಬಾಲಿಸಿ ಓಡಿದ. ಅವನ ಶರೀರ ಸ್ಥೂಲ. ಗಾಚಿ ಮಿಂಚಿನ ಒಡನಾಡಿ. ಗಿಡಗಂಟಿಗಳ ಮಧ್ಯೆ ಗಾಚಿ ಮತ್ತು ಪ್ರಿಯಕರ ಕಾಣದಾದರು. ಅರಣ್ಯ ಅವರುಗಳನ್ನು ಬಚ್ಚಿಟ್ಟುಕೊಳ್ಳುತ್ತಿತ್ತು. ಮೋಹನ ಓಡಿ ಓಡಿ ಬಳಲಿ ಬೆಂಡಾಗಿಹೋದ. ಏದುತ್ತ ಏದುತ್ತ ಕೊನೆಗೆ ಬೇಟೆ ಹೊಡೆಯುವ ಗುಪ್ತಸ್ಥಳದಲ್ಲಿ ಬಂದು ನಿಂತ. ಬಿಡುತ್ತಿದ್ದ ಏದುಸಿರು ಅವನನ್ನು ಇನ್ನೂ ರೊಚ್ಚಿಗೆಬ್ಬಿಸಿತ್ತು. ಸ್ವಲ್ಪಹೊತ್ತು ಮೌನದ ನಂತರ ಒಮ್ಮೆ ಪ್ರಿಯಕರನ ಸುಳುವು ಕಂಡಂತಾಗಿ, ಮೋಹನ ಗುಂಡು ಹಾರಿಸಿದ. ಗುಂಡು ತಾಗಿತು. ಅರಣ್ಯವೇ ಗಡಗಡ ನಡುಗಿತು. ಅವನ ಹೆಜ್ಜೆಯ ಸಪ್ಪಳದಿಂದ ಒಣಗಿದ ತರಗೆಲೆಗಳು ಹೃದಯ ವಿದ್ರಾವಕವಾಗಿ ಮೊರೆಯಿಡುತ್ತಿದ್ದವು. ಆದರೆ ಮತ್ತೆ ಸಂಪೂರ್ಣ ಮೌನ. ಮೋಹನನಿಗೆ ಬೇಟೆ ಬಹಳ ದೂರವಿಲ್ಲ ಎನಿಸಿತು. ಬೇಟೆಯನ್ನು ಕಟ್ಟಲು ಚೀಲದಿಂದ ಹಗ್ಗವನ್ನು ತೆಗೆದ. ಬೇಗ ಬೇಗ ಹೆಜ್ಜೆಹಾಕುತ್ತ, ಬೇಟೆ ಬಿದ್ದಲ್ಲಿಗೆ ತಲುಪಿದ. ಭಯದಿಂದ ನಡುಗಿ, ಅಲ್ಲಿಂದ ಕಾಲುಕಿತ್ತ.

ಅರಣ್ಯದಲ್ಲಿ ಹಾರಿದ ಗುಂಡಿನ ಶಬ್ದ ಆದಿವಾಸಿ ತನಾನನ್ನು ಎಚ್ಚರಿಸಿತು. ಅವನು ಓಡಿಹೋಗಿ, ಅರಣ್ಯದಲ್ಲಿ ಕಳ್ಳರು ಹೊಕ್ಕಿರುವರೆಂದು ಸುಪರಿಂಟೆಂಡೆಂಟರಿಗೆ ತಿಳಿಸಿದ. ಕೂಡಲೇ ಅವರು ಸಿಬ್ಬಂದಿ ಸಮೇತ ಗುಂಡಿನ ಶಬ್ದವಾದ ಸ್ಥಳಕ್ಕೆ ಧಾವಿಸಿದರು.

ಅವರು ಅಲ್ಲಿ ಕಂಡದ್ದು ಏನು? ರಕ್ತ ಬಸಿಯುತ್ತಿರುವ ತರುಣಿಯ ಮೃತದೇಹ. ಪ್ರಿಯಕರನನ್ನು ಓಡಿಸಿ ಪಾರುಮಾಡಿದ್ದಳು. ಗುಂಡಿನೇಟಿಗೆ ತಾನು ಬಲಿಯಾಗಿದ್ದಳು ಗಾಚಿ.

ಸಿಬ್ಬಂದಿಯ ಊಹಾಪೋಹ ಪ್ರಾರಂಭವಾಯಿತು. ಒಬ್ಬ ಕಾರಕೂನ ಟಾರ್ಚಿನ ಬೆಳಕಿನಲ್ಲಿ ಮೃತದೇಹವನ್ನು ನೋಡಿದ. ಅವಳು ಗಾಚಿಯೆಂದು ಗುರುತಿಸಿದ. "ಇವಳು ಗಾಚಿ! ತನಾನ ಮಗಳು ಸಾಹೇಬರೆ! ಮೂಕಿ!! ಕಳ್ಳರೊಡನೆ ಕೂಡಿಕೊಂಡಿದ್ದಳು. ಬೇಟೆಗಾರರಿಗೆ ಸಹಾಯಕವಾಗಿದ್ದಳು. ನನಗಂತೂ ಇವಳ ಮೇಲೆ ಮೊದಲೇ ಸಂಶಯವಿತ್ತು" ಎಂದ.

ಪ್ರಾಣವನ್ನೇ ಪಣಕ್ಕಿಟ್ಟು, ಬಲಿಗೊಟ್ಟು ಜಿಂಕೆಯನ್ನು ಉಳಿಸಿದಳು ಗಾಚಿ. ಆದರೆ, ಕಳ್ಳರೊಡನೆ ಕೂಡಿದ್ದಳೆಂಬ ಅಪವಾದ ಅವಳಿಗೆ ತಪ್ಪಲಿಲ್ಲ. ಇದು ವಿಧಿ ವಿಲಾಸ! ಈ ಪ್ರಪಂಚದ ನಿಯಮ!!

ಕನ್ನಡಕ್ಕೆ: ಮಾಧವರಾವ್ ಮುಧೋಳ್

ಎಂಥ ವಿಶ್ವಕತ್ತಲೆಯಾದರೂ, ಒಂದು ಪಣತಿಯ ಪ್ರಕಾಶವನ್ನು ನಾಶಗೊಳಿಸಲಾರದು. ಎಂಥ ದುಷ್ಟ ಶಕ್ತಿಯಾದರೂ ಸತ್ಯದ ಪ್ರಕಾಶವನ್ನು ನಾಶಗೊಳಿಸಲಾರದು.

ಗಾಂಧೀಜಿ

ಚರ್ಮದ ಆರೈಕೆ: ನೀವೇನು ತಿಳಿದಿರಬೇಕು

ಕನ್ನಡಕ್ಕೆ : ಮುನಿಯಾಲ್ ಗಣೇಶ್ ಶೆಣೈ

ಮೊದಲನೆಯದಾಗಿ ನೀವು ನಿಮ್ಮ ಚರ್ಮಕ್ಕೆ ಅನಾವಶ್ಯಕ ತೊಂದರೆ ಮಾಡಬಾರದು. ಮುಖವನ್ನು ತೊಳೆಯಲು ಬಳಸುವ ಸಾಬೂನು ತೀಕ್ಷ್ಣವಾಗಿರಬಾರದು, ಸುಗಂಧಯುಕ್ತವಾಗಿರಬಾರದು. ನಿಮ್ಮದು ಒಣ ಚರ್ಮವಾಗಿದ್ದರೆ ಗ್ಲಿಸರೀನ್ ಇರುವ ಸಾಬೂನನ್ನು ಬಳಸಿ. ಜಿಡ್ಡು ಚರ್ಮವಾಗಿದ್ದರೆ ಔಷಧಯುಕ್ತ ಸಾಬೂನನ್ನು ಬಳಸಿ. ಚರ್ಮವನ್ನು ನೀರಿನಲ್ಲಿ ಚೆನ್ನಾಗಿ ನೆನೆಸಿ. ತಣ್ಣೀರನ್ನು ಎರಚಿ, ಅನಂತರ ಒರೆಸಿಕೊಳ್ಳಿ.

ದಿನಕ್ಕೆ ಎರಡು ಸಲ ತೊಳೆದರೆ ಸಾಕು. ನಿಮ್ಮ ಚರ್ಮ ಸೂಕ್ಷ್ಮವಾಗಿದ್ದರೆ ಒಂದೇ ಸಲ ಸಾಕು. ಚರ್ಮದ ಮೇಲಿರುವ ತೈಲದ ಪೊರೆ ದೇಹದಿಂದ ನೀರಿನ ಅಂಶ ಹೆಚ್ಚಿನ ಪ್ರಮಾಣದಲ್ಲಿ ಆವಿಯಾಗಿ ಹೊರ ಹೋಗುವುದನ್ನು ತಡೆಗಟ್ಟುತ್ತದೆ ಮತ್ತು ವಾತಾವರಣದ ಜಿಡ್ಡು, ಕಸ ಮತ್ತು ವಿಷವಸ್ತುಗಳು ದೇಹವನ್ನು ಪ್ರವೇಶಿಸುವುದನ್ನು ತಡೆಗಟ್ಟುತ್ತದೆ. ವಿಪರೀತವಾಗಿ ಚರ್ಮವನ್ನು ತೊಳೆಯುವುದರಿಂದ ಚರ್ಮದ ತೈಲಪೊರೆಯನ್ನು ಕಿತ್ತಂತಾಗುತ್ತದೆ.

ನಿಮ್ಮ ಚರ್ಮ ಶುಷ್ಕವಾಗಿದ್ದರೆ ಅಥವಾ ಸೂಕ್ಷ್ಮವಾಗಿದ್ದರೆ ಅಥವಾ ಮುಖಕ್ಕೆ ಹಚ್ಚಿಕೊಂಡ ಸ್ನೋ ಪೌಡರನ್ನು ತೊಳೆಯಲಿಕ್ಕೆಂದು ಸಾಬೂನನ್ನು ಬಳಸುವುದು ಯುಕ್ತವಲ್ಲ. ಸಾಬೂನು ಬಳಸಿದ ನಂತರ ನಿಮ್ಮ ಚರ್ಮ ಶುಷ್ಕವಾಗಿದ್ದರೆ, ಬಿಗಿಯಾಗಿದ್ದರೆ ತೊಳೆಯುವ ದ್ರಾವಣವೊಂದನ್ನು ಬಳಸಬೇಕು.

ತೇವಕಾರಕಗಳು ನಿಮ್ಮ ಚರ್ಮದ ತೈಲವನ್ನು ಬಲಪಡಿಸುತ್ತವೆ. ಸರಿಯಾದ ರೀತಿಯಲ್ಲಿ ಬಳಸಿದರೆ ಚರ್ಮ ಆರೈಕೆಯಲ್ಲಿ ಅವುಗಳ

೧೯೮೬ರ ಅಕ್ಟೋಬರ್ ತಿಂಗಳಿನ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ "ಸ್ಕಿನ್ ಕೇರ್ : ವಾಟ್ ಯು ನೀಡ್ ಟು ನೊ" ಲೇಖನದ ಅನುವಾದ.

ಪಾತ್ರ ದೊಡ್ಡದು. ಎಷ್ಟೇ ಪ್ರಚಾರ ಮಾಡುತ್ತಿದ್ದರೂ ಯಾವ ಶೇವಕಾರಕವೂ ನಿಮ್ಮ ಚರ್ಮವನ್ನು ಪೋಷಿಸಲಾರದು. ತಿಂದ ಆಹಾರದ ಸತ್ವವನ್ನು ರಕ್ತ ಹೀರಿ ಚರ್ಮದ ಜೀವಕೋಶಗಳಿಗೆ ಒದಗಿಸುತ್ತದೆ. ಚರ್ಮದ ಮೇಲೆ ಕೋಳಿಮೊಟ್ಟೆ, ಜೇನುತುಪ್ಪ, ಜೀವಸತ್ವ ಅಥವಾ ಖನಿಜಗಳನ್ನು ಇಟ್ಟುಕೊಳ್ಳುವುದಕ್ಕಿಂತ, ಅವನ್ನು ಸೇವಿಸುವುದು ಉತ್ತಮ.

ಚರ್ಮದ ಮೇಲ್ಮೈಯಲ್ಲಿ ಬಹುಕಾಲದಿಂದ ಇರುವ ಜೀವಕೋಶಗಳು ಬೂದು ಬಣ್ಣವಾಗಿರುತ್ತವೆ, ಕಳೆಗುಂದಿರುತ್ತವೆ. ಅವು ಹಳಕುಗಳಾಗಿ ಚರ್ಮದ ರಂಧ್ರಗಳನ್ನು ಮುಚ್ಚುತ್ತವೆ. ಇದರಿಂದ ಚರ್ಮದ ಮೇಲೆ ಕಲೆಗಳಾಗುತ್ತವೆ. ಚರ್ಮದ ಹೊರ ಮೇಲ್ಮೈಯ ಸತ್ತ ಜೀವಕೋಶಗಳ ಪದರವನ್ನು ತೆಗೆದುಹಾಕುವುದರಿಂದ ಸುಂದರ ವಾದ ಹೊಸ ಚರ್ಮ ಕಾಣಿಸಿಕೊಳ್ಳುತ್ತದೆ. ಕೆಲವು ಚರ್ಮ ತಜ್ಞರು ಹೇಳುತ್ತಾರೆ: ಹೆಂಗಸರಿಗಿಂತ ಗಂಡಸರಲ್ಲಿ ಬಾಯಿ ಮತ್ತು ಕೆನ್ನೆಯ ಬಳಿ ಚರ್ಮ ಸುಕ್ಕುಗಟ್ಟುವುದು ಕಡಿಮೆ. ಏಕೆಂದರೆ ಗಂಡಸರು ಮುಖಕ್ಷೌರ ಮಾಡಿಕೊಳ್ಳುವುದರಿಂದ ಸಹಜ ರೀತಿಯಲ್ಲಿ ಚರ್ಮದ ಸತ್ತ ಕೋಶಗಳು ಕಳಚಿ ಬೀಳುತ್ತವೆ.

ಚರ್ಮದ ಪೊರೆಯನ್ನು ತೆಗೆಯಲು ಪ್ರಾಚೀನ ಈಜಿಪ್ಷಿಯನ್ನರು ಹಾಲುಗಲ್ಲು ಜೇನುತುಪ್ಪ ಮತ್ತು ಓಟ್ ಧಾನ್ಯದ ಗಂಜಿಯ ಮಿಶ್ರಣವನ್ನು ಬಳಸುತ್ತಿದ್ದರು. ಹುರಿದ ಓಟ್ ಧಾನ್ಯದಿಂದ ಮಾಡಿದ ಗಂಜಿಯನ್ನು ನಿಂಬೆ ರಸಕ್ಕೆ ಬೆರಸಿ ನೀವು ನಿಮ್ಮದೇ ಮಿಶ್ರಣವನ್ನು ತಯಾರಿಸಬಹುದು.

ಚರ್ಮದ ಪೊರೆಯನ್ನು ತೆಗೆಯುವ ಔಷಧಿಯನ್ನು ಎಚ್ಚರಿಕೆಯಿಂದ ಮುಖಕ್ಕೆ ಬಳಸಬೇಕು. ಸೂಕ್ಷ್ಮ ಚರ್ಮದವರು ಇದನ್ನು ಬಳಸಲೇಬಾರದು. ಕಠಿಣ ಚರ್ಮ ವನ್ನು ಸ್ಪಂಜಿನಿಂದ ವಾರಕ್ಕೆರಡು ಸಲ ರಭಸವಾಗಿ ಉಜ್ಜುವುದರಿಂದ ಸತ್ತ ಚರ್ಮ ಪೊರೆ ಕಳಚಿಹೋಗಿ, ಚರ್ಮದ ರಕ್ತನಾಳಗಳಲ್ಲಿ ರಕ್ತಪರಿಚಲನೆ ವರ್ಧಿಸುತ್ತದೆ.

ವಿವಿಧ ಪ್ರಚೋದಕಗಳಿಗೆ ಅನುಗುಣವಾಗಿ ಚರ್ಮ ಆಗಾಗ ಬದಲಾಗುತ್ತಿರು ವುದರಿಂದ ಒಂದು ವಾರ ಸೂಕ್ತವೆನಿಸಿದ್ದು ಮುಂದಿನ ವಾರ ಸೂಕ್ತವಲ್ಲದೆ ಹೋಗ ಬಹುದು. ನಿಮ್ಮ ಚರ್ಮದ ಬಗ್ಗೆ ಗಮನ ಕೊಡಿ. ಅದು ಶುಷ್ಕವಾಗಿದ್ದರೆ, ಬಿಗಿಯಾಗಿ ದ್ದರೆ ನೀವು ಅದನ್ನು ಒರಟಾಗಿ ಕಾಣುತ್ತಿದ್ದೀರಿ ಎಂದು ಅರ್ಥ.

ನಿಮ್ಮ ಚರ್ಮದ ಪ್ರಥಮ ಶತ್ರು

ವೈದ್ಯರು ಚರ್ಮದ ಆರೈಕೆಯ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳುವುದಾದರೆ 'ಬಿಸಿಲಿನಿಂದ ದೂರವಿರಿ' ಎನ್ನುತ್ತಾರೇನೋ. ಅತಿನೀಲ ಕಿರಣಗಳಷ್ಟು ವೇಗವಾಗಿ ಚರ್ಮ ವೃದ್ಧಾಪ್ಯವನ್ನು ಬೇರೊಂದು ವಸ್ತು ಮಾಡುವುದಿಲ್ಲ. ಬಿಸಿಲಲ್ಲಿ ಒಣಗಿದ ಚರ್ಮ ಸುಕ್ಕುಗಟ್ಟುತ್ತದೆ. ಬಿಸಿಲಿನಿಂದಾಗಿ ನೈಲಾನಿನಂತಹ ಕೋಲಾಜಿನ್ ಎಳೆಗಳು ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುತ್ತವೆ.

ಕಾಲಾಂತರದಲ್ಲಿ ನಿಮ್ಮ ಚರ್ಮ ಗಡಸಾಗುತ್ತದೆ. ಹೊಳಪು ಕಳೆದುಕೊಳ್ಳು ತ್ತದೆ. ಚರ್ಮದ ರಕ್ತನಾಳಗಳು ಶಕ್ತಿಗುಂದುತ್ತವೆ. ಇಂತಹ ಚರ್ಮ ಸುಲಭವಾಗಿ

ಕ್ಯಾನ್ಸರ್ ರೋಗಕ್ಕೆ ಸೋಲಬಹುದು. ಬಿಸಿಲಿನ ತೀವ್ರ ಪರಿಣಾಮದ ಬಗ್ಗೆ ನಿಮಗಿನ್ನೂ ಮನದಟ್ಟಾಗಿಲ್ಲದಿದ್ದರೆ ನಿಮ್ಮ ದೇಹದ ಮುಚ್ಚಿದ ಭಾಗಗಳನ್ನು (ಹೊಟ್ಟೆ, ತೋಳು), ಬಿಸಿಲಿಗೆ ಒಡ್ಡಿದ ಭಾಗಗಳೊಂದಿಗೆ (ಮುಖ, ಕತ್ತು ಅಂಗೈ ಹಿಂಬದಿ) ಹೋಲಿಸಿ ನೋಡಿ.

ಬಿಸಿಲಿನಿಂದ ಚರ್ಮ ಸುಕ್ಕಾಗುವುದನ್ನು ತಡೆಗಟ್ಟಬಹುದು. ಎಷ್ಟು ಬೇಗ ಬಿಸಿಲಿನಿಂದ ಮರೆಯಾಗಲು ಆರಂಭಿಸುವರೋ ಅಷ್ಟು ಒಳ್ಳೆಯದು. ಬಿಸಿಲಿಗೆ ದೇಹ ಒಡ್ಡುವುದು ಒಳ್ಳೆಯದೆಂಬ ನಂಬಿಕೆ ತಪ್ಪು. ಚರ್ಮ ಸ್ವಲ್ಪವೇ ಒಣಗಿದ್ದರೂ, ಚರ್ಮದ ಅಕಾಲ ಮುಪ್ಪಿಗೆ ಸಾಕಾಗುವಷ್ಟು ವಿಕಿರಣ ಶಕ್ತಿ ಅದನ್ನು ಬಡಿದಿರುತ್ತದೆ.

ಹುಟ್ಟಿದ ಮೊದಲ ವರ್ಷದಿಂದಲೇ ನೀವು ಬಿಸಿಲುಪರದೆ ಬಟ್ಟೆಯನ್ನು ಮುಖ–ದೇಹ ಮುಚ್ಚುವಂತೆ ಧರಿಸಿದ್ದರೆ ನೀವು ಮಧ್ಯ ವಯಸ್ಕರಾದಾಗಲೂ ನಿಮ್ಮ ಚರ್ಮ ಇಪ್ಪತ್ತರ ಯೌವನಾವಸ್ಥೆಯಲ್ಲಿರುತ್ತದೆ.

ಮೊಡವೆಗಳ ಶುಶ್ರೂಷೆ

ಬಹು ಹೆಚ್ಚಿನ ಪ್ರಮಾಣದ ಚರ್ಮ ತೊಂದರೆಯೆಂದರೆ ಮೊಡವೆಗಳು. ಇವು ನೈಸರ್ಗಿಕ ಕ್ರಿಯೆಗಳು. ಸರಿಯಾದ ಚರ್ಮ ಆರೈಕೆಯಿಂದ ಇವನ್ನು ನಿಯಂತ್ರಿಸಲೂ ಸಾಧ್ಯ. ಕೊನೆಗಾಣಿಸಲೂ ಸಾಧ್ಯ. ಕಿಶೋರಾವಸ್ಥೆಯಲ್ಲಿ ಮೊಡವೆಗಳ ಮುನ್ಸೂಚನೆ ಕಂಡಕೂಡಲೆ, ಹೆತ್ತವರು ಕೂಡಲೇ ವೈದ್ಯರಲ್ಲಿ ಕರೆದೊಯ್ಯುವುದರಿಂದ ಮುಂದೆ ಆಗಬಹುದಾದ ಮುಖ್ಯ ವಿಕೃತಿಯನ್ನು ತಡೆಯಬಹುದು. ಮೊಡವೆಗಳಿಂದೊದಗುವ ಬಹಳಷ್ಟು ಪರಿಣಾಮಗಳಿಗೆ ಮೊಡವೆಗಳು ಕಾರಣವಾಗಿರದೆ, ಅವನ್ನು ಗುಣಪಡಿಸಲು ಮಾಡಿದ ಅಯುಕ್ತ ಪ್ರಯತ್ನಗಳೇ ಕಾರಣವಾಗಿರುತ್ತವೆ.

ಕಸದ ಕಾರಣದಿಂದ ಮೊಡವೆಯಾಗುವುದಿಲ್ಲ. ಉಜ್ಜುವುದರಿಂದ ಬಹು ಕೆಟ್ಟ ಪರಿಣಾಮವಾದೀತು. ಒರಟು ಕಲ್ಲುಗಳಿಂದ ಮುಖ ಉಜ್ಜಬೇಡಿ. ಒರಟು ಬಟ್ಟೆಯಿಂದ ಒರೆಸಿಕೊಳ್ಳಬೇಡಿ. ಇದರಿಂದ ಮೊಡವೆ ಒಡೆದು ಪರಿಸ್ಥಿತಿ ಕೆಡುತ್ತದೆ. ಮೊಡವೆಗಳಿಗಾಗಿ ಇರುವ ದ್ರಾವಣವನ್ನು ಮೃದುವಾದ ಹತ್ತಿ ಉಂಡೆಯಿಂದ ಹಚ್ಚಿ. ತಣ್ಣೀರಿನಲ್ಲಿ ಮುಖ ತೊಳೆದುಕೊಳ್ಳಿ.

ಚರ್ಮದ ಮೇಲಿನ ತೈಲವನ್ನು ಆಲ್ಕೋಹಾಲ್ ತೆಗೆದುಹಾಕುತ್ತದೆ. ಅಲ್ಲದೆ ಅದು ಚರ್ಮವನ್ನು ಒಣಗಿಸಿ ಸತ್ತ ಚರ್ಮದ ಪದರಗಳು ಏಳಲು ಕಾರಣಕರ್ತವಾಗುತ್ತದೆ.

ಚಾಕೋಲೇಟ್ ಅಥವಾ ಹುರಿದ ಪದಾರ್ಥಗಳನ್ನು ತಿನ್ನುವುದರಿಂದ ಮೊಡವೆಗಳು ಹೆಚ್ಚುತ್ತವೆ ಎಂಬ ವರದಿಗಳಿಗೆ ಆಧಾರವಿಲ್ಲ.

ಗಂಭೀರಕರವಾದ ಮೊಡವೆಗಳನ್ನು ನಿಯಂತ್ರಿಸಲೆಂದು ಅಕ್ಯುಟೇನ್ ಬಳಕೆಗೆ ಅಮೇರಿಕದ ಆಹಾರ ಮತ್ತು ಔಷಧ ಆಡಳಿತೆಯು ೧೯೮೨ರಲ್ಲಿ ಒಪ್ಪಿಗೆ ನೀಡಿದೆ. ಅಕ್ಯುಟೇನ್ ಎಂಬುದು 'ಎ' ಜೀವಸತ್ವದಿಂದಾದ ಒಂದು ಔಷಧಿ. ಮೊಡವೆಗಾಯಗಳ ನಿವಾರಣೆಗೆ ಇದೊಂದು ಪರಿಣಾಮಕಾರಿ ಮದ್ದೆಂದು ತಿಳಿದುಬಂದಿದೆ. ಆದರೆ ಇದರ

ಬಳಕೆಯಿಂದ ಬೇರೆ ವಿಧದ ತೊಂದರೆಗಳು ಆಗಬಹುದು. ಕಣ್ಣಿನ ಆದ್ರ್ರ ಚರ್ಮದ ಊತ, ಕೀಲು ಅಥವಾ ಸ್ನಾಯುನೋವು, ಅಲ್ಪ ಪ್ರಮಾಣದಲ್ಲಿ ಕೂದಲು ಉದುರು ವಿಕೆ, ರಕ್ತದ ಟ್ರೈಗ್ಲಿಸರೇಡ್ (ಕೊಬ್ಬಿನಾಮ್ಲ) ಏರಿಕೆ ಇತ್ಯಾದಿ ತೊಂದರೆಗಳಾಗ ಬಹುದು.

ಅಕ್ಯುಟೇನ್ ಮದ್ದನ್ನು ಗರ್ಭಿಣಿಯರಿಗೆ ಅಥವಾ ಚಿಕಿತ್ಸಾ ಕಾಲದಲ್ಲಿ ಗರ್ಭಿಣಿ ಯಾಗಲಿರುವವರಿಗೆ ಕೊಡುವಂತಿಲ್ಲ. ಇದನ್ನು ಉಪಯೋಗಿಸುವ ಮೊದಲು ಗರ್ಭ ಧಾರಣೆಯ ಬಗ್ಗೆ ಪರೀಕ್ಷಿಸಿಕೊಳ್ಳುವುದು ಉತ್ತಮವೆಂದು ಅನೇಕ ವೈದ್ಯರ ಅಭಿಪ್ರಾಯ.

ಅಕ್ಯುಟೇನಿನ ದುಷ್ಪರಿಣಾಮಗಳಿಲ್ಲದ, ಆದರೆ ಅಕ್ಯುಟೇನಿನಷ್ಟು ಯಶಸ್ವಿಯಾದ ಔಷಧಿಗಳ ತಯಾರಿಕೆ ಬಗ್ಗೆ ಸಂಶೋಧಕರು ಭರವಸೆ ಹೊಂದಿದ್ದಾರೆ.

ಸುಮಧುರ ವೃದ್ಧಾಪ್ಯ

ನಿಮಗೆ ವಯಸ್ಸಾದಂತೆ ನಿಮ್ಮ ಗ್ರಂಥಿಗಳು ಕಡಿಮೆ ತೈಲವನ್ನು ಸ್ರವಿಸುತ್ತವೆ. ಇದರಿಂದ ಚರ್ಮ ಒಣಗಿಸಿದಂತೆನಿಸಿ ಕಾಗದದಂತಾಗುತ್ತದೆ. ಮೇಲ್ಮೈ ಪದರ ಪ್ರತಿ ೨೧–೨೩ ದಿನಕ್ಕೆ ಬದಲು ೩೦–೩೫ ದಿನಕ್ಕೊಮ್ಮೆ ಬದಲಾಗುತ್ತದೆ. ಹೊರಚರ್ಮ ಕೊಲಾಜಿನನ್ನು ತಯಾರಿಸಲು ಬಹಳ ಸಮಯ ತೆಗೆದುಕೊಳ್ಳುವುದರಿಂದ, ನಿಮ್ಮ ಚರ್ಮ ಜೋತು ಬೀಳಲು ಶುರುವಾಗುತ್ತದೆ. ಬಿಸಿಲಿಗೆ ದೀರ್ಘಕಾಲ ದೇಹ ಒಡ್ಡಿದ ಕಾರಣದಿಂದ ಅಲ್ಲಲ್ಲಿ ವರ್ಣದ್ರವ್ಯ ಮೆಲಾನಿನ್ ವಿಪರೀತ ಉತ್ಪತ್ತಿಯಾಗಿ ಕಲೆಗಳು ಮೂಡಬಹುದು. 'ಎ' ಜೀವಸತ್ವದ ಸಂಶ್ಲೇಷಿತ ರೂಪವಾದ ರೆಟಿನೋಯಿಕ್ ಆಮ್ಲವುಳ್ಳ ತೇವಕಾರಕ ಗಳು ಸುಕ್ಕನ್ನು ಪರಿಣಾಮಕಾರಿಯಾಗಿ ನಿವಾರಿಸುತ್ತವೆ. ರೆಟಿನೋಯಿಕ್ ಆಮ್ಲ ರಕ್ತ ಸಂಚಾರ ಹೆಚ್ಚಿಸುತ್ತವೆ. ಚರ್ಮದ ಕೋಶಗಳು ಕೊಲಾಜಿನನ್ನು ಉತ್ಪತ್ತಿ ಮಾಡಲು ಉತ್ತೇಜಿಸುತ್ತವೆ. ಇದರಿಂದ ಚರ್ಮದ ಚಿಕ್ಕಪುಟ್ಟ ಸುಕ್ಕುಗಳು ಮಾಯವಾಗುತ್ತವೆ. ಆಳವಾದ ಸುಕ್ಕುಗಳು ಅಷ್ಟಾಗಿ ಕಾಣವು.

ವ್ಯಾಯಾಮ ಮಾಡುವುದರಿಂದ ದೇಹದಲ್ಲಿ ರಕ್ತ ಮತ್ತು ಪೌಷ್ಟಿಕ ವಸ್ತುಗಳ ಸಂಚಾರ ಹೆಚ್ಚಾಗುವುದರಿಂದ ಚರ್ಮಕ್ಕೆ ಒಳಿತಾಗುತ್ತದೆ. ಆದರೆ ವಿಶೇಷವಾದ ಮುಖ ವ್ಯಾಯಾಮಗಳಿಂದ ಸುಕ್ಕು ಹೆಚ್ಚಾಗುತ್ತದೆ. ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾಲಯದ ಚರ್ಮತಜ್ಞ ಡಾ. ಆಲ್ಬರ್ಟ್ ಕ್ಲಗ್‌ಮನ್ ಹೇಳುತ್ತಾರೆ: "ನಿಮ್ಮ ಮುಖದ ಸ್ನಾಯು ಗಳಿಗೆ ಇರುವ ಒಂದೇ ಕೆಲಸವೆಂದರೆ ಬಾಯಿ ಮತ್ತು ಕಣ್ರೆಪ್ಪೆಗಳನ್ನು ತೆರೆಯುವುದು ಮತ್ತು ಮುಚ್ಚುವುದು. ಇದರಿಂದಾಗಿ ಮುಖಕ್ಕೆ ಸಾಕಷ್ಟು ವ್ಯಾಯಾಮ ಸಿಕ್ಕೇ ಸಿಗುತ್ತದೆ."

ನಿಮ್ಮ ಚರ್ಮವನ್ನು ಸುಸ್ಥಿತಿಯಲ್ಲಿಡಲು ನೀವು ಇವನ್ನು ಮಾಡಬಹುದು:

೧. ನೀವು ಧೂಮಪಾನಿಗಳಾಗಿದ್ದರೆ, ನಿಲ್ಲಿಸಿ. ಧೂಮಪಾನಿಗಳ ಕಣ್ಣುಗಳ ಬಳಿ ಚರ್ಮ ಕಾಗೆಗಳ ಪಾದದಂತೆ ಸುಕ್ಕುಗಟ್ಟುತ್ತದೆ. ಅವರ ಕುತ್ತಿಗೆಯ ಹಿಂಬದಿ ಕಲ್ಲಿನಂತೆ ಪೆಡಸಾಗುತ್ತದೆ. ಧೂಮಪಾನಿಗಳ ಚರ್ಮ ಗುಲಾಬಿ ವರ್ಣಕ್ಕೆ ಬದಲು

ಕಳೆಗುಂದುತ್ತದೆ, ಕಂದು ಹಳದಿ ಬಣ್ಣಕ್ಕೆ ತಿರುಗುತ್ತದೆ. ಧೂಮಪಾನ ಮಾಡುವುದರಿಂದ ನಿಮ್ಮ ಚರ್ಮ, ಬಿಸಿಲಿನಿಂದ ಬರುವ ರೋಗಗಳಿಗೆ ಬೇಗ ತುತ್ತಾಗುತ್ತದೆ.

೨. ನಿಮ್ಮ ವಯಸ್ಸು ಮತ್ತು ಎತ್ತರಕ್ಕೆ ತಕ್ಕ ತೂಕವನ್ನು ಉಳಿಸಿಕೊಳ್ಳಿ. ಇಲ್ಲದಿದ್ದರೆ ನಿಮ್ಮ ಚರ್ಮಕ್ಕೆ ತೊಂದರೆಯಾದೀತು.

೩. ಧಗೆ ಹೆಚ್ಚಿದಾಗ ತೇವಕಾರಕಗಳನ್ನು ಬಳಸಿ. ಶೇಕಡ ೫೦ ರಿಂದ ೬೦ ಆರ್ದ್ರತೆಯುಳ್ಳ ತಂಪು ವಾತಾವರಣ ನಿಮ್ಮ ಚರ್ಮಕ್ಕೆ ಬಹಳ ಉತ್ತಮ. ಚಳಿಗಾಲದಲ್ಲಿ ಮನೆಯೊಳಗೆ ಅತಿ ಉಷ್ಣವಾಯು ಮತ್ತು ಅತಿ ಶೀತಗಾಳಿಗೆ ಚರ್ಮವನ್ನು ಒಡ್ಡುವುದರಿಂದ ಚರ್ಮ—ಆರ್ದ್ರವಾತಾವರಣದಲ್ಲಿ ಕಳೆದುಕೊಳ್ಳುವುದಕ್ಕಿಂತ ೧೪೦ ಪಟ್ಟು ಹೆಚ್ಚು—ನೀರಿನಂಶವನ್ನು ಕಳೆದುಕೊಳ್ಳುತ್ತದೆ. ಇದರಿಂದ ಚರ್ಮ ಒಣಗುತ್ತದೆ.

೪. ಒಲೆ ಮೊದಲಾದ ಉಷ್ಣಮೂಲಗಳಿಂದ ಆದಷ್ಟು ದೂರವಿರಿ.

ಕೊನೆಯ ಮಾತು

ಚರ್ಮ ಕಾಂತಿಯುತವಾಗಿರಲು ಚರ್ಮದ ಒಳಗಿನಿಂದಲೇ ಪೋಷಕಗಳನ್ನು ಒದಗಿಸಬೇಕು. ಚರ್ಮದ ಅಂಗಾಂಶಗಳು ಸ್ಥಿತಿಸ್ಥಾಪಕ ಗುಣ ಮತ್ತು ತೇವಾಂಶವನ್ನು ಕಳೆದುಕೊಳ್ಳುವ ವೇಗವನ್ನು ಕಡಿಮೆ ಮಾಡಲು ಸಾಧ್ಯವೆಂದು ಕೆಲವು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಈ ರೀತಿ ಆಗಲು ಕೆಲವು ವಸ್ತುಗಳನ್ನು ಸೇವಿಸುವುದು ಅಗತ್ಯವೆಂದು ಅವರು ನಂಬುತ್ತಾರೆ. ಅವೆಂದರೆ: ಎ, ಸಿ, ಇ, ಬಿ, ಬಿ$_5$ ಮತ್ತು ಬಿ$_6$ ಜೀವಸತ್ವಗಳು, ಸತು ಮತ್ತು ಸೆಲೆನಿಯಮ್ ಖನಿಜಗಳು, ಮೊಟ್ಟೆಯಲ್ಲಿ ಸಿಗುವ ಸಿಸ್ಟೈನ್ ಎಂಬ ಅಮೈನೊ ಆಮ್ಲ, ಹಣ್ಣುಗಳಲ್ಲಿ ಸಿಗುವ ಸಿಟ್ರಸ್ ಬಯೋಫ್ಲೇವ-ನಾಯ್ಡ್ಸ್, ಸೂರ್ಯಕಾಂತಿ ಮತ್ತು ಕುಸುಬೆಗಳಂತಹ ಪಾಲಿ ಅನ್‌ಸ್ಯಾಚುರೇಟೆಡ್ ತೈಲಗಳು. ಅಂದರೆ 'ಎ' ಮತ್ತು 'ಸಿ' ಜೀವಸತ್ವಗಳುಳ್ಳ ತಾಜಾಹಣ್ಣು, ತರಕಾರಿಗಳು, 'ಬಿ' ಸಂಕೀರ್ಣ ಜೀವಸತ್ವ, 'ಇ' ಜೀವಸತ್ವ, ಸೆಲೆಸಿಯಮ್ ಮತ್ತು ನಾರುಗಳುಳ್ಳ ಪೂರ್ಣಧಾನ್ಯಗಳುಳ್ಳ ಆಹಾರ ಉತ್ತಮ. ಪ್ರಾಣಿಜನ್ಯ ಪ್ರೋಟೀನ್ ಮತ್ತು ಕೊಬ್ಬಿನ ಸೇವನೆಯನ್ನು ಬಹಳ ಕಡಿಮೆ ಮಾಡಬೇಕು.

ಈ ಕೆಲವು ಸಣ್ಣಪುಟ್ಟ ಬದಲಾವಣೆಗಳಿಂದ ನಿಮಗಾಗುವ ಉಪಯೋಗ ಬಹಳ. ಈಗಿನಿಂದ ೧೦, ೨೦ ಅಷ್ಟೇ ಏಕೆ ೫೦ ವರ್ಷಗಳ ನಂತರವೂ ಸುಂದರವಾದ ಮುಖಚರ್ಮ ನಿಮ್ಮದಾಗುವುದು.

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

[redacted]

ದ್ವಿತೀಯ ಕಾಂಡ

ಅನುವಾದ

ದೇಜಗೌ

'ಹಾಗಾದರೆ ಬನ್ನಿ' ಎಂದು ಆಂಗ್ಲ ಹುಬ್ಬು ಗಂಟಿಕ್ಕಿಕೊಂಡು, ಹಲ್ಲುಗಳ ಮೂಲಕ ಪದಗಳನ್ನು ತೂರಿಸಿದನು. ಮೊಳಕೈಗಳನ್ನು ಕುಣಿಸುತ್ತ, ವಿಕೃತ ಭಂಗಿಯಲ್ಲಿ ನಡೆಯುತ್ತ ಆಂಗ್ಲ ಅವನನ್ನು ಕರೆದೊಯ್ದನು.

ಲಾಯದ ಮುಂದಿನ ಅಂಗಳವನ್ನವರು ಪ್ರವೇಶಿಸಿದರು. ಅಲ್ಲಿ ಹಾಜರಿದ್ದ, ಕೈಯಲ್ಲಿ ಪೊರಕೆಹಿಡಿವಿದ್ದ, ನೀಟಾದ ಜಾಕೀಟು ಧರಿಸಿದ್ದ ದಿಟ್ಟತನದ ಲಾಯದ ಹುಡುಗ ಅವರನ್ನು ಸಂಧಿಸಿ, ಅವರೊಡನೆ ಹೋದನು. ಲಾಯದ ಕೊಟ್ಟಿಗೆಗಳಲ್ಲಿ ಐದು ಕುದುರೆಗಳಿದ್ದುವು. ಮಖೊತಿನ್‌ನ ಎತ್ತರದ ಕೆಂಗಂದು ಬಣ್ಣದ ಮಲ್ಲಕುದುರೆ ಯೊಂದೇ ತನ್ನ ಏಕಮಾತ್ರ ಪ್ರತಿಸ್ಪರ್ಧಿಯೆಂಬುದು ವ್ರಾಂಸ್ಕಿಗೆ ಗೊತ್ತಿತ್ತು. ತನ್ನ ಕುದುರೆಗಿಂತ ಮಿಗಿಲಾಗಿ, ತಾನೆಂದೂ ನೋಡದಿದ್ದ ಮಲ್ಲಗುದುರೆಯ ಮೇಲೆ ಕಣ್ಣು ಹಾಯಿಸಬೇಕೆಂಬುದೇ ಅವನ ವಾಂಛೆಯಾಗಿತ್ತು. ಆದರೆ ಪಂದ್ಯದ ಸಂಪ್ರದಾಯದ ಪ್ರಕಾರ ಕುದುರೆಯನ್ನು ನೋಡುವುದಿರಲಿ, ಅದರ ಬಗ್ಗೆ ಪ್ರಶ್ನೆಯನ್ನು ಕೂಡ ಎತ್ತಬಾರದಿತ್ತು. ಓಣಿಯಲ್ಲಿ ಹೋಗುತ್ತಿದ್ದಾಗ, ಲಾಯದ ಹುಡುಗ ಎಡಗಡೆಯಿದ್ದ ಎರಡನೆಯ ಕೊಟ್ಟಿಗೆಯ ಬಾಗಿಲನ್ನು ತೆರೆದನು; ಬೆಳ್ಳನೆಯ ಕಾಲುಗಳ, ಕೆಂಗಂದು ಬಣ್ಣದ ದೊಡ್ಡ ಕುದುರೆ ವ್ರಾಂಸ್ಕಿಯ ಕಣ್ಣಿಗೆ ಬಿತ್ತು. ಅದೇ ಮಲ್ಲಗುದುರೆಯೆಂದವನಿಗೆ ಗೊತ್ತಾಯಿತು. ಯಾರದೋ ವಿಳಾಸಕ್ಕೆ ಬಂದಿದ್ದ ತೆರೆದ ಕಾಗದವನ್ನು ನೋಡದ ವ್ಯಕ್ತಿಯಂತೆ ಅವನು ತನ್ನ ತಲೆಯನ್ನು ಬೇರೆ ಕಡೆಗೆ ತಿರುಗಿಸಿ, ಫ್ರೂ-ಫ್ರೂವಿನ ಕೊಟ್ಟಿಗೆಗೆ ಹೋದನು.

'ಅದೇ ಮ-ಕ್....ಮ-ಕ್....ನ ಕುದುರೆ. ಆ ಹೆಸರನ್ನು ನಾನು ಉಚ್ಚರಿಸ ಲಾರೆ.' ಎಂದು ಆಂಗ್ಲ ಭುಜವೆತ್ತಿ, ಮಲ್ಲಗುದುರೆಯ ಕಡೆಗೆ ಕೊಳೆಯುಗುರಿನ ದಪ್ಪ ಬೆರಳನ್ನು ಚಾಚಿ ತೋರಿಸಿದನು.

'ಮಖೊತಿನ್ ? ಹೌದು. ಅವನೊಬ್ಬನೇ ನನ್ನ ಗಂಭೀರ ಪ್ರತಿಸ್ಪರ್ಧಿ' ಎಂದು ವ್ರಾಂಸ್ಕಿ ನುಡಿದನು.

'ನೀವು ಸವಾರಿಸಿದ್ದೇ ಆದರೆ ನಿಮ್ಮ ಪರವಾಗಿ ನಾನು ಪಣ ಕಟ್ಟುತ್ತೇನೆ' ಎಂದು ಆಂಗ್ಲ ಗರ್ಜಿಸಿದನು.

'ಫ್ರೂ-ಫ್ರೂ ಅಂಜುಕುಳಿ, ಮಲ್ಲಗುದುರೆ ಶಕ್ತಿಶಾಲಿ' ಎಂದು ವ್ರಾಂಸ್ಕಿ ನುಡಿಯುವಾಗ ತನ್ನ ಸವಾರಿ ಜಾಣ್ಮೆಯನ್ನು ಕುರಿತ ಆಂಗ್ಲನ ಪ್ರಶಂಸೆಗಾಗಿ ಮುಗುಳು ನಗು ಅವನ ತುಟಿಗಳ ಮೇಲೆ ಸುಳಿದಾಡುತ್ತಿತ್ತು.

'ಪಂದ್ಯಾಟದ ಯಶಸ್ಸು ಸವಾರಿ ಜಾಣ್ಮೆ ಮತ್ತು ಕೆಚ್ಚುನೆಚ್ಚುಗಳನ್ನವಲಂಬಿಸಿದೆ' ಎಂದು ಆಂಗ್ಲ ಅಭಿಪ್ರಾಯಿಸಿದನು.

ತನ್ನ ಕೆಚ್ಚು ನೆಚ್ಚುಗಳು—ಅಂದರೆ ತನ್ನ ಸತ್ವ ಮತ್ತು ಧೈರ್ಯಗಳು—ಆ ಸಮಯಕ್ಕೆ ಸಾಕಾಗುವಷ್ಟಿದ್ದುವಲ್ಲದೆ, ಅದಕ್ಕಿಂತ ಮುಖ್ಯವಾಗಿ ತನ್ನನ್ನು ಮೀರಿಸುವ ಉತ್ಸಾಹ ಶಾಲಿಗಳು ಜಗತ್ತಿನಲ್ಲಿಯೇ ಇಲ್ಲವೆಂದು ವ್ರಾಂಸ್ಕಿ ತಿಳಿದಿದ್ದನು. 'ನಾನು ಮತ್ತಷ್ಟು ತೆಳ್ಳಗಾಗಬೇಕಾದ ಅವಶ್ಯಕತೆ ಇಲ್ಲವೆ ?'

'ಇಲ್ಲ. ಅಗತ್ಯವಿಲ್ಲ' ಎಂದು ಆಂಗ್ಲ ಉತ್ತರಿಸಿದನು. 'ದಯೆಯಿಟ್ಟು ಮೆಲ್ಲಗೆ ಮಾತಾಡಿ. ಕುದುರೆ ಉದ್ರೇಕಗೊಳ್ಳುತ್ತದೆ' ಎಂದವನು ಒಣಹುಲ್ಲಿನಲ್ಲಿ ಗೊರಸಿನ

ಲಟಪಟ ಧ್ವನಿ ಕೇಳಿಸುತ್ತಿದ್ದ ಹಾಗೂ ತಾವು ನಿಂತಿದ್ದ ಬೀಗದ ಬಾಗಿಲ ಕಡೆಗೆ ಸನ್ನೆ ಮಾಡುತ್ತ ನುಡಿದನು.

ಅವನು ಬಾಗಿಲು ತೆರೆದನು. ಚಿಕ್ಕ ಕಿಟಕಿಯೊಂದರಿಂದ ಮಬ್ಬು ಬೆಳಕು ಬರುತ್ತಿದ್ದ ಕೊಟ್ಟಿಗೆಯೊಳಗೆ ವ್ರಾಂಸ್ಕಿ ಪ್ರವೇಶಿಸಿದನು. ಬಾಯಿಚೀಲದ ಪಿಂಗಲವರ್ಣದ ಕುದುರೆ ಒಣಹುಲ್ಲಿನ ಮೇಲೆ ಒಂದಾದ ಮೇಲೊಂದು ಕಾಲನ್ನೆತ್ತಿ ಹಾಕುತ್ತ ನಿಂತಿತ್ತು. ಆ ಮಬ್ಬು ಬೆಳಕಿನಲ್ಲಿಣುಕಿ ನೋಡುವಾಗ, ವ್ರಾಂಸ್ಕಿ ತನ್ನ ಪ್ರೀತಿಯ ಕುದುರೆಯ ಚೆಲುವನ್ನೆಲ್ಲ ಒಂದು ಮಿಟುಕಿನಲ್ಲಿಯೇ ಹೀರಿಬಿಟ್ಟನು. ಫ್ರೂ-ಫ್ರೂ ಮಧ್ಯಮೋನ್ನತವಾದ ಕುದುರೆ; ಅದು ಸಕಲ ಲಕ್ಷಣಗಳಿಂದ ಪರಿಪೂರ್ಣವಾಗಿರಲಿಲ್ಲ. ಅದರ ಎಲುಬು ಸಣ್ಣಗಿದ್ದುವು; ಅದರ ಗುಂಡಿಗೆ ಮುಂದುಗಡೆ ತೋಮವಾಗಿ ಬಾಗಿದ್ದರೂ ಒಟ್ಟಿನಲ್ಲಿ ಇರುಬಾಗಿತ್ತು. ಅದರ ಪಿರ್ರೆಗಳು ತುಸು ಇಳಿಬಿದ್ದಿದ್ದುವು; ಅದರ ಕಾಲು, ಮುಖ್ಯವಾಗಿ ಹಿಂದಿನವು ಕಮಾನಿನಂತಿದ್ದುವು. ಮುಂದಿನ ಅಥವಾ ಹಿಂದಿನ ಕಾಲುಗಳ ಮಾಂಸಖಂಡಗಳು ಗಾತ್ರವಾಗಿರಲಿಲ್ಲ; ಆದರೆ ಅದರ ಹೆಗಲು ಅಸಾಧಾರಣ ರೀತಿಯಲ್ಲಿ ಅಗಲವಾಗಿದ್ದುವು; ಅದರಿಂದಾಗಿ, ಹಾಗೂ ತೆಳ್ಳನೆಯ ಹೊಟ್ಟೆಯಿಂದಾಗಿ ಅದರ ವೈಮಾಟ ಆಕರ್ಷಣೀಯವಾಗಿತ್ತು. ಮುಂದುಗಡೆಯಿಂದ ನೋಡಿದಾಗ ಅದರ ಕಣಕಾಲು ಬೆರಳಿಗಿಂತ ದಪ್ಪನಾಗಿ ಕಾಣುತ್ತಿರಲಿಲ್ಲ; ಆದರೆ ಪಕ್ಕದಿಂದ ನೋಡಿದಾಗ, ಅವು ತುಂಬ ಅಗಲವಾಗಿ ತುಂಬಿಕೊಂಡಂತೆ ಕಾಣುತ್ತಿದ್ದುವು. ಗುಂಡಿಗೆ ಹೊರತಾಗಿ ಅದರ ಇಡೀ ದೇಹ ಎಲ್ಲ ಪಕ್ಕಗಳಿಂದ ಒತ್ತಿಕೊಂಡಿದ್ದಂತೆ, ನೀಳವಾಗಿ ಚಾಚಿಕೊಂಡಿದ್ದಂತೆ ತೋರುತ್ತಿತ್ತು. ಎಷ್ಟೇ ನ್ಯೂನತೆಗಳಿದ್ದರೂ ಅವನ್ನೆಲ್ಲ ಮರೆಸುವಂಥ ಗುಣವೊಂದನ್ನದು ಅಪಾರ ಪ್ರಮಾಣವಲ್ಲಿ ಪಡೆದಿತ್ತು. ರಕ್ತದ ಗುಣವೆ ಅದು, ಆಂಗ್ಲರು ಹೇಳುವಂತೆ ಎಲ್ಲಕ್ಕೂ ರಕ್ತದ ಗುಣವೇ ಮೊದಲು. ಚಲನ ಶೀಲದ, ತೆಳ್ಳನೆಯ, ರೇಷ್ಮೆ ನುಣುಪಿನ ಚರ್ಮಕ್ಕೆ ಅಂಟಿಕೊಂಡಂತಿದ್ದ ರಕ್ತನಾಳಗಳ ಜಾಲದ ಕೆಳಗೆ ಚೂಪಾಗಿ ಚಾಚಿಕೊಂಡಿದ್ದ ಮಾಂಸಖಂಡಗಳು ಮೂಳೆಗಿಂತ ಗಟ್ಟಿಯಾಗಿ ಕಾಣಿಸುತ್ತಿದ್ದುವು. ಅದರ ತಲೆಯ ರಚನೆ ಅಂದವಾಗಿತ್ತು; ಕಾಂತಿಯುತವಾಗಿದ್ದ, ಎದ್ದು ಕಾಣುತ್ತಿದ್ದ, ಉತ್ಸಾಹದಿಂದ ಮಿರುಗುತ್ತಿದ್ದ ಅದರ ಕಣ್ಣು ನಾಸಾಪುಟದ ಬಳಿ ಅಗಲವಾಗಿದ್ದುವು; ಅದರ ಮೂಗಿನ ಹೊಳ್ಳೆಗಳೊಳಗೆ ಕೆಂಪು ರಕ್ತ ತುಂಬಿದ ವೃದ್ವಪ್ತಿಗಳು ಕಾಣುತ್ತಿದ್ದುವು. ಅದರ ಇಡೀ ಆಕಾರ, ಮುಖ್ಯವಾಗಿ ಅದರ ತಲೆ ಸುಲಕ್ಷಣಯುತವಾಗಿತ್ತು, ಉತ್ಸಾಹಶೀಲವಾಗಿತ್ತು; ಅಂತೆಯೇ ಸೂಕ್ಷ್ಮವಾಗಿತ್ತು, ಕೋಮಲವಾಗಿತ್ತು. ಮಾತಾಡಲು ಬಾಯಿಯ ರಚನೆ ಅನುಕೂಲವಿಲ್ಲದ ಪ್ರಾಣಿಗಳ ಜಾತಿಗೆ ಅದು ಸೇರಿದಂತೆ ಕಾಣುತ್ತಿತ್ತು.

ಅದೇನೇ ಇರಲಿ, ತಾನದರ ಕಡೆಗೆ ನೋಡಿದಾಗ, ತನ್ನ ಮನಸ್ಸಿನಲ್ಲಿದ್ದುದನ್ನೆಲ್ಲ ಅದು ಅರ್ಥ ಮಾಡಿಕೊಂಡಿರಬೇಕೆಂದು ವ್ರಾಂಸ್ಕಿ ಊಹಿಸಿಕೊಂಡನು.

ವ್ರಾಂಸ್ಕಿ ಒಳಗೆ ಕಾಲಿಟ್ಟಾಗ ಅದು ನಿಟ್ಟುಸಿರೆಳೆಯಿತು; ಬಿಳಿಯ ಗುಡ್ಡೆ ಆರಕ್ತವಾಗುವ ತನಕ ವರ್ತುಲ ನೇತ್ರವನ್ನು ಹೊರಳಿಸುತ್ತ, ಬಾಯಿಬೀಗವನ್ನಲುಗಿಸುತ್ತ, ಹಗುರವಾಗಿ ಒಂದಾದ ಮೇಲೊಂದು ಅಡಿಯನ್ನೆತ್ತಿ ಇಡುತ್ತ, ಕೊಟ್ಟಿಗೆಯ ಎದುರುಗಡೆಯಿಂದ ಅವನನ್ನು ದುರುದುರನೆ ನೋಡಿತು.

'ಅದೆಷ್ಟು ಭಾವೋದ್ರೇಕಗೊಂಡಿದೆ ನೋಡಿ' ಎಂದು ಆಂಗ್ಲ ನುಡಿದನು.

'ಅಗೋ ಅಲ್ಲಿ ನನ್ನ ಮುದ್ದು! ಅಲ್ಲಿ, ಅಲ್ಲಿ' ಎಂದು ವ್ರಾಂಸ್ಕಿ ಅದರ ಬಳಿಗೆ ನಡೆದು, ಅದನ್ನು ಸೈತಿಟ್ಟನು.

ಆದರೆ ಅದರ ಹತ್ತಿರ ಹೋದಷ್ಟೂ ಅದರ ಭಾವೋದ್ರೇಕ ಅಧಿಕಗೊಳ್ಳುತ್ತಿತ್ತು; ಅವನದರ ತಲೆಯ ಬಳಿ ನಿಂತಾಗ ಅದಕ್ಕೆ ಸಮಾಧಾನವಾಯಿತು; ಅದರ ತೆಳ್ಳನೆಯ ಕೋಮಲ ಚರ್ಮದ ಕೆಳಗೆ ಅದರ ಮಾಂಸಖಂಡಗಳು ಅದುರುತ್ತಿದ್ದುವು. ವ್ರಾಂಸ್ಕಿ ಅದರ ಕಸುವಿನ ಕೊರಳನ್ನು ತಟ್ಟಿದನು; ಹೆಗಲಿನ ಮತ್ತೊಂದು ಪಕ್ಕಕ್ಕೆ ಜಾರಿಕೊಂಡಿದ್ದ ಕೇಸರದ ಕುಚ್ಚನ್ನು ಸರಿಪಡಿಸಿದನು; ಬಾವಲಿಯ ರೆಕ್ಕೆಯಂತೆ ಪಾರದರ್ಶಕವಾಗಿದ್ದ ತೆರೆದ ಮೂಗಿನ ಹೊಳ್ಳೆಯ ಬಳಿಗೆ ತನ್ನ ಮುಖವನ್ನು ತಂದನು. ಅದು ಅರಳಿದ ಮೂಗಿನ ಹೊಳ್ಳೆಗಳ ಮೂಲಕ ಸಶಬ್ದವಾಗಿ ಉಸಿರೆಳೆದುಕೊಂಡು, ಹೊರಗೆ ನೂಕಿತು; ನಡುಗಿತು; ಚೂಪಾದ ಕಿವಿಗಳನ್ನು ನಿಮಿರಿಸಿತು; ಅಂಗಿದೋಳನ್ನು ಹಿಡಿದುಕೊಳ್ಳಲೆಂಬಂತೆ ತನ್ನ ಗಟ್ಟಿಯಾದ ಕಪ್ಪು ತುಟಿಗಳನ್ನು ವ್ರಾಂಸ್ಕಿಯ ಕಡೆಗೆ ಚಾಚಿತು, ಬಾಯಿಬೀಗವನ್ನು ನೆನೆದು, ಅದನ್ನಲುಗಿಸಿ, ತನ್ನ ತೆಳುಗಾಲುಗಳನ್ನು ಮತ್ತೆ ಅತ್ತಿತ್ತ ಎತ್ತಿಡಲಾರಂಭಿಸಿತು.

'ಸಾವಧಾನ, ಮುದ್ದೆ ಸಾವಧಾನ' ಎಂದವನು ಅದರ ಪಿರ್ರೆಯನ್ನು ತಟ್ಟುತ್ತ ನುಡಿದನು; ತನ್ನ ಕುದುರೆ ಒಳ್ಳೆಯ ಹುರುಪಿನಲ್ಲಿದೆಯೆಂಬ ಅರಿವಿನ ಸಂತೋಷದಿಂದ ಅವನು ಕೊಟ್ಟಿಗೆಯಿಂದ ಹೊರಗೆ ಹೊರಟನು.

ಕುದುರೆಯ ಉದ್ರೇಕ ವ್ರಾಂಸ್ಕಿಗೂ ತಟ್ಟಿತು. ತನ್ನ ಎದೆ ಡವಡವನೆ ಹೊಡೆದುಕೊಳ್ಳುತ್ತಿದ್ದಂತೆ ಅವನಿಗನುಭವವಾಯಿತು. ಕುದುರೆಯಂತೆ ಕಾಲಾಡಿಸಲು, ಹಾಗೂ ಕಚ್ಚಲಿಚ್ಛಿಸಿದನು. ಏಕಕಾಲದಲ್ಲಿ ಭಯ ಹರ್ಷಗಳ ಭಾವ ಅವನನ್ನಾಕ್ರಮಿಸಿಕೊಂಡಿತು.

'ನಾಸೀಗ ನಿನ್ನನ್ನೇ ನಂಬಿಕೊಂಡಿದ್ದೇನೆ' ಎಂದವನು ಆಂಗ್ಲನೊಡನೆ ಹೇಳಿದನು. 'ಆರೂವರೆ ಗಂಟೆಗೆ ಕ್ರೀಡಾಂಗಣದಲ್ಲಿ.'

'ಎಲ್ಲವೂ ಅಣಿಯಾಗಿದೆ' ಎಂದು ಆಂಗ್ಲ ನುಡಿದನು. 'ನೀವೆಲ್ಲಿಗೆ ಹೋಗುತ್ತಿದ್ದೀರಿ, ನನ್ನ ದೊರೆ?' ಎಂದವನು ಅನಿರೀಕ್ಷಿತವಾಗಿ ಅವನನ್ನು 'ನನ್ನ ದೊರೆ' ಎಂದು ಸಂಬೋಧಿಸಿದನು. ಅವನೆಂದೂ ಹಿಂದೆ ಹಾಗೆ ಸಂಬೋಧಿಸಿದ್ದಿಲ್ಲ.

ವ್ರಾಂಸ್ಕಿ ಆಶ್ಚರ್ಯದಿಂದ ತಲೆಯೆತ್ತಿದನು; ಅವನ ಅಧಿಕ ಪ್ರಸಂಗಿತನಕ್ಕೆ ಅಚ್ಚರಿಗೊಂಡನು; ಅವನ ಕಣ್ಣುಗಳ ಕಡೆಗೆ ದಿಟ್ಟಿ ಹಾಯಿಸದೆ, ರೂಢಿಯಂತೆ ಅವನ ಹಣೆಯನ್ನೆ ದುರದುರನೆ ನೋಡಿದನು. ಅಂಥ ಪ್ರಶ್ನೆಯನ್ನು ಕೇಳುವಲ್ಲಿ ಆಂಗ್ಲ ತನ್ನನ್ನು ದಣಿಯೆಂದು ಪರಿಗಣಿಸದೆ ಜೂಜುಕುದುರೆ ಸವಾರನೆಂದು ಬಗೆದನೆಂಬ ಗ್ರಹಿಕೆಯಿಂದ ಅವನು 'ನಾನು ಬ್ರಿಯಾಂಸ್ಕಿಯನ್ನು ನೋಡಬೇಕಾಗಿದೆ. ಒಂದು ಗಂಟೆಯೊಳಗೆ ಮನೆಗೆ ಮರಳುತ್ತೇನೆ' ಎಂದು ಉತ್ತರಿಸಿದನು.

'ಈ ದಿನ ಇಂಥದೇ ಪ್ರಶ್ನೆಯನ್ನು ಎಷ್ಟು ಸಲ ಕೇಳಿಸಿಕೊಂಡಾಯಿತು' ಎಂದವನು ತನ್ನೊಳಗೆ ತಾನಂದುಕೊಂಡನು. ಸಾಮಾನ್ಯವಾಗಿ ಎಂದೂ ಕೆಂಪೇರದ ಅವನ ಮುಖ ಆ ಸಂದರ್ಭದಲ್ಲಿ ಕೆಂಪೇರಿತು. ವ್ರಾಂಸ್ಕಿ ಎಲ್ಲಿಗೆ ಹೋಗುತ್ತಿದ್ದನೆಂಬುದನ್ನು ತಿಳಿದವ

ನಂತೆ ಆಂಗ್ಲ ಕ್ಷಣಕಾಲ ಅವನನ್ನೆ ದಿಟ್ಟಿಸಿದನು. 'ಪಂದ್ಯಕ್ಕೆ ಮುಂಚೆ ಚಿತ್ತಶಾಂತಿ ಅತ್ಯಗತ್ಯವೆಂಬುದನ್ನು ಮರೆಯಬಾರದು. ಮನಸ್ಸಿನ ಹದವನ್ನು ಕಳೆದುಕೊಳ್ಳಬೇಡಿ; ಉದ್ರೇಕಕ್ಕವಕಾಶ ಕೊಡಬೇಡಿ' ಎಂದವನು ನುಡಿದನು.

'ಸರಿ, ಸರಿ' ಎಂದು ವ್ರಾನ್ಸ್ಕಿ ಸುಸ್ಮಿತನಾಗಿ ಉತ್ತರಿಸಿ, ಗಾಡಿಯೊಳಗೆ ನೆಗೆದು, ಪೀಟರ್‌ಹಾಫ್ ಕಡೆಗೆ ಬಿಡುವಂತೆ ಚಾಲಕನಿಗೆ ಆಜ್ಞಾಪಿಸಿದನು.

ಕೆಲವು ಹೆಜ್ಜೆ ದಾರಿ ಸಾಗಿಸುವುದರೊಳಗೆ, ಬೆಳಗಿನಿಂದ ಕವಿದಿದ್ದ ಮಳೆಯ ಮೋಡಗಳು ಧಾರಾಕಾರವಾಗಿ ಸುರಿದುವು.

'ಎಂಥ ದುರವಸ್ಥೆ!' ಎಂದು ವ್ರಾನ್ಸ್ಕಿ ಬಂಡಿಯ ಬಂಕವನ್ನು ಸರಿಪಡಿಸುತ್ತ ಆಲೋಚಿಸಿದನು. 'ಮೊದಲೇ ಜಿರುಕಲಾಗಿತ್ತು; ಈಗಂತು ಕೆಸರಿನ ಕೊಚ್ಚೆಯಾಗುತ್ತದೆ.' ಮುಚ್ಚಿದ ಗಾಡಿಯಲ್ಲಿ ತಾನೊಬ್ಬನೇ ಇರಲಾಗಿ, ಅವನು ತನ್ನ ತಾಯಿಯ ಕಾಗದವನ್ನೂ, ತನ್ನಣ್ಣನ ಚೀಟಿಯನ್ನೂ ಜೇಬಿನಿಂದ ತೆಗೆದು, ಮತ್ತೆ ಓದತೊಡಗಿದನು.

ಹೌದು; ಒಂದೇ ವಿಷಯ, ಒಂದೇ ರಾಗ. ಅವರೆಲ್ಲರೂ—ತಾಯಿ, ಅಣ್ಣ—ಎಲ್ಲರೂ ಅವನ ಹೃದಯಕ್ಕೆ ಸಂಬಂಧಿಸಿದ ವ್ಯವಹಾರಗಳಲ್ಲಿ ತಲೆ ಹಾಕುವುದು ತಮ್ಮ ಕರ್ತವ್ಯವೆಂದು ಬಗೆದಿದ್ದರು. ಈ ತಲೆಹಾಕುತನ ಅವನನ್ನು ಕೆರಳಿಸಿತು. ಅವನು ಸಾಮಾನ್ಯವಾಗಿ ಉದ್ರೇಕಕ್ಕೊಳಗಾಗುವ, ಸಿಟ್ಟುಗೊಳ್ಳುವ ವ್ಯಕ್ತಿಯಲ್ಲ. "ಅವರಿಗೇಕೆ ಈ ದಂಧೆ? ನನ್ನ ಬಗ್ಗೆ ಎಚ್ಚರವಹಿಸುವುದು ತಮ್ಮ ಕರ್ತವ್ಯವೆಂದು ಎಲ್ಲರೂ ಏಕೆ ಬಗೆಯಬೇಕು? ಅವರೇಕೆ ನನ್ನನ್ನು ಕಾಡುತ್ತಿದ್ದಾರೆ? ತಮಗರ್ಥವಾಗದ ವಿಷಯವಾದುದರಿಂದ ಅವರು ಹೀಗೆ ಕಾಡುತ್ತಿರುವಂತೆ ಕಾಣುತ್ತದೆ. ಇದು ಸರ್ವೇಸಾಮಾನ್ಯ ಅಸಭ್ಯ ಸಮಾಜಕ್ಕೆ ಸಂಬಂಧಿಸಿದ ವಿಷಯವಾಗಿದ್ದರೆ ಅವರು ನನ್ನ ತಂಟೆಗೆ ಬರುತ್ತಿರಲಿಲ್ಲ. ಇದು ತೀರ ಭಿನ್ನವಾದದ್ದೆಂದು, ಕೇವಲ ಮನೋರಂಜನೆಯ ಸಂಗತಿಯಲ್ಲವೆಂದು, ಈ ಹೆಂಗಸು ನನ್ನ ಬದುಕಿಗಿಂತ ಹೆಚ್ಚಾಗಿ ನನಗೆ ಪ್ರಿಯವಾದವಳೆಂದು ಅವರು ಊಹಿಸಿಕೊಂಡಂತಿದೆ. ಅವರಿಗದು ಅರ್ಥವಾಗುವುದಿಲ್ಲ. ಅದರಿಂದ ಅವರಿಗೆ ಗಾಬರಿಯಾಗಿದೆ. ನಮ್ಮ ಲಲಾಟಲಿಖಿತವೇನೇ ಇರಲಿ, ಅದಕ್ಕೆ ನಾವೇ ಹೊಣೆಗಾರರು. ಆ ಬಗ್ಗೆ ನಾವು ಯಾವ ಆಕ್ಷೇಪವನ್ನೂ ಎತ್ತುವುದಿಲ್ಲ.' 'ನಾವು' ಎಂಬ ಪದವನ್ನು ಬಳಸುವ ಮೂಲಕ ಅವನು ಅನ್ನಾಳೊಂದಿಗೆ ತನ್ನನ್ನು ಕೂಡಿಸಿಕೊಂಡಿದ್ದನು. 'ಇಲ್ಲ ನಾವು ಹೇಗೆ ಬದುಕಬೇಕೆಂಬುದನ್ನವರು ಉಪದೇಶಿಸಬೇಕಾಗಿಲ್ಲ. ಸುಖವೇನೆಂಬುದರ ಕಲ್ಪನೆಯೇ ಅವರಿಗಿಲ್ಲ. ನಮ್ಮ ಪ್ರೇಮ ಹೊರತಾಗಿ, ನಮಗೆ ಸುಖವಾಗಲಿ, ಅಸುಖವಾಗಲಿ ಇಲ್ಲವೆಂಬುದನ್ನು ಅವರು ಗ್ರಹಿಸಲಾರರು; ಅದನ್ನುಳಿದವ್ವಾದರೆ, ನಮ್ಮ ಬದುಕೇ ಸೊನ್ನೆಯಾಗುತ್ತದೆ' ಎಂದವನು ತನ್ನೊಳಗೆ ತಾನಂದುಕೊಂಡನು.

ಅವರೆಲ್ಲರ ಧೋರಣೆ ಸರಿಯೆಂದು ಅವನ ಹೃದಯಾಂತರಂಗ ಪಿಸುಗುಡುತ್ತಿತ್ತು; ಆ ಕಾರಣಕ್ಕಾಗಿಯೇ ಅವನವರ ವಿಷಯದಲ್ಲಿ ಕೋಪಗೊಂಡಿದ್ದನು. ಅನ್ನಾಳೊಡನೆ ಬೆಸುಗೆಗೊಂಡಿದ್ದ ತನ್ನ ಪ್ರೇಮ ಕ್ಷಣಿಕವಾದದ್ದೆಂದವನು ಭಾವಿಸಿರಲಿಲ್ಲ. ಸಮಾಜದಲ್ಲಿ ನಡೆಯುತ್ತಿದ್ದ ಅನೇಕ ಕ್ಷಣಿಕಾನುರಾಗದ ಪ್ರಸಂಗಗಳು ಸಂತೋಷದ ಅಥವಾ ಅಸಂತೋಷದ ಸ್ಮೃತಿ ಹೊರತಾಗಿ ಬೇರಾವ ಗುರುತನ್ನೂ ಬಿಡದೆ ಮಾಯವಾಗು

ತ್ತಿದ್ದುವು. ತನ್ನ ಮತ್ತು ಅವಳ ಮನಸ್ಸಿನ ಯಾತನೆಯು, ಸಮಾಜದ ಬಿರುನೋಟಕ್ಕೆ ಗುರಿಯಾಗಿ ಅನುಭವಿಸಬೇಕಾದ ಪಾಡುಪಂತಗಳ, ತಮ್ಮ ಪ್ರೇಮವನ್ನು ಮುಚ್ಚುವ, ಸುಳ್ಳು ಹೇಳುವ ಮತ್ತು ವಂಚಿಸುವ ಕಷ್ಟಗಳ ಅರಿವು ಅವನಿಗಿತ್ತು. ತಮ್ಮ ಅನುರಾಗ ಹೊರತಾಗಿ ಬೇರೆ ವಿಷಯವನ್ನು ಕುರಿತು ಆಲೋಚಿಸಲಾಗದಷ್ಟು ಭಾವತೀವ್ರತೆಗೆ ಸೆರೆಯಾಗಿರುವಾಗ ಸದಾ ಅನ್ಯರ ಹಾಗೂ ಅನ್ಯೋಪಾಯಗಳ ಬಗ್ಗೆ ಚಿಂತಿಸುವ ತೊಂದರೆಯು ಪ್ರಜ್ಞೆಯೂ ಅವನಿಗಿತ್ತು.

ತನ್ನ ಸ್ವಭಾವಕ್ಕೆ ವಿರುದ್ಧವಾದ ಸುಳ್ಳುತಟವಟಗಳನ್ನಾಶ್ರಯಿಸಬೇಕಾದ ಸನ್ನಿವೇಶಗಳನ್ನವನು ಸುಸ್ಪಷ್ಟವಾಗಿ ಸ್ಮೃತಿಪಥಕ್ಕೆ ತಂದುಕೊಂಡನು; ಸುಳ್ಳು ಮೋಸಗಳನ್ನವಲಂಬಿಸಬೇಕಾದ ಪರಿಸ್ಥಿತಿಯೊದಗಿದಾಗ ಅವಳನುಭವಿಸುತ್ತಿದ್ದ ಅವಮಾನದ ಯಾತನೆಯ ಸಂದರ್ಭಗಳು ಮತ್ತೂ ಸ್ಪಷ್ಟವಾಗಿ ಅವನ ನೆನಪನ್ನು ಮಿಾಟುತ್ತಿದ್ದುವು. ಅನ್ನಾಳೊಡನೆಯ ಗುಪ್ತ ಪ್ರೇಮದ ನಂತರ ಕೆಲವೊಮ್ಮೆ ತನ್ನ ಮನಸ್ಸಿನಲ್ಲುದ್ಭವಿಸುತ್ತಿದ್ದ ವಿಚಿತ್ರ ಭಾವನೆಯನ್ನವನು ಅನುಭವಿಸುತ್ತಿದ್ದನು. ಅದೊಂದು ಜುಗುಪ್ಸೆಯ, ಅಸಹ್ಯದ ಭಾವವಾಗಿತ್ತು. ಅದು ಯಾರನ್ನು ಕುರಿತ ದ್ದಾಗಿತ್ತು? ಕರೆನಿನ್‌ನನ್ನೆ? ತನ್ನನ್ನೆ? ಸಮಾಜವನ್ನೆ? ಯಾವುದೆಂದು ಅವನು ಹೇಳುವಂತಿರಲಿಲ್ಲ. ಅವನು ಆ ಭಾವನೆಯನ್ನು ಹೊರದೂಡಲು ಯಾವಾಗಲೂ ಪ್ರಯತ್ನಿಸುತ್ತಿದ್ದನು. ಅವನೀಗ ಅದನ್ನು ಸಂಪೂರ್ಣವಾಗಿ ಕೊಡವಿ, ತನ್ನ ಆಲೋಚನಾಸರಣಿಯನ್ನು ಮುಂದುವರಿಸಿದನು:

'ಹೌದು, ಮೊದಲವಳು ಅಸುಖಿಯಾಗಿದ್ದಳು; ಆದರೆ ಅಭಿಮಾನಸಂಪನ್ನೆ ಯಾಗಿದ್ದಳು, ಸಮಾಧಾನಚಿತ್ತೆಯಾಗಿದ್ದಳು. ಆದರೀಗ ಅವಳು ಅಭಿಮಾನಿಯಾಗಿ ಸಮಾಧಾನಚಿತ್ತೆಯಾಗಿರಲು ಸಾಧ್ಯವಿಲ್ಲ. ಅವುಗಳನ್ನವಳು ಪ್ರದರ್ಶಿಸುತ್ತಲೂ ಇಲ್ಲ. ಹೌದು, ಅದನ್ನು ಕೊನೆಗಾಣಿಸಬೇಕು' ಎಂದವನು ನಿಶ್ಚಯಿಸಿಕೊಂಡನು.

ತಮ್ಮ ವಂಚನೆಯ ಬದುಕನ್ನು ಮುಕ್ತಾಯಗೊಳಿಸಬೇಕೆಂದು ಮೊತ್ತಮೊದಲ ನೆಯ ಸಲ ಅವನು ಸ್ಪಷ್ಟವಾಗಿ ಮನಗಂಡನು. ಆದು ಎಷ್ಟು ಬೇಗ ಜರುಗಿದರೆ ಅಷ್ಟೂ ಮೇಲು. 'ಅವಳು ಮತ್ತು ನಾನು, —ನಾವಿಬ್ಬರೂ—ಎಲ್ಲವನ್ನೂ ತುಯ್ದುಸೆದು, ಪ್ರೇಮವೊಂದನ್ನೆ ಆರಾಧಿಸುತ್ತ, ಯಾರ ಕಣ್ಣಿಗೂ ಬೀಳದಂತೆ ಹೊರಟುಹೋಗಬೇಕು' ಎಂದವನು ಮನದಲ್ಲಂದುಕೊಂಡನು.

೨೨

ಮಳೆ ಬಹುಹೊತ್ತು ಮುಂದುವರಿಯಲಿಲ್ಲ. ಲಗಾಮು ಸಡಿಲಗೊಂಡಿದ್ದ, ನಾಗಾಲೋಟವೆತ್ತಿದ್ದ ಪಕ್ಕದ ಕುದುರೆಗಳಿಗೆ ಮಾರ್ಗದರ್ಶನ ಮಾಡಿಸುತ್ತ ಮೂಕಿ ಕುದುರೆ ಪರಿಷ್ಕೃತವೇಗದಲ್ಲಿ ದೌಡಾಯಿಸುತ್ತಿತ್ತು. ತನ್ನ ನೆಲೆ ತಲುಪುವ ಹೊತ್ತಿಗೆ ಸೂರ್ಯ ಮೋಡಗಳ ಮೂಲಕ ಇಣುಕುತ್ತಿದ್ದನು. ಮನೆಗಳ ಚಾವಣಿಗಳು ಹಾಗೂ ತೋಟದ ಮುಖ್ಯರಸ್ತೆಯ ಎರಡು ಬದಿಗಳಲ್ಲಿದ್ದ ಹಳೆಯ ನಿಂಬೆಮರಗಳು ನೀರಿನಲ್ಲಿ ಮಿಂದು ಥಳಥಳಿಸುತ್ತಿದ್ದುವು; ರೆಂಬೆಗಳಲ್ಲಿ ಮತ್ತು ಗೋಡೆಯ ಪಟ್ಟಿಗಳಲ್ಲಿ ಮಿರುಗು ನೀರು

ಸುರಿಯುತ್ತಿತ್ತು. ಜೂಜು ಮೈದಾನಕ್ಕೆ ಮಳೆಯಿಂದೊದಗಿದ್ದ ನಷ್ಟವನ್ನು ಕುರಿತು ಅವನು ಚಿಂತಿಸುತ್ತಿರಲಿಲ್ಲ. ವಿದೇಶದ ನೀರೂಟೆಯಿಂದ ಇತ್ತೀಚೆಗೆ ತಾನೆ ಹಿಂದಿರುಗಿದ್ದ ಕರೆನಿನ್ ಪೀಟರ್ಸ್‌ಬರ್ಗ್‌ನಿಂದ ಹಳ್ಳಿಗೆ ಬಂದಿರಲಿಲ್ಲವೆಂಬ ಸಂಗತಿಯನ್ನು ಬಲ್ಲವನಾದ್ದರಿಂದ ಹಾಗೂ ಮಳೆಯ ಕೃಪೆಯಿಂದಾಗಿ ಅವಳೊಬ್ಬಳೇ ಮನೆಯಲ್ಲಿರುತ್ತಾಳೆಂದವನು ಹರ್ಷಗೊಂಡಿದ್ದನು.

ಒಬ್ಬಳನ್ನೇ ಕಾಣುವ ತವಕದಿಂದ ವ್ರಾಂಸ್ಕಿ ಚಿಕ್ಕ ಸೇತುವೆಯ ಹಿಂದೆಯೇ ಕೆಳಗಿಳಿದು ಕಾಲ್ನಡಗೆಯಲ್ಲಿ ಮನೆಯ ಕಡೆಗೆ ನಡೆದನು. ಇತರರ ಗಮನಕ್ಕೆ ತಾನು ಬೀಳದಿರಲೆಂದು ಅವನು ಯಾವಾಗಲೂ ಅದೇ ಕ್ರಮವನ್ನನುಸರಿಸುತ್ತಿದ್ದನು. ಅವನು ಬೀದಿಯ ಬಾಗಿಲಿಂದ ಮನೆಯನ್ನು ಪ್ರವೇಶಿಸದೆ, ಸುತ್ತು ಬಳಸು ಹಾಕಿ ಅಂಗಳದ ಮೂಲಕ ಒಳಗೆ ಜುಣುಗಿದನು.

'ಯಜಮಾನರು ಒಳಗಿದ್ದಾರೆಯೆ?' ಎಂದವನು ತೋಟಗಾರನನ್ನು ಕೇಳಿದನು.

'ಇಲ್ಲ, ಬುದ್ಧಿ. ಯಜಮಾನಿಯಿದ್ದಾರೆ. ಮುಂಬಾಗಿಲಿಂದಲೇ ಹೋಗಿ, ಸ್ವಾಮಿ. ಆಳುಗಳು ನಿಮ್ಮನ್ನು ಒಳಗೆ ಬಿಡುತ್ತಾರೆ.' ಎಂದು ತೋಟಗಾರ ಉತ್ತರಿಸಿದನು.

'ಇಲ್ಲ, ಇಲ್ಲ. ತೋಟದ ಮೂಲಕವೆ ಹೋಗುತ್ತೇನೆ.'

ಅವಳೊಬ್ಬಳೇ ಇದ್ದಾಳೆಂಬುದು ಅವನಿಗೀಗ ಖಾತರಿಯಾಯಿತು. ತಾನು ಬರುವುದಾಗಿ ಮೊದಲೇ ಅವಳಿಗೆ ಹೇಳಿರಲಿಲ್ಲವಾದ್ದರಿಂದ, ಪಂದ್ಯಾಟಗಳ ದಿನದಂದು ಅವಳು ತನ್ನನ್ನು ನಿರೀಕ್ಷಿಸಿಕೊಂಡಿರಲಿಲ್ಲವಾದ್ದರಿಂದ, ಅವಳನ್ನು ಅನಿರೀಕ್ಷಿತವಾಗಿ ಕಾಣಲಪೇಕ್ಷಿಸಿ, ಅವನು ಸದ್ದಿಲ್ಲದಂತೆ ಅವಳ ಬಳಿಗೈದಿದನು. ತನ್ನ ಕಾಲಿಗೊತ್ತಿದಂತೆ ಕತ್ತಿಯನ್ನು ಬಿಗಿಯಾಗಿ ಹಿಡಿದುಕೊಂಡು, ತೋಟದ ಕಡೆಗೆ ಮುಖಮಾಡಿಕೊಂಡಿದ್ದ ವರಾಂಡಕ್ಕೆ ಬರುವತನಕ ಅವನು ಹೂ ಗಿಡಗಳಿಂದ ಅಂಚುಗಟ್ಟಿದ ದಾರಿಯ ಮರಳಿನ ಮೇಲೆ ಸದ್ದಾಗದಂತೆ ಹೆಜ್ಜೆ ಹಾಕುತ್ತಿದ್ದನು. ತಮ್ಮ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ದಾರಿಯುದ್ದಕ್ಕೂ ತನ್ನ ಮನಸ್ಸನ್ನಾಕ್ರಮಿಸಿಕೊಂಡಿದ್ದ ತೊಂದರೆ ಅಪಾಯಗಳ ಆಲೋಚನೆಯೀಗ ಮರೆತುಹೋಗಿತ್ತು. ಒಂದೇ ಒಂದು ಆಲೋಚನೆ ಮಾತ್ರ ಅವನ ಮನಸ್ಸನ್ನೀಗ ಆಕ್ರಮಿಸಿಕೊಂಡಿತ್ತು: ಅವಳನ್ನು ಕಲ್ಪನಾನೇತ್ರಗಳಿಂದ ನೋಡದೆ ನೇರವಾಗಿ, ವಾಸ್ತವ ಜೀವನದಲ್ಲಿ ಪೂರ್ಣ ಸ್ವರೂಪದಲ್ಲಿ ನೋಡುವುದರಲ್ಲಿದ್ದನು. ವರಾಂಡದ ಸವೆದ ಮೆಟ್ಟಲು ಸದ್ದಾಗದಂತೆ ಪಾದಗಳನ್ನು ಮೆಲ್ಲನೆತ್ತಿ ಮುಂದೆ ಇಡುವಾಗ, ತಾನು ಯಾವಾಗಲೂ ಮರೆಯುತ್ತಿದ್ದ, ತಮ್ಮ ಬಾಂಧವ್ಯವನ್ನು ಪೇಚಾಟಕ್ಕೆ ಗುರಿಪಡಿಸುವಂತಿದ್ದ ಒಂದು ಸಂಗತಿ ಹಠಾತ್ತನೆ ಅವನಿಗೆ ನೆನಪಾಯಿತು: ಅವಳ ಮಗನ ಪ್ರಶ್ನಮಾಲಿಕೆ ಹಾಗೂ ವ್ರಾಂಸ್ಕಿಯು ಕಲ್ಪನೆಗೆ ಮಾತ್ರ ಗೋಚರಿಸಿದ ಅವನ ವೈರದೃಷ್ಟಿ.

ಇತರರಿಗಿಂತ ಹೆಚ್ಚಾಗಿ ಈ ಮಗು ಅವರ ಸ್ವಾತಂತ್ರ್ಯಕ್ಕೆ ಅಡಚಣೆಯಾಗಿದ್ದನು. ಬೇರೆಯವರ ಮುಂದೆ ಉಚ್ಚರಿಸಲಾಗದ ಸಂಗತಿಗಳನ್ನು ಅವನ ಮುಂದೆ ಹೇಳಲು ಅನ್ನಾವ್ರಾಂಸ್ಕಿಯರು ಹಿಂದೆಗೆಯುತ್ತಿದ್ದರು; ಅಷ್ಟೇ ಅಲ್ಲ, ಮಗುವಿನ ಗ್ರಹಣಶಕ್ತಿಗೆ ನಿಲುಕದ ಏನೊಂದನ್ನೂ ಅವರು ಬಾಯಿ ಬಿಡುತ್ತಿರಲಿಲ್ಲ. ಈ ಒಂದು ಸಂಯಮ

ಪರಸ್ಪರ ಒಪ್ಪಂದದ ಫಲಿತವಾಗಿರದೆ ಸ್ವಯಂಪ್ರೇರಣೆಯಿಂದ ಘಟಿಸಿದುದಾಗಿತ್ತು. ಅವನಿಗೆಸಗುವ ವಂಚನೆ ತಮಗೆ ಅಪಾಯಕಾರಿಯಾದೀತೆಂದವರು ಬಗೆದಿದ್ದರು. ಅವನ ಸಮ್ಮುಖದಲ್ಲವರು ಕೇವಲ ಪರಿಚಿತರಂತೆ ವರ್ತಿಸುತ್ತಿದ್ದರು. ಅವರೆಷ್ಟೇ ಜಾಗರೂಕರಾಗಿದ್ದರೂ, ಸರ್ಜ಼ಯ್ ತನ್ನನ್ನು ಗಾಬರಿಯಿಂದ ದುರುಗುಟ್ಟಿಕೊಂಡು ನೋಡುತ್ತಿದ್ದುದನ್ನು ವ್ರಾಂಸ್ಕಿ ಹಲವುಸಲ ಗಮನಿಸಿದ್ದನು. ಅವನ ಮನೋಭಾವದಲ್ಲಿ ವಿಚಿತ್ರವಾದ ಸಂಕೋಚವನ್ನೂ ಅಸ್ತಿಮಿತತೆಯನ್ನೂ ವ್ರಾಂಸ್ಕಿ ಗುರುತಿಸಿದ್ದನು. ಅದೊಮ್ಮೆ ವಾತ್ಸಲ್ಯವಾಗಿ ತೋರಿದರೆ, ಮತ್ತೊಮ್ಮೆ ಸಂಕೋಚವಾಗಿ ಹಾಗೂ ಔದಾಸೀನ್ಯವಾಗಿ ತೋರುತ್ತಿತ್ತು. ತನಗರ್ಥವಾಗದ ಯಾವುದೋ ಮುಖ್ಯ ಬಾಂಧವ್ಯವೊಂದು ಈ ಮನುಷ್ಯ ಹಾಗೂ ತನ್ನ ತಾಯಿಯರ ನಡುವೆ ಗುಪ್ತವಾಹಿನಿಯಾಗಿ ಹರಿಯುತ್ತಿದ್ದಿರಬೇಕೆಂಬ ಭಾವನೆ ಆ ಮಗುವಿನ ಮನಸ್ಸಿನಲ್ಲಿ ಹುದುಗಿದ್ದಂತೆ ಭಾಸವಾಗುತ್ತಿತ್ತು.

ಅವರ ಬಾಂಧವ್ಯ ತನಗೆ ನಿಜಕ್ಕೂ ಅರ್ಥವಾಗದೆಂದು ಹುಡುಗ ಭಾವಿಸಿದ್ದನು. ಅವನೆಷ್ಟು ಪ್ರಯತ್ನಿಸಿದರೂ ಈ ಮನುಷ್ಯನ ಬಗ್ಗೆ ತಾನು ತಾಳಬೇಕಾಗಿದ್ದ ಭಾವನೆಯ ಸ್ವರೂಪವೂ ಅವನ ಬಗೆಗಣ್ಣಿಗೆ ಹೊಳೆಯಲಿಲ್ಲ. ತನ್ನ ತಂದೆ, ಉಪಾಧ್ಯಾಯಿನಿ ಮತ್ತು ದಾದಿಯರ ಮಟ್ಟಿಗೆ ವ್ರಾಂಸ್ಕಿಯ ಸುಳಿವೇ ಅಸಹ್ಯವಾಗಿ ಕಾಣುತ್ತಿತ್ತೆಂಬುದನ್ನು ಭಾವಸೂಕ್ಷ್ಮವನ್ನರಿಯುವ ಮಗುವಿನಂತೆ, ಅವನು ತಿಳಿದುಕೊಂಡಿದ್ದನು. ಅಷ್ಟೇ ಅಲ್ಲ, ಅವನನ್ನು ಕುರಿತಂತೆ ಅವರು ಯಾವಾಗಲು ಮಾತಾಡದಿದ್ದರೂ, ಅವನ ವಿಷಯದಲ್ಲವರಿಗೆ ಭಯಜುಗುಪ್ಸೆಗಳಿದ್ದುವೆಂಬುದರ ಅರಿವು ಅವನಿಗಿತ್ತು. ಅವನು ತನ್ನ ಉತ್ತಮ ಸ್ನೇಹಿತನೆಂದು ತನ್ನ ತಾಯಿ ತಿಳಿದುಕೊಂಡಿದ್ದಳೆಂಬುದನ್ನು ಅವನು ಬಲ್ಲನು.

'ಇದೆಲ್ಲದರ ಅರ್ಥವೇನು? ಯಾರವನು? ನಾನವನನ್ನು ಪ್ರೀತಿಸುವುದಾದರೂ ಹೇಗೆ? ನಾನವನನ್ನು ಅರ್ಥಮಾಡಿಕೊಳ್ಳಲಿಲ್ಲವಾದರೆ, ತಪ್ಪು ನನ್ನದಾಗುತ್ತದೆ, ಇಲ್ಲವೆ ನಾನು ದಡ್ಡನೋ ಅವಿಧೇಯನೋ ಆಗಿರಬೇಕು' ಎಂದವನು ಯೋಚಿಸಿದನು. ಆದ್ದರಿಂದಲೇ ಅವನು ವ್ರಾಂಸ್ಕಿಯನ್ನು ಹಲವುಸಲ ಕುತೂಹಲದ ಹಾಗೂ ಒಂದು ವಿಧವಾದ ವೈರದ ದೃಷ್ಟಿಯಿಂದ ನೋಡುತ್ತಿದ್ದನು. ಅವನ ಸಂಕೋಚಕ್ಕೂ ಚಂಚಲಸ್ವಭಾವಕ್ಕೂ ಇದೇ ಕಾರಣವಾಗಿತ್ತು; ಇದರಿಂದಾಗಿ ವ್ರಾಂಸ್ಕಿ ಕಳವಳಕ್ಕೀಡಾಗಿದ್ದನು. ಅನವಶ್ಯವಾದ ವಿಚಿತ್ರರೀತಿಯ ಅಸಹ್ಯ ಭಾವ ವ್ರಾಂಸ್ಕಿಯ ಮನಸ್ಸಿನಲ್ಲಿ ಇತ್ತೀಚೆಗೆ ಬೇರೂರಿತ್ತು; ಮಗು ಎದುರಿಗಿದ್ದಾಗಲೆಲ್ಲ, ಅದು ಕೆರಳುತ್ತಿತ್ತು. ಶೀಘ್ರಗತಿಯಿಂದ ತಾನು ಗಮಿಸುತ್ತಿದ್ದ ಮಾರ್ಗ ನಕ್ಷೆಯ ಮಾರ್ಗದಿಂದ ದೂರ ಸರಿದಿತ್ತೆಂಬ ಸಂಗತಿಯನ್ನು ಕೈವಾರದ ಮೂಲಕ ನಾವಿಕ ಅರಿತುಕೊಳ್ಳುತ್ತಾನೆ; ಆದರದನ್ನು ಸರಿಪಡಿಸಿಕೊಳ್ಳುವ ಸಾಮರ್ಥ್ಯ ಅವನಲ್ಲಿರಲಿಲ್ಲ, ಪ್ರತಿಯೊಂದು ನಿಮಿಷದಲ್ಲಿಯೂ ಅವನು ನಕ್ಷೆಯ ಮಾರ್ಗಕ್ಕಿಂತ ದೂರ ಸರಿಯುತ್ತಾನೆ. ಆದರೂ ಅವನು ಅದನ್ನೊಪ್ಪಿಕೊಳ್ಳಲು ಸಿದ್ಧನಾಗಿಲ್ಲ; ಮಾರ್ಗಚ್ಯುತಿಯನ್ನೊಪ್ಪಿಕೊಂಡದ್ದಾದರೆ, ಅನಿವಾರ್ಯ ವಿನಾಶವನ್ನೊಪ್ಪಿಕೊಂಡಂತಾಗುತ್ತದೆಂದು ಅವನು ಭಾವಿಸಿದ್ದೇ ಅದಕ್ಕೆ ಕಾರಣ. ನಾವಿಕನ ಮನಸ್ಸಿನ ತೊಳಲಾಟವನ್ನೆ ಅನ್ನಾವ್ರಾಂಸ್ಕಿಯರ ಮನಸ್ಸಿನಲ್ಲಿ ಮಗುವಿನ ಸಾನ್ನಿಧ್ಯ ಕೆರಳಿಸುತ್ತಿತ್ತು.

ಜೀವನದ ಬಗ್ಗೆ ಮುಗ್ಧ ಭಾವವನ್ನು ತಾಳಿದ್ದ ಈ ಮಗುವೇ ಅವರ ಮಾರ್ಗ ಚ್ಯುತಿಯ ಪ್ರಯಾಣವನ್ನು ಸೂಚಿಸುವ ಕೈವಾರವಾಗಿದ್ದ; ಮಾರ್ಗಚ್ಯುತಿಯ ವಿಷಯ ತಮಗೆ ಗೊತ್ತಿದ್ದರೂ ಅವರು ಗೊತ್ತಿಲ್ಲದಂತಿರುತ್ತಿದ್ದರು, ಅದೇ ಅವರ ಇಷ್ಟ ವಾಗಿತ್ತು.

ಇಂದು ಸರ್ ಜಯ್ ಮನೆಯಲ್ಲಿರಲಿಲ್ಲ; ತನ್ನ ಮಗನಿಗಾಗಿ ಕಾಯುತ್ತ ಅನ್ನಾ ಒಬ್ಬಳೇ ವರಾಂಡದಲ್ಲಿ ಕುಳಿತಿದ್ದಳು. ಅವನು ವಾಯುವಿಹಾರಕ್ಕೆ ಹೋಗಿದ್ದು, ಮಳೆಗೆ ಸಿಕ್ಕಿಕೊಂಡಿದ್ದ. ಅವನನ್ನು ಕರೆತರುವ ಸಲುವಾಗಿ ಅವಳು ಸೇವಿಕೆಯನ್ನೂ ಸೇವಕ ನನ್ನೂ ಕಳಿಸಿಕೊಟ್ಟಿದ್ದಳು; ಅವರ ಮರಳಿಕೆಗಾಗಿ ಅವಳು ಕಾಯುತ್ತಿದ್ದಳು. ಕಸೂತಿ ಯಂಚಿನ, ಸಡಿಲವಾದ ಬಿಳಿಯ ಮೇಲಂಗಿಯನ್ನು ಧರಿಸಿದ್ದ ಅವಳು ವರಾಂಡದ ಮೂಲೆಯೊಂದರಲ್ಲಿ ಪುಷ್ಪರಾಶಿಯ ನಡುವೆ ಕುಳಿತಿದ್ದಳು. ವ್ರಾಂಸ್ಕಿಯ ಹೆಜ್ಜೆ ಸಪ್ಪಳ ಅವಳಿಗೆ ಕೇಳಿಸಲಿಲ್ಲ. ಕಂಬಿಯ ಮೇಲಿದ್ದ ನೀರುದಾನಿಯ ಮೇಲೆ ಕೃಷ್ಣವರ್ಣದ ಕುಂತಲರಾಶಿಯುಳ್ಳ ಅವಳ ಶಿರಸ್ಸು ಬಾಗಿತ್ತು. ಅವನಿಗೆ ಸುಪರಿಚಿತವಾಗಿದ್ದ ಉಂಗುರ ಗಳಿಂದಲಂಕೃತವಾಗಿದ್ದ ಎರಡು ಚೆಂಗೈಗಳಿಂದ ಆ ತಣ್ಣೀರಿನ ಗಡಿಗೆಯನ್ನವಳು ಹಣೆಯ ಬಳಿ ಹಿಡಿದುಕೊಂಡಿದ್ದಳು. ಪ್ರತಿಯೊಂದು ಸಲ ನೋಡಿದಾಗಲೆಲ್ಲ, ಅವಳ ಇಡೀ ಆಕೃತಿಯ, ಶಿರಸ್ಸಿನ, ಗಂಟಲಿನ, ಕೈಗಳ ಚೆಲುವು ಅದಮ್ಯರಭಸದಿಂದ ವ್ರಾಂಸ್ಕಿ ಯನ್ನು ಆಕರ್ಷಿಸುತ್ತಿತ್ತು. ಅವನು ತುಸು ನಿಂತು, ಆನಂದಪರವಶನಾಗಿ ಅವಳನ್ನೆ ನಿಟ್ಟಿಸಿದನು. ಅವಳ ಕಡೆಗವನು ಹೆಜ್ಜೆ ಹಾಕುವಷ್ಟರಲ್ಲಿ ಅವಳವನ ಸಾನ್ನಿಧ್ಯವನ್ನು ಗ್ರಹಿಸಿ, ಗಡಿಗೆಯನ್ನು ದೂರ ನೂಕಿ, ಕೆಂಪೇರಿದ ಮುಖವನ್ನವನ ಕಡೆಗೆ ತಿರುಗಿಸಿದಳು.

'ಏನದು? ನಿನಗೆ ಹುಷಾರಿಲ್ಲವೆ?' ಎಂದವನು ಅವಳ ಕಡೆಗೆ ನಡೆದು ಫ್ರೆಂಚ್ ಭಾಷೆಯಲ್ಲಿ ಕೇಳಿದನು. ಅವನವಳ ಬಳಿಗೆ ಓಡಿಹೋಗುವುದರಲ್ಲಿದ್ದ. ಆದರೆ ಯಾರಾದರೂ ಜನ ಇದ್ದಾರೆಂಬ ಶಂಕೆಯಿಂದ ತಡೆದನು; ಬಾಗಿಲ ಕಡೆಗೆ ಕದ್ದು ನೋಡಿದನು. ಅವನ ಮುಖ ಕೆಂಪೇರಿತು. ಜಾಗರೂಕನಾಗಿರಬೇಕೆಂಬ ಹೆದರಿಕೆಯಲ್ಲಿದ್ದಾಗಲೆಲ್ಲ ಅವನ ಮುಖ ಕೆಂಪಗಾಗುತ್ತಿತ್ತು.

'ನಾನು ಚೆನ್ನಾಗಿದ್ದೇನಲ್ಲ' ಎಂದವಳು ಮೇಲೆದ್ದು, ಅವನ ಚಾಚಿದ ಕೈಯನ್ನು ಬಿಗಿಯಾಗಿ ಅದುಮಿದಳು. 'ಆದರೆ ನಾನು ನಿಮ್ಮನ್ನೀಗ ನಿರೀಕ್ಷಿಸಿರಲಿಲ್ಲ.'

'ಅಯ್ಯೋ ದೇವರೆ, ನಿನ್ನ ಕೈ ಅದೆಷ್ಟು ತಣ್ಣಗಿವೆ!'

'ನೀವು ನನ್ನನ್ನು ಹೆದರಿಸಿದಿರಿ' ಎಂದವಳು ನುಡಿದಳು. 'ನಾನು ಒಂಟಿಯಾಗಿ ದ್ದೇನೆ. ಸರ್ ಜಯ್‌ಗಾಗಿ ಕಾಯುತ್ತಿದ್ದೇನೆ; ಅವನು ತಿರುಗಾಟಕ್ಕೆ ಹೋಗಿದ್ದಾನೆ. ಅವರು ಆ ದಿಕ್ಕಿನಿಂದ ಹಿಂದಿರುಗುತ್ತಾರೆ.'

ಸಮಾಧಾನ ಚಿತ್ತದಿಂದಿರಲು ಪ್ರಯತ್ನಿಸಿದರೂ ಅವಳ ತುಟಿ ಕಂಪಿಸುತ್ತಿದ್ದುವು.

'ಬಂದದ್ದಕ್ಕಾಗಿ ಕ್ಷಮಿಸು. ನಿನ್ನನ್ನು ನೋಡದೆ ದಿನ ಕಳೆಯುವುದೇ ಕಷ್ಟ ವಾಯಿತು' ಎಂದವನು ಫ್ರೆಂಚ್ ಭಾಷೆಯಲ್ಲಿ ಮಾತು ಮುಂದುವರಿಸಿದನು. ರಷ್ಯಾ ಭಾಷೆಯ 'ನೀವು' ಎಂಬ ಮಧ್ಯಮ ಪುರುಷ ಬಹುವಚನ ಔಪಚಾರಿಕವಾದುದು, ನೀರಸ ಭಾವದ್ದು; ಸಲುಗೆಯನ್ನು ಸೂಚಿಸುವ ನೀನು ಎಂಬ ಸರ್ವನಾಮ ಅಪಾಯಕಾ

ಯಾದದ್ದು; ಆದ್ದರಿಂದ ಅವನು ಫ್ರೆಂಚ್ ಭಾಷೆಯಲ್ಲಿಯೇ ಅವಳನ್ನು ಮಾತಾಡಿಸುತ್ತಿದ್ದನು.

'ಕ್ಷಮಿಸುವಂಥ ತಪ್ಪೇನು ಮಾಡಿದ್ದೀರಿ? ನನಗೆ ನಿಜಕ್ಕೂ ಸಂತೋಷವಾಗಿದೆ'.

'ಆದರೆ ನಿಮ್ಮ ಮೈಗೆ ಆರೋಗ್ಯವಿಲ್ಲ ಅಥವಾ ಮನಸ್ಸಿಗೆ ಸ್ವಸ್ಥವಿಲ್ಲವೆನಿಸುತ್ತದೆ' ಎಂದವನು ಅವಳ ಕೈ ಹಿಡಿದುಕೊಂಡೇ, ಅವಳ ಮೇಲೆ ಬಾಗಿಕೊಂಡೇ ಉಕ್ತಿಸಿದನು. 'ನೀವೇನು ಯೋಚಿಸುತ್ತಿದ್ದಿರಿ?'

'ಯಾವಾಗಲೂ ಅದೇ ವಿಷಯ' ಎಂದವಳು ಮಂದಹಾಸ ಸೂಸಿದಳು.

ಅವಳು ನಿಜ ನುಡಿದಳು. ಯಾವ ಕಾಲದಲ್ಲಿಯೇ ಆಗಲಿ, ಯಾವ ಕ್ಷಣದಲ್ಲಿಯೇ ಆಗಲಿ ಅವಳು ಯೋಚನೆ ಮಾಡುತ್ತಿದ್ದ ವಿಷಯವೇನೆಂದು ಪ್ರಶ್ನಿಸಿದ್ದಾದರೆ ಉತ್ತರ ಬೇರೆಯಾಗುತ್ತಿರಲಿಲ್ಲ. ತನ್ನ ಸುಖ ಅಥವಾ ಅಸುಖವಷ್ಟೆ. ಅವನಲ್ಲಿಗೆ ಆಗಮಿಸಿದಾಗ ಅವಳು ಚಿಂತಿಸುತ್ತಿದ್ದ ವಿಷಯವಿದು: ಬೇರೆಯವರಿಗೆ, ಬೆತ್ಸಿಯಂಥವರಿಗೆ–ತುಷ್ಕೆವಿಚ್ನೊಡನೆಯ ಬೆತ್ಸಿಯ ಗುಪ್ತ ಸಂಬಂಧದ ವಿಷಯ ಅವಳಿಗೆ ಗೊತ್ತಿತ್ತು–ಇದೆಲ್ಲ ಸುಲಭವಾಗಿರುವಾಗ, ತನಗೆ ಮಾತ್ರ ಇದೆಲ್ಲ ಏಕೆ ಹಿಂಸೆಯಾಗುತ್ತಿದೆ ಎಂದವಳು ಸೋಜಿಗಗೊಳ್ಳುತ್ತಿದ್ದಳು. ಈ ಚಿಂತೆ ಅವಳನ್ನೀಗ ಏಕೆ ಕಾಡುತ್ತಿತ್ತೆಂಬುದಕ್ಕೆ ವಿಶೇಷ ಕಾರಣಗಳಿದ್ದುವು. ಅವಳು ಪಂದ್ಯಾಟಗಳ ಬಗ್ಗೆ ಪ್ರಶ್ನೆಯಿತ್ತಿದಳು. ಅವನು ಉತ್ತರಿಸಿದನು. ಆ ಉತ್ತರದಿಂದ ಅವಳ ಮನಸ್ಸು ಕ್ಷುಭಿತಗೊಂಡಿತು. ಅವಳ ಮನಃಕ್ಷೋಭೆಯನ್ನು ಗಮನಿಸಿದ ಅವನು ಅವಳ ಗಮನವನ್ನು ಬೇರೆ ಕಡೆಗೆ ಸೆಳೆಯುವ ಸಲುವಾಗಿ, ಕುದುರೆ ಪಂದ್ಯದ ಸಿದ್ಧತೆಗೆ ಸಂಬಂಧಿಸಿದ ವಿವರಗಳನ್ನು ಅತ್ಯಂತ ಸರಳವಾಗಿ ನಿರೂಪಿಸತೊಡಗಿದನು.

'ಇವರಿಗೆ ಹೇಳಿಬಿಡಲೆ? ಅಥವಾ ಬೇಡವೆ?' ಎಂದವಳು ಅವನ ಶಾಂತಿಯುತ ಪ್ರೇಮಮಯಿ ನೇತ್ರಗಳನ್ನು ನೋಡುತ್ತ ಯೋಚಿಸಿದಳು. 'ಇವರೆಷ್ಟು ಸಂತೋಷವಾಗಿದ್ದಾರೆಂದರೆ, ಪಂದ್ಯಾಟಗಳಲ್ಲೆಷ್ಟು ಮಗ್ನರಾಗಿದ್ದಾರೆಂದರೆ, ನನ್ನ ಮಟ್ಟಿಗೆ ಈ ವಿಷಯದ ಮಹತ್ವವೇನಿರಬಹುದೆಂಬುದನ್ನು ಅರ್ಥಮಾಡಿಕೊಳ್ಳಲಾರರು.'

'ಆದರೆ ನಾನೊಳಗೆ ಬಂದಾಗ ನೀನೇನು ಯೋಚಿಸುತ್ತಿದ್ದೆಯೆಂಬುದರ ಬಗ್ಗೆ ಏನೂ ಹೇಳಲಿಲ್ಲ' ಎಂದವನು ತಾನು ಹೇಳುತ್ತಿದ್ದ ಕತೆಯನ್ನು ನಡುವೆಯೆ ನಿಲ್ಲಿಸಿ ನುಡಿದನು. 'ದಯೆಯಿಟ್ಟು ಹೇಳು.'

ಉತ್ತರ ಹೇಳದೆಯೆ ಅವಳು ತನ್ನ ತಲೆಯನ್ನು ತುಸು ಬಗ್ಗಿಸಿದಳು; ಹುಬ್ಬುಗಳ ಕೆಳಗಿನ ಉದ್ದನೆಯ ಎವೆಯಂಚಿನ ಹೊಳಹುಗಣ್ಣುಗಳಿಂದ ಅವಳು ಅವನ ಕಡೆಗೆ ಹುಡುಕುನೋಟ ಬೀರಿದಳು. ಕಿತ್ತುಕೊಂಡಿದ್ದ ಎಲೆಯೊಡನೆ ಆಟವಾಡುತ್ತಿದ್ದ ಅವಳ ಕೈ ಕಂಪಿಸುತ್ತಿತ್ತು. ಅವನದನ್ನು ನೋಡಿದನು. ಶರಣಾಗತಿಭಾವವೂ ಅಂಧನಿಷ್ಠೆಯೂ ಮುದ್ರಿಸಿದಂತಿದ್ದ ಅವನ ಮುಖ ಅವಳ ಹೃದಯವನ್ನು ಗೆದ್ದುಕೊಂಡಿತು.

'ಏನೋ ನಡೆದಿರಬೇಕೆಂದು ನನಗನಿಸುತ್ತಿದೆ. ನಾನು ಹಂಚಿಕೊಳ್ಳಲಾಗದ ತೊಂದರೆಯ ನನ್ನ ಜೀವನ ಭವಿಸುತ್ತಿರುವಾಗ ನಾನು ಶಾಂತಿಯಿಂದಿರುತ್ತೇನೆಂದು ನೀನು ಬಗೆದಿರುವೆಯಾ? ದೇವರ ಮೇಲೆ ಆಣೆಯಿಡುತ್ತೇನೆ, ನೀನು ಹೇಳಲೇಬೇಕು' ಎಂದವನು ಅವಳನ್ನು ಬೇಡಿಕೊಂಡನು.

'ಹೌದು ಇದರ ಮಹತ್ವವನ್ನಿವರು ಅರ್ಥಮಾಡಿಕೊಳ್ಳದಿದ್ದರೆ, ನಾನೆಂದೂ ಇವರನ್ನು ಕ್ಷಮಿಸಲಾರೆ. ಇವರಿಗೆ ಹೇಳದಿರುವುದೇ ಮೇಲು. ಇವರನ್ನೇಕೆ ಪರೀಕ್ಷೆಗೀಡು ಮಾಡಬೇಕು ?' ಎಂದವಳು ಅವನ ಕಡೆಗೆ ಕಣ್ಣಾಗಿ, ಎಲೆ ಹಿಡಿದಿದ್ದ ಕೈಯ ನಡುಕ ಗಳಿಗೆ ಗಳಿಗೆಗೂ ಹೆಚ್ಚುತ್ತಿದೆಯೆಂಬುದನ್ನರಿತು, ಮನಸ್ಸಿನಲ್ಲಿಯೆ ಬಗೆದಳು.

'ದೇವರ ಮೇಲಾಣೆ!' ಎಂದವನು ಅವಳ ಕೈಹಿಡಿದುಕೊಂಡು ಪುನರುಕ್ತಿಸಿ ದನು.

'ನಿಜಕ್ಕೂ ನಾನು ಹೇಳಬೇಕೇನು ?'

'ಹೌದ್ಹೌದು, ಹೇಳಲೇಬೇಕು.'

'ನನಗೊಂದು ಮಗುವಿದೆ' ಎಂದವಳು ಮೃದುವಾಗಿ ಉದ್ದೇಶಪೂರ್ವಕವಾಗಿ ನುಡಿದಳು.

ಎಲೆ ಮತ್ತಷ್ಟು ಕಂಪಿಸತೊಡಗಿತು. ಆ ವಾರ್ತೆಯನ್ನವನೆಂತು ಸ್ವಾಗತಿಸು ತ್ತಾನೆಂಬುದನ್ನು ನೋಡುವ ಸಲುವಾಗಿ, ಅವನ ಕಣ್ಣುಗಳಲ್ಲಿ ತನ್ನ ಕಣ್ಣು ಕೀಲಿಸಿ ದಳು. ಅವನ ಮುಖ ಬಿಳಿಚಿಕೊಂಡಿತು. ಏನನ್ನೋ ಹೇಳುವುದರಲ್ಲಿದ್ದು ತಡೆದು ಕೊಂಡನು. ಅವಳ ಕೈಯನ್ನು ಬಿಡುಗಡೆಗೊಳಿಸಿ, ತನ್ನ ತಲೆಯನ್ನು ಬಗ್ಗಿಸಿದನು. 'ಹೌದು, ಅದರ ಮಹತ್ವ ಇವರಿಗರಿವಾಗಿದೆ' ಎಂದವಳು ಎಣಿಸಿ, ಕೃತಜ್ಞತೆಯಿಂದ ಅವನ ಕೈಯನ್ನದುಮಿದಳು.

ಆದರೆ ಹೆಂಗಸೊಬ್ಬಳು, ಅಂದರೆ ಅವಳು ಆ ವಾರ್ತೆಯ ಮಹತ್ವವನ್ನರ್ಥಮಾಡಿ ಕೊಳ್ಳುವಂತೆ ಅವನು ಸಹ ಅರ್ಥಮಾಡಿಕೊಂಡಿದ್ದನೆಂದು ಎಣಿಸಿದ್ದರಲ್ಲಿ ಅವಳು ಮೋಸ ಹೋಗಿದ್ದಳು. ಆ ವಾರ್ತೆಯನ್ನವನು ಆಲಿಸುತ್ತಿದ್ದಂತೆ, ಯಾವುದೋ ಯಾರೋ ನೆನಪಿಗೆ ಬರಲಾಗಿ, ಎಂದಿನಂತೆ ವಿಚಿತ್ರವಾದ ಜುಗುಪ್ಸೆ ಅವನನ್ನಾಕ್ರಮಿಸಿ ಕೊಂಡಿತು. ಆ ಜುಗುಪ್ಸೆ ಈ ಸಲ ಎಂದಿಗಿಂತ ಸಾವಿರ ಪಾಲು ತೀವ್ರವಾಗಿತ್ತು. ತಾನು ಬಯಸಿದ್ದ ತಿರುವು ಇದೀಗ ಒದಗಿ ಬಂದಿತ್ತೆಂದೂ, ಅವಳ ಗಂಡನಿಂದ ತಮ್ಮ ಸಂಬಂಧ ವನ್ನಿನ್ನುಮೇಲೆ ಮುಚ್ಚಿಡಲು ಸಾಧ್ಯವಿಲ್ಲವೆಂದೂ, ಆದಷ್ಟು ಬೇಗ ತಮ್ಮ ಅಸಹಜ ಪರಿಸ್ಥಿತಿಯನ್ನು ಕೊನೆಗಾಣಿಸತಕ್ಕದೆಂದೂ ಅವನು ನಿಶ್ಚಯಿಸಿಕೊಂಡನು. ಅವಳ ಶಾರೀರಕ ರಾಗೋದ್ರೇಕವೂ ಅವನಿಗೆ ಗ್ರಹಿಕೆಯಾಗಿತ್ತು. ಅವಳ ಕಡೆಗವನು ಆರಾಧನೆಯ ಶರಣಾಗತ ದೃಷ್ಟಿಯನ್ನು ಚೆಲ್ಲಿದನು ; ಅವಳ ಕೈಯನ್ನು ಚುಂಬಿಸಿದನು : ಮೇಲೆದ್ದು, ನೀರವವಾಗಿ ವರಾಂಡದಲ್ಲಿ ಶತಪಥ ತಿರುಗಲಾರಂಭಿಸಿದನು.

'ಹೌದು' ಎಂದವನು ದೃಢಮನದಿಂದ ಅವಳ ಬಳಿಗೈದಿದನು. 'ನೀನಾಗಲಿ ನಾನಾಗಲಿ ನಮ್ಮ ಸಂಬಂಧವನ್ನು ಹಗುರವಾಗಿ ತೆಗೆದುಕೊಂಡಿಲ್ಲ. ಈಗ ನಮ್ಮ ಹಣೆ ಬರಹಕ್ಕೆ ಮುದ್ರೆಯೊತ್ತಿದಂತಾಗಿದೆ.' ಮಾತು ಮುಂದುವರಿಸುತ್ತಿದ್ದಂತೆ ಸುತ್ತಲೂ ಕಣ್ಣು ಹೊರಳಿಸಿ 'ನಮ್ಮ ಮೋಸದ ಬದುಕಿಗೆ ತೆರೆಯೆಳೆಯಬೇಕಾಗಿದೆ' ಎಂದವನು ನುಡಿದನು.

'ತೆರೆಯೆಳೆಯುವುದೆ ? ಅದು ಹೇಗೆ ಸಾಧ್ಯ ? ಅಲೆಕ್ಸಿ' ಎಂದವಳು ಮೆದುವಾಗಿ ಪ್ರಶ್ನಿಸಿದಳು. ಅವಳೀಗ ಸಮಾಧಾನ ಸ್ಥಿತಿಯಲ್ಲಿದ್ದಳು; ಕೋಮಲ ಮಂದಹಾಸದಿಂದ ಅವಳ ಮುಖ ದೀಪ್ತಗೊಂಡಿತು.

'ನೀನು ಗಂಡನನ್ನು ತ್ಯಜಿಸಬೇಕು: ನಮ್ಮಿಬ್ಬರ ಬದುಕು ಒಂದಾಗಬೇಕು.'

'ಈಗಲೇ ಒಟ್ಟಿಗೆ ಸೇರಿಕೊಂಡಿವೆಯಲ್ಲವೆ?' ಎಂದವಳು ಕೇಳಿಸಿಯೂ ಕೇಳಿಸದಂತೆ ಉತ್ತರಿಸಿದಳು.

'ನಿಜ, ನಿಜ. ಆದರೆ ಪೂರ್ತಿಯಾಗಿ, ಪೂರ್ಣವಾಗಿ.'

'ಆದರೆ ಹೇಗೆ, ಅಲೆಕ್ಸಿ? ಅದು ಹೇಗೆಂಬುವನ್ನು ಹೇಳಿಕೊಡಿ' ಎಂದವಳು ತಾನಿದ್ದ ವಿಷಮ ಪರಿಸ್ಥಿತಿಯ ಅಸಹಾಯಕತೆಯಿಂದಾಗಿ ವಿಷಾದಕರ ಪರಿಹಾಸದ ಧ್ವನಿಯಲ್ಲಿ ನುಡಿದಳು. 'ಈ ನಮ್ಮ ಪರಿಸ್ಥಿತಿಯಿಂದ ಪಾರಾಗುವ ಮಾರ್ಗವಿದೆಯೆ? ನಾನು ನನ್ನ ಗಂಡನ ಮಡದಿಯಲ್ಲವೆ?'

'ಎಂಥ ವಿಷಮಸ್ಥಿತಿಯಲ್ಲಿಯೂ ಪರಿಹಾರವಿದೆ. ನಾವು ಸಂಕಲ್ಪಬದ್ಧರಾಗಬೇಕಷ್ಟೆ' ಎಂದವನು ನುಡಿದನು. 'ನೀನು ಈಗಿರುವ ಪರಿಸ್ಥಿತಿಗಿಂತ ಬೇರೆ ಯಾವುದಾದರೂ ಸರಿಯೆ, ಉತ್ತಮವಾದದ್ದೆಂದೇ ಹೇಳಬಹುದು. ಸಮಾಜ, ನಿನ್ನ ಮಗ, ನಿನ್ನ ಗಂಡ—ಈ ಎಲ್ಲದರ ಬಗ್ಗೆಯೂ ನೀನೆಂತು ಕಸಿವಿಸಿಗೊಳಗಾಗಿದ್ದೀಯೆ, ಸಂಕಟವನ್ನನುಭವಿಸುತ್ತಿದ್ದೀಯೆಂಬುದನ್ನು ಬಲ್ಲೆ.'

'ನನ್ನ ಗಂಡನ ಬಗೆಗೆ ಮಾತ್ರವಲ್ಲ' ಎಂದವಳು ತೀರ ತಿರಸ್ಕಾರದಿಂದ ನುಡಿದಳು. 'ಅವರ ಬಗ್ಗೆ ನನಗೇನೂ ಗೊತ್ತಿಲ್ಲ; ಏನೂ ಯೋಚಿಸುವುದಿಲ್ಲ. ನನ್ನ ಪಾಲಿಗೆ ಅವರಿಲ್ಲವೆಂದೇ ಹೇಳಬೇಕು.'

'ನೀನು ಹೃದಯವನ್ನು ಬಿಚ್ಚಿ ಮಾತಾಡುತ್ತಿಲ್ಲ. ನಿನ್ನ ಅಂತರಂಗ ನನಗೆ ಗೊತ್ತಿದೆ. ಅವರ ಬಗೆಗಿನ ಚಿಂತೆಯಿಂದ ನೀನು ಹಿಂಸೆಗೊಳಗಾಗಿದ್ದೀಯೆ.'

'ಅವರಿಗಿನ್ನೂ ವಿಷಯ ತಿಳಿದಿಲ್ಲ' ಎಂದವಳು ನುಡಿದಳು. ಒಡನೆಯೆ ಅವಳ ಮುಖ ರಗರಗನೆ ಕೆಂಪೇರಿತು—ಅವಳ ಮುಖ, ಕೆನ್ನೆ, ಹಣೆ, ಕೊರಳುಗಳೆಲ್ಲ ಕಡುಗೆಂಪಾದುವು; ಸಿಗ್ಗಿನ ಕಣ್ಣೀರು ಕಣ್ಣಲ್ಲಿ ಒರತೆಗೂಡಿದುವು. 'ನಾವವರ ವಿಷಯ ಮಾತಾಡುವುದೆ ಬೇಡ.'

೨೩

ಅವಳ ಪರಿಸ್ಥಿತಿಯ ಬಗ್ಗೆ ಚರ್ಚೆ ನಡಸುವ ಸಲುವಾಗಿ, ವ್ರಾಂಸ್ಕಿ ಈಗಿನಷ್ಟು ದೃಢವಾಗಲ್ಲದಿದ್ದರೂ, ಮೊದಲೇ ಹಲವು ಸಲ ಪ್ರಯತ್ನ ನಡಸಿದ್ದನು; ಈಗಿನಂತೆಯೆ ಪ್ರತಿಯೊಂದು ಸಲವೂ ಅವನು ತನ್ನ ವಿನಂತಿಗೆ ತೋರ್ಕೆಯ ಹಾಗೂ ಹಗುರವಾದ ಪ್ರತಿಕ್ರಿಯೆಯನ್ನು ಪಡೆದಿದ್ದನು. ತನ್ನ ಪರಿಸ್ಥಿತಿಯ ಬಗ್ಗೆ ಸ್ಪಷ್ಟವಾದ ತಿಳಿವಳಿಕೆಯಿಲ್ಲದವಳಂತೆ ಅವಳು ವರ್ತಿಸುತ್ತಿದ್ದಳು. ತನ್ನ ಪರಿಸ್ಥಿತಿಯ ಬಗ್ಗೆ ಮಾತಾಡಲು ತೊಡಗಿದಾಗಲೆಲ್ಲ, ನಿಜವಾದ ಅನ್ನಾ ಅಂತರಂಗದೊಳಗೆ ಬಯಲಾದಂತೆ ವಿಚಿತ್ರವೂ ವಿದೇಶೀಯವೂ ಆದ ಮತ್ತೊಬ್ಬಳು ಅನ್ನಾ ಪ್ರತ್ಯಕ್ಷಳಾದಂತೆ ಅವನಿಗೆ ಭಾಸವಾಗುತ್ತಿತ್ತು. ಎರಡನೆಯ ಅನ್ನಾಳನ್ನು ಕಂಡಾಗ ಅವನಲ್ಲಿ ಪ್ರೀತಿಗಿಂತ ಹೆಚ್ಚಾಗಿ ಭಯ ಅಂಕುರಿಸುತ್ತಿತ್ತು; ಅಷ್ಟೇ ಅಲ್ಲ, ಅವಳವನನ್ನು ತಿರಸ್ಕಾರದಿಂದ ಕಾಣುತ್ತಿದ್ದಳು.

'ಅವನಿಗದು ತಿಳಿದಿರಲಿ, ತಿಳಿಯದಿರಲಿ' ಎಂದು ವ್ರಾಂಸ್ಕಿ ತನ್ನ ವಿಶಿಷ್ಟ ಪ್ರಶಾಂತ ಸುದೃಢ ಧ್ವನಿಯಲ್ಲಿ ಮಾತು ಪ್ರಾರಂಭಿಸಿದನು. 'ಅವನಿಗದು ತಿಳಿದಿರಲಿ ಅಥವಾ ತಿಳಿಯದಿರಲಿ, ಅದು ನಮಗೆ ಸಂಬಂಧಿಸಿದ್ದಲ್ಲ. ಸದ್ಯದ ಪರಿಸ್ಥಿತಿಯಲ್ಲಿಯೇ ನೀನು ಮುಂದುವರಿಯಲಾರೆ; ಈಗಂತು ನಮಗದು ಸಾಧ್ಯವಿಲ್ಲ.'

'ಈಗ ನಾವೇನು ಮಾಡುವುದಿದೆ? ಆ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಎಂದವಳು ಅದೇ ಪರಿಹಾಸದ ಧ್ವನಿಯಲ್ಲಿ ಪ್ರಶ್ನಿಸಿದಳು. ತಾನು ಮಗುವಿನೊಂದಿಗಿರುವ ಸಂದರ್ಭವನ್ನು ಹಗುರವಾಗಿ ಪರಿಗಣಿಸಬಹುದೆಂದವಳು ಹೆದರಿದ್ದಳು. ತೀವ್ರಕ್ರಮ ಕೈಗೊಳ್ಳಲು ಅವನಿಗದೇ ಕಾರಣವಾಗಿ ಕಾಣಿಸಿದ್ದರಿಂದ ಅವಳಿಗೀಗ ಗಾಬರಿಯಾಯಿತು.

'ಅವನಿಗೆಲ್ಲವನ್ನು ತಿಳಿಸಿ ಬಿಟ್ಟು ಬಿಡು.'

'ಸರಿ ಹಾಗಾದರೆ ಅದೇ ರೀತಿ ಮಾಡುತ್ತೇನೆಂದೇ ತಿಳಿಯೋಣ' ಎಂದವಳು ಮಾತು ಮುಂದುವರಿಸಿದಳು. 'ಮುಂದೆ ಏನಾಗುತ್ತದೆಂದು ನೀವು ಯೋಚಿಸಿದ್ದೀರಾ? ನಾನು ಮೊದಲೇ ಹೇಳಬಲ್ಲೆ.' ಒಂದು ಕ್ಷಣದ ಹಿಂದೆ ಕೋಮಲವಾಗಿದ್ದ ಕಣ್ಣುಗಳಲ್ಲಿ ದ್ವೇಷದ ಕೆಂಡ ಕಾಣಿಸಿಕೊಂಡಿತು. '"ಅಹ, ನೀನೀಗ ಮತ್ತೊಬ್ಬನನ್ನು ಪ್ರೀತಿಸುತ್ತೀಯಲ್ಲವೆ? ಅವನೊಡನೆ ಪಾಪ ಸಂಬಂಧವನ್ನು ಬೆಳೆಸಿದ್ದೀಯಲ್ಲವೆ"' ಕರೆನಿನ್ ಪಾಪ ಎಂಬ ಪದವನ್ನು ಹೇಗೆ ಒತ್ತಿಹೇಳಿದ್ದನೋ ಅದೇ ರೀತಿ ತನ್ನ ಗಂಡನನ್ನಣಕಿಸುವಲ್ಲಿ ಅವಳು ಒತ್ತಿ ಹೇಳಿದಳು. "ಮತ, ಕಾನೂನು ಮತ್ತು ಕುಟುಂಬಗಳಿಗೆ ಸಂಬಂಧಿಸಿದಂತೆ ಸಂಭವಿಸುವ ಪರಿಣಾಮಗಳ ಬಗ್ಗೆ ನೀನಾಗಲೇ ಎಚ್ಚರಿಕೆ ನೀಡಿದೆ. ನೀನು ನನ್ನ ಮಾತನ್ನು ಕೇಳಲಿಲ್ಲ. ನನ್ನ ಹೆಸರಿಗೆ ಕೆಸರಂಟದಂತೆ ನಾನೀಗ ಎಚ್ಚರಿಕೆ ವಹಿಸಬೇಕಾಗಿದೆ."' ಅನ್ನಾ ಮತ್ತೂ ನುಡಿದಳು '....ನನ್ನ ಮಗನ ಹೆಸರಿಗೆ....'; ಆದರೆ ತನ್ನ ಮಗನ ವಿಷಯದಲ್ಲವಳು ತಮಾಷೆ ಮಾಡುವಂತಿರಲಿಲ್ಲ. '....ಅದೇ ಧಾಟಿಯಲ್ಲಿ' ಎಂದವಳು ಮಾತು ತೆಗೆದಳು. 'ಒಂದೇ ಮಾತಿನಲ್ಲಿ ಹೇಳುವುದಾದರೆ, ನನ್ನನ್ನು ಬಿಡುಗಡೆ ಮಾಡಲಾಗದೆಂದು ಸ್ಫಟಿಕ ಸ್ಪಷ್ಟವಾಗಿ, ಅತ್ಯಂತ ನಿಖರವಾಗಿ ಹಾಗೂ ಅಧಿಕಾರಿಯ ಠೀವಿಯಿಂದ ಅವರು ಘೋಷಿಸುತ್ತಾರೆ. ಅಂತೆಯೇ ಲೋಕಾಪವಾದವನ್ನು ತಡೆಯಲು ತಮ್ಮೆಲ್ಲ ಶಕ್ತಿಕೌಶಲಗಳನ್ನು ಬಳಸುತ್ತಾರೆ. ತಾವು ಹೇಳುವುದನ್ನು ಚಾಚೂ ತಪ್ಪದೆ ಕಾರ್ಯಗತಗೊಳಿಸುತ್ತಾರೆ; ಹಾಗೆ ಕಾರ್ಯಗತಗೊಳಿಸುವಾಗ ಮನಶ್ಶಾಂತಿಯನ್ನು ಕಳೆದುಕೊಳ್ಳುವುದಿಲ್ಲ; ನಿಯಮ ನಿಷ್ಠೆಯನ್ನು ಮೀರುವುದಿಲ್ಲ. ಮುಂದೆ ನಡೆಯುವಂಥದೇ ಇದು. ಅವರು ಕೇವಲ ಯಂತ್ರವೇ ಹೊರತು, ಮನುಷ್ಯರಲ್ಲ. ಕೋಪಗೊಂಡಾಗ ಮಾತ್ರ ಅದೊಂದು ಕೆಟ್ಟ ಯಂತ್ರವೇ ಸರಿ.' ಅವಳ ಮನೋ ನೇತ್ರದ ಮುಂದೆ ಕರೆನಿನ್‌ನ ಸಂಪೂರ್ಣ ಚಿತ್ರ, ಅವನ ಸ್ವರೂಪ ಸ್ವಭಾವಗಳು ಮತ್ತು ಅವನ ಧಾಟಿ ಪ್ರತ್ಯಕ್ಷವಾದುವು. ಅವನ ವಿಚಾರದಲ್ಲಿ ತನ್ನ ಕಣ್ಣಿಗೆ ಕೆಟ್ಟದ್ದೇನೇನು ಕಂಡಿತೋ ಅಷ್ಟಕ್ಕೆಲ್ಲ ಅವನೇ ಅಪರಾಧಿಯೆಂದು ತೀರ್ಮಾನಿಸಿದಳು. ತನ್ನ ತಪ್ಪಿಗೂ ಅವನನ್ನೇ ಈಡುಮಾಡಿ, ಅವನೇ ಮಹಾಪರಾಧಿಯೆಂದು ಬೆರಳು ತೋರಿಸಿ, ಅವನನ್ನು ಕ್ಷಮಿಸಲು ಸಹ ಸಿದ್ಧಳಾಗಿರಲಿಲ್ಲ.

'ಆದರೆ ಅನ್ನಾ' ಎಂದು ವ್ರಾಂಸ್ಕಿ ಅವಳನ್ನು ಸಮಾಧಾನ ಪಡಿಸಲೆಂದು ಮೃದುವಾದ ಸಾನುನಯ ಧ್ವನಿಯಲ್ಲಿ ಮಾತೆತ್ತಿದನು. 'ಇಷ್ಟಾದರೂ ಅವನಿಗೆ ವಿಷಯವನ್ನು

ತಿಳಿಸುವ ಅಗತ್ಯವಿದೆ. ಅನಂತರ ಅವನ ಕಾರ್ಯವಿಧಾನವನ್ನು ನೋಡಿಕೊಂಡು ನಾವೇನು ಮಾಡಬೇಕೆಂಬುದನ್ನು ನಿರ್ಧರಿಸಬಹುದು.'

'ಏನು ಓಡಿಹೋಗುವುದೆ ?'

'ಏಕಾಗಬಾರದು ? ಇದೇ ರೀತಿ ಮುಂದುವರಿಯುವ ಸಾಧ್ಯತೆಯನ್ನು ನಾನು ಊಹಿಸಿಕೊಳ್ಳಲಾರೆ. ನನ್ನ ಮಟ್ಟಿಗಂತು ಅದು ಅಸಾಧ್ಯ. ನಿನಗೆಷ್ಟು ಯಾತನೆಯಾಗಿದೆ ಯೆಂಬುದೂ ನನಗೆ ಗೊತ್ತಿದೆ.'

'ಓಹೋ, ನಾವು ಓಡಿಹೋಗುತ್ತೇವಲ್ಲವೆ ? ನಾನು ನಿಮ್ಮ ಮಡದಿಯಾಗುತ್ತೇನಲ್ಲವೆ ? ' ಎಂದವಳು ಕೋಪದಿಂದ ನುಡಿದಳು.

'ಅನ್ನಾ' ಎಂದವನು ಆಕ್ಷೇಪಕರ ಧಾಟಿಯ ಕೋಮಲಾಂತಃಕರಣದಿಂದ ಪಿಸುಗುಟ್ಟಿದನು.

'ಹೌದು, ನಾನು ನಿಮ್ಮ ಮಡದಿಯಾಗುತ್ತೇನೆ. ಆಗೆಲ್ಲವೂ ಕೊನೆಗೊಳ್ಳುತ್ತದೆ' ಎಂದವಳು ಉಸುರಿದಳು.

ಮತ್ತೊಮ್ಮೆ ಅವಳು 'ನನ್ನ ಮಗ' ಎಂದು ಹೇಳುವುದರಲ್ಲಿದ್ದಳು ; ಆದರೆ ಆ ಪದವನ್ನುಚ್ಚರಿಸಲಸಮರ್ಥಳಾದಳು.

ಇಂಥ ದೃಢಚಿತ್ತೆಯೂ ಸತ್ಯಶೀಲೆಯೂ ಆದ ಈ ಹೆಂಗಸು ಮೋಸದ ಬದುಕನ್ನು ಹೇಗೆ ಸಹಿಸುತ್ತಾಳೆ, ಅದರಿಂದ ಹೊರಬರಲು ಏಕೆ ಪ್ರಯತ್ನಿಸುತ್ತಿಲ್ಲವೆಂಬುದು ವ್ರಾಂಸ್ಕಿಗೆ ಅರ್ಥವಾಗಲಿಲ್ಲ. ಅವಳು ಉಚ್ಚರಿಸಲಾಗದ 'ಮಗ' ಎಂಬ ಪದವೇ ಮುಖ್ಯ ಕಾರಣವೆಂಬುದನ್ನವನು ಊಹಿಸಿಕೊಳ್ಳಲಾಗಲಿಲ್ಲ. ಅವಳು ತನ್ನ ಮಗನ ಬಗ್ಗೆ ಆಲೋಚಿಸಿದಾಗಲೆಲ್ಲ, ತನ್ನ ತಂದೆಯನ್ನು ಪರಿತ್ಯಾಗ ಮಾಡಿದ ತಾಯಿಯ ಬಗ್ಗೆ ಅವನು ಮುಂದೆ ತಾಳಬಹುದಾದ ಮನೋಭಾವವನ್ನು ಊಹಿಸಿಕೊಂಡಾಗಲೆಲ್ಲ, ತಾನೆಸಗಿದ್ದ ಎಸಕಕ್ಕಾಗಿ, ತರ್ಕಬದ್ಧವಾಗಿ ಯೋಚಿಸಲಾಗದ ಅಸಾಮರ್ಥ್ಯದಿಂದಾಗಿ ಅವಳು ಭೀತ ಚೇತಸೆಯಾದಳು. ಸ್ತ್ರೀ ಸಹಜವಾದ ಬುದ್ಧಿಯಿಂದಾಗಿ ಕೃತ್ರಿಮ ಶಬ್ದ ಮತ್ತು ನೆಪಗಳಿಂದ ತನ್ನನ್ನು ತಾನು ಸಂತೈಸಿಕೊಳ್ಳಲು ಅವಳು ಪ್ರಯತ್ನಿಸಿದಳು. ಪ್ರತಿಯೊಂದು ಸಂಗತಿಯೂ ರೂಢಿಯಂತೆ ಜರುಗುತ್ತವೆಂದೂ, 'ನನ್ನ ಮಗನ ಭವಿಷ್ಯವೇ'ನೆಂಬ ಘೋರ ಪ್ರಶ್ನೆಯೂ ವಿಸ್ಮೃತಿಯ ಗರ್ಭದಲ್ಲಿ ತೇಲಿಹೋಗಬಹುದೆಂದೂ ಅವಳು ಬಗೆದಳು.

'ನಾನು ವಿನಂತಿಸಿಕೊಳ್ಳುತ್ತೇನೆ, ಕೈಯೊಡ್ಡಿ ಬೇಡಿಕೊಳ್ಳುತ್ತೇನೆ' ಎಂದವಳು ಆತನ ಕೈಹಿಡಿದುಕೊಂಡಳು; 'ಈ ವಿಷಯವನ್ನೆಂದೂ ಎತ್ತಬೇಡಿ' ಎಂದು ಸುಕೋಮಲವೂ ಪ್ರಾಮಾಣಿಕವೂ ಆದ ದನಿಯಲ್ಲಿ ಕೂಡಲೇ ಉಕ್ತಿಸಿದಳು.

'ಆದರೆ ಅನ್ನಾ—'

'ಖಂಡಿತ ಕೂಡದು. ಎಲ್ಲವನ್ನು ನನಗೆ ಬಿಡಿ. ನನ್ನ ಸ್ಥಾನಮಾನಗಳ ಪತನದ ಹಾಗೂ ಭೀಕರತೆಯ ಅರಿವು ನನಗಿದೆ ; ಆದರೆ ನಿಮ್ಮ ಸೂಚನೆ ನೀವು ಯೋಚಿಸುವಷ್ಟು ಸುಲಭವಲ್ಲ. ಎಲ್ಲವನ್ನು ನನ್ನ ವಶಕ್ಕೆ ಬಿಟ್ಟು ಬಿಡಿ ; ನನ್ನ ಮಾತು ಕೇಳಿ. ನೀವೆಂದೂ ಈ ವಿಷಯವನ್ನೆತ್ತಕೂಡದು. ನೀವು ವಚನ ನೀಡುವಿರಾ ?...ವಚನ ನೀಡಲಾರಿರಾ ?'

'ನಾನು ಯಾವ ವಿಷಯದಲ್ಲಾದರೂ ವಚನ ನೀಡಬಲ್ಲೆ. ಆದರೆ ನಾನು ಶಾಂತಿಯಿಂದಿರಲಾರೆ, ಅದರಲ್ಲಿಯೂ ಇದನ್ನೆಲ್ಲ ಹೇಳಿದ ನಂತರ ಅದು ಸಾಧ್ಯವಿಲ್ಲ. ನಿನಗೆ ಶಾಂತಿಯಿಲ್ಲದಿರುವಾಗ, ನಾನು ಶಾಂತಿಯಿಂದಿರುವುದಾದರೂ ಹೇಗೆ ?'

'ನಾನೆ ?' ಎಂದವಳು ಪ್ರಶ್ನಿಸಿದಳು. 'ಹೌದು ಕೆಲವೊಮ್ಮೆ ನಾನು ಹಾಯಾಗಿರುವುದಿಲ್ಲ ; ಆದರೆ ಆ ವಿಷಯವನ್ನು ನೀವೆತ್ತದಿದ್ದರೆ, ಅದು ಹೇಗೋ ಮರೆತುಹೋಗುತ್ತದೆ. ನೀವು ಆ ವಿಷಯವೆತ್ತಿದಾಗ ಮಾತ್ರ ನಾನು ನೆಮ್ಮದಿ ಕಳೆದುಕೊಳ್ಳುತ್ತೇನೆ.'

'ನನಗರ್ಥವಾಗದು' ಎಂದವನು ನುಡಿದನು.

'ನಿಮ್ಮಂಥ ಋಜುಶೀಲದ ಜನ ಸುಳ್ಳು ಹೇಳುವುದೆ ಕಷ್ಟವೆಂಬುದನ್ನು ನಾನು ಬಲ್ಲೆ' ಎಂದವಳು ಮಧ್ಯೆ ಬಾಯಿ ಹಾಕಿದಳು. 'ನಿಮ್ಮ ಬಗ್ಗೆ ನನಗೆ ಮರುಕವಿದೆ. ನನಗಾಗಿ ನೀವು ನಿಮ್ಮ ಜೀವನವನ್ನೆಂತು ಹಾಳುಮಾಡಿಕೊಂಡಿದ್ದೀರೆಂಬುದರ ಬಗ್ಗೆ ನಾನು ಹಲವು ಸಲ ಯೋಚಿಸಿದ್ದೇನೆ.'

'ನನಗಾಗಿ ನೀನೆಂತು ಎಲ್ಲವನ್ನು ತ್ಯಾಗ ಮಾಡಿದ್ದೀಯೆಂಬುದನ್ನು ಕುರಿತು ನನ್ನಷ್ಟಕ್ಕೆ ನಾನು ಚಿಂತಿಸುತ್ತಿದ್ದೆ. ನಿನ್ನನ್ನು ದುಃಖಕ್ಕೀಡುಮಾಡಿ ಅಕ್ಷಮ್ಯ ಅಪರಾಧವನ್ನೆಸಗಿದ್ದೇನೆ' ಎಂದವನು ಸೊಲ್ಲಿಸಿದನು.

'ನಾನು ದುಃಖಾರ್ತಳೆ ?' ಎಂದವಳು ಅವನ ಸನಿಹಕ್ಕೆ ಸರಿದು, ಪ್ರೇಮೋದ್ಭೂತ ಆನಂದಪರವಶತೆಯ ಮಂದಹಾಸದಿಂದ ಅವನ ಕಣ್ಣುಗಳಲ್ಲಿ ತನ್ನ ಕಣ್ಣುಗಳನ್ನು ಕೀಲಿಸಿದಳು. 'ನಾನೊಂದು ಹಸಿದ ಮನುಷ್ಯನಂತಿದ್ದೇನೆ. ಅವನಿಗೆ ಆಹಾರವನ್ನೂ ಕೊಟ್ಟಾಗಿದೆ. ಆ ಪ್ರಾಣಿ ಉದಾಸೀನದಿಂದಿರಬಹುದು ; ಚಿಂದಿಯಲ್ಲಿರಬಹುದು ; ಲಜ್ಜಾನ್ವಿತನಾಗಿರಬಹುದು ; ಆದರವನು ದುಃಖಾರ್ತನಲ್ಲ. ನಾನು ದುಃಖಾರ್ತಳೆ ? ಇಲ್ಲ, ಇಲ್ಲ ; ಇಗೋ ಇಲ್ಲಿದೆ ನನ್ನ ಸುಖ....'

ಮಗ ಬಂದ ಸದ್ದನ್ನವಳು ಕೇಳಿಸಿಕೊಂಡಳು ; ವರಾಂಡದ ಸುತ್ತಲೂ ಕಣ್ಣು ಹೊರಳಿಸಿ, ಥಟ್ಟನೆ ಮೇಲೆದ್ದಳು. ಅವನಿಗೆ ಪರಿಚಿತವಾಗಿದ್ದ ಬೆಳಕು ಅವಳ ಕಣ್ಣುಗಳಲ್ಲಿ ಮಿಂಚಿತು ; ಒಂದೇ ಒಂದು ಶೀಘ್ರಚಲನೆಯಲ್ಲವಳು ಉಂಗುರಗಳಿಂದಲಂಕೃತವಾಗಿದ್ದ ತನ್ನ ಚೆಂಗೈಗಳನ್ನು ಮೇಲೆತ್ತಿದಳು ; ಅವುಗಳಲ್ಲಿ ತನ್ನ ತಲೆಯನ್ನವಚಿಕೊಂಡಳು ; ಸಾವಕಾಶವಾಗಿ ಅವನನ್ನೆ ನಿಟ್ಟಿಸಿದಳು ; ತನ್ನ ಮುಖವನ್ನವನ ಮುಖದೊತ್ತಿಗೆ, ಮಂದಹಾಸದ ತನ್ನ ತೆರೆದ ತುಟಿಗಳನ್ನವನ ತುಟಿತಟಕ್ಕೆ ಸರಿಸಿದಳು ; ಬೇಗ ಬೇಗ ಅವನ ತುಟಿಗಳ ಮತ್ತು ಎರಡು ಕಣ್ಣುಗಳ ಮೇಲೆ ಮುತ್ತಿನ ಮುದ್ರೆಯೊತ್ತಿದಳು ; ಅವನನ್ನು ದೂರ ನೂಕಿದಳು. ಅವಳು ಹೋಗುವ ಸಲುವಾಗಿ ತಿರುಗಿದಳು ; ಆದರವನು ಅವಳನ್ನು ಬಿಡಲಿಲ್ಲ.

'ಮತ್ತೆ ಯಾವಾಗ ?' ಎಂದವನು ಆನಂದಪರವಶನಾಗಿ ಅವಳನ್ನೆ ನಿಟ್ಟಿಸುತ್ತ ಪಿಸುಗುಟ್ಟಿದನು.

'ರಾತ್ರಿ ಒಂದು ಗಂಟೆಗೆ' ಎಂದವಳು ಪಿಸುದನಿಯಲ್ಲಿಯೆ ಉತ್ತರಿಸಿದಳು. ನಿಡುಸುಯ್ದು, ಹಗುರವಾಗಿ, ಬೇಗ ಬೇಗ ಹೆಜ್ಜೆಯಿಡುತ್ತ ಅವಳು ತನ್ನ ಮಗನ ಕಡೆಗೆ ನಡೆದಳು.

ಸರ್ಜಿಯ್ ದೊಡ್ಡ ತೋಟದ ಬಳಿ ಬರುವ ಹೊತ್ತಿಗೆ ಮಳೆ ಪ್ರಾರಂಭವಾಗಿತ್ತು. ಅವನೂ ದಾದಿಯೂ ಬೇಸಿಗೆ ಮನೆಯೊಂದರಲ್ಲಿ ಆಶ್ರಯ ಪಡೆದಿದ್ದರು.

'ನಮಸ್ಕಾರ' ಎಂದವಳು ವ್ರಾಂಸ್ಕಿಯನ್ನು ಬೀಳ್ಕೊಟ್ಟಳು. 'ನಾನು ಆದಷ್ಟು ಬೇಗ ಪಂದ್ಯಾಟ ನೋಡಲು ಹೋಗುತ್ತೇನೆ. ಬೆಟ್ಸಿ ನನ್ನನ್ನು ಕರೆದೊಯ್ಯುವುದಾಗಿ ಮಾತು ಕೊಟ್ಟಿದ್ದಾಳೆ.'

ವ್ರಾಂಸ್ಕಿ ತನ್ನ ಗಡಿಯಾರ ನೋಡಿಕೊಂಡು, ಶೀಘ್ರಗತಿಯಲ್ಲಿ ತೆರಳಿದನು.

೨೪

ಕರೆನಿನ್‌ರ ಮನೆಯ ವರಾಂಡದಲ್ಲಿ ವ್ರಾಂಸ್ಕಿ ತನ್ನ ಗಡಿಯಾರವನ್ನು ನೋಡಿಕೊಂಡಾಗ, ಆಲೋಚನಾಮಗ್ನವಾಗಿದ್ದ ಅವನ ಮನಸ್ಸು ಎಷ್ಟು ಕ್ಷುಭಿತಗೊಂಡಿತ್ತೆಂದರೆ, ಗಡಿಯಾರದ ಮೇಲ್ಮೈಯ್ಯ ಮೇಲೆ ಕೈಗಳು ಕಾಣಿಸಿದುವೆ ಹೊರತು, ಅವು ತೋರಿಸುತ್ತಿದ್ದ ವೇಳೆ ಅವನ ಗಮನಕ್ಕೆ ಬರಲಿಲ್ಲ. ಅವನು ರಸ್ತೆಯನ್ನು ತಲುಪಿ, ಎಚ್ಚರಿಕೆಯಿಂದ ಕೆಸರಿನ ಮೂಲಕ ಮುಂಬರಿದು, ತನ್ನ ಗಾಡಿಯನ್ನೇಟುಕಿಸಿದನು. ಅವನೆಷ್ಟು ಭಾವವಶನಾಗಿದ್ದನೆಂದರೆ, ಗಂಟೆಯೂ ಅವನ ಗಮನಕ್ಕೆ ಬರಲಿಲ್ಲ; ಬ್ರಿಯಾನ್‌ಸ್ಕಿಯನ್ನು ನೋಡಲು ಸಮಯವಿತ್ತೇ ಇಲ್ಲವೆ ಎಂಬುದನ್ನು ಯೋಚಿಸುವ ಪರಿವೆಯೂ ಅವನಿಗಿರಲಿಲ್ಲ. ಸಾಮಾನ್ಯವಾಗಿ ಸಂಭವಿಸುವಂತೆ ಅವನ ನೆನಪಿನ ಮೇಲ್ಪದರ ಮಾತ್ರ ಅವನ ಮನಸ್ಸಿನಲ್ಲುಳಿದಿತ್ತು; ಹಿಂದಿನ ಕೆಲಸ ಮುಗಿದ ನಂತರ ಮುಂದಿನ ಕೆಲಸ ಯಾವುದೆಂಬುದು ಮಾತ್ರ ಆ ಮೇಲ್ಪದರದಿಂದ ತಿಳಿಯುತ್ತಿತ್ತು. ಅವನು ಗಾಡಿಯವನ ಬಳಿಗೆ ನಡೆದನು; ಗಾಡಿಯವ ಸುತ್ತಲೂ ಹರಡಿಕೊಂಡಿದ್ದ ಲೈಮ್ ಮರದ ನೆರಳಿನಲ್ಲಿ (ಆಗಲೇ ದೀರ್ಘಛಾಯೆ ಚಾಚಿಕೊಂಡಿತ್ತು) ಪೆಟ್ಟಿಗೆಯ ಮೇಲೆ ಕುಳಿತುಕೊಂಡು ತೂಕಡಿಸುತ್ತಿದ್ದನು; ಬೆವರುತ್ತಿದ್ದ ಕುದುರೆಗಳ ಮೇಲೆ ಥಳಥಳಿಸುತ್ತಿದ್ದ ಮಶಕ ಪಂಕ್ತಿಯನ್ನು ಮೆಚ್ಚಿದನು; ಗಾಡಿಯವನನ್ನೆಬ್ಬಿಸಿದನು; ಒಳಗೆ ಜಿಗಿದನು; ಬ್ರಿಯಾನ್‌ಸ್ಕಿಯ ಮನೆಯ ಕಡೆಗೆ ಗಾಡಿ ಬಿಡುವಂತೆ ಆಜ್ಞಾಪಿಸಿದನು. ಅವರು ಸುಮಾರು ಐದು ಮೈಲಿ ದೂರ ಸಾಗಿದಾಗಲೇ ಅವನ ಪ್ರಜ್ಞಾ ಚೈತನ್ಯ ಸಾಕಷ್ಟು ಮರುಕೊಳಿಸಿದ್ದು; ಆಗವನು ಗಡಿಯಾರ ನೋಡಿಕೊಂಡನು; ಐದೂವರೆ ಗಂಟೆ ಕಳೆದಿತ್ತು; ತುಂಬ ತಡವಾಗಿತ್ತು.

ಆ ದಿನ ಹಲವು ಪಂದ್ಯಾಟಗಳು ನಡೆಯಬೇಕಿತ್ತು: ಮೊದಲು ಕುದುರೆ ಕಾವಲು ಪಡೆಯ ಜೂಜು; ಅನಂತರ ಅಧಿಕಾರಿಗಳ ಒಂದೂವರೆ ಮೈಲಿಯೋಟ; ಅದರ ಹಿಂದೆಯೇ ಮೂರು ಮೈಲಿ ಸ್ಪರ್ಧೆ; ಕೊನೆಗೆ ವ್ರಾಂಸ್ಕಿ ಭಾಗವಹಿಸಬೇಕಾಗಿದ್ದ ಪಂದ್ಯಾಟ. ಬ್ರಿಯಾನ್‌ಸ್ಕಿಯ ಮನೆಗೆ ಹೋಗುವುದಾದರೂ ಅವನು ತನ್ನ ಪಂದ್ಯಾಟಕ್ಕೆ ಸಕಾಲದಲ್ಲಿರಬಹುದಿತ್ತು. ಆದರೆ ಅವನು ಪಂದ್ಯಾಟದ ಸ್ಥಳ ತಲುಪುವ ಹೊತ್ತಿಗೆ ಇಡೀ ಶ್ರೀಪುರ್ಗಾರರ ಮಂಡಲಿ ನೆರೆದಿರುತ್ತಿತ್ತು. ಅದನವನಿಗೆ ಸರಿಯೆಂದು ತೋರಲಿಲ್ಲ. ಆದರೆ ತಾನು ಬರುವುದಾಗಿ ಅವನು ಬ್ರಿಯಾನ್‌ಸ್ಕಿಗೆ ಮಾತು ಕೊಟ್ಟಿದ್ದ; ಆದ್ದರಿಂದ ಅದೇ ದಾರಿಯಲ್ಲಿ ಮುಂದುವರಿಯುವಂತೆ, ಕುದುರೆಗಳನ್ನು ಚುರುಕುಗೊಳಿಸುವಂತೆ ಗಾಡಿಯವನಿಗೆ ಆಜ್ಞಾಪಿಸಿದನು.

ಅವನು ಬ್ರಿಯಾನ್‌ಸ್ಕಿ ಮನೆಯಲ್ಲಿ ಐದು ನಿಮಿಷವಿದ್ದು, ಹಿಂದಕ್ಕೆ ನಾಗಾಲೋಟದಲ್ಲಿ ಧಾವಿಸಿದನು. ಶೀಘ್ರಗತಿಯ ಸವಾರಿ ಅವನ ಮನಸ್ಸಿಗೆ ಸಮಾಧಾನ ವುಂಟುಮಾಡಿತು. ಅವನನ್ನು ಕಾಡುತ್ತಿದ್ದ ಅನ್ನಾಳ ಸಂಬಂಧದ ಬಗೆಗಿನ ಕುರಿತ ತೊಂದರೆಗಳು ಮತ್ತು ತಮ್ಮ ಮಾತುಕತೆಯ ತರುವಾಯ ಉದ್ಭವಿಸಿದ ತಮ್ಮ ಭವಿಷ್ಯದ ಬಗೆಗಿನ ಅನಿಶ್ಚಯತೆ—ಎಲ್ಲವೂ ಅವನ ಮನಸ್ಸಿನಿಂದ ಮಾಯವಾದುವು; ಅವನೀಗ ಬರಲಿರುವ ಪಂದ್ಯಾಟದ ಬಗ್ಗೆ ಮತ್ತು ತನ್ನ ಬರವು ತಡವಾಗಲಿಲ್ಲವೆನ್ನುವ ಬಗ್ಗೆ ಕಾತರತೆ ಹಾಗೂ ಔತ್ಸುಕ್ಯಗಳಿಂದ ಯೋಚನೆ ನಡಸಿದನು; ಆ ರಾತ್ರಿ ಅನ್ನಾಳೊಡನೆಯ ಭೇಟಿ ಕಾರ್ಯಕ್ರಮದ ಆನಂದಾತಿಶಯದ ನಿರೀಕ್ಷೆಯೂ ಆಗಾಗ್ಗೆ ಅವನ ಮನಸ್ಸಿನ ಮೂಲಕ ಹಾದುಹೋಗುತ್ತಿತ್ತು.

ಪಂದ್ಯಾಟದ ಮೈದಾನ ಹತ್ತಿರವಾದಂತೆಲ್ಲ, ಹಳ್ಳಿಗಾಡಿನಿಂದ ಹಾಗೂ ಸೇಂಟ್ ಪೀಟರ್ಸ್‌ಬರ್ಗ್‌ನಿಂದ ಬರುತ್ತಿದ್ದ ಗಾಡಿಗಳನ್ನು ದಾಟಿ ಮುಂದೆ ಹೋದಂತೆಲ್ಲ, ಮುಂಬರಲಿರುವ ಘಟನೆಯ ನಿರೀಕ್ಷೆ ತೀವ್ರವಾಗತೊಡಗಿತು.

ಅವನ ವಸತಿಗೃಹದಲ್ಲಿ ಯಾರೂ ಕಾಣಲಿಲ್ಲ; ಎಲ್ಲರೂ ಪಂದ್ಯಾಟದ ಮೈದಾನದಲ್ಲಿದ್ದರು; ಅವನ ಅಂಗಸೇವಕ ಅವನಿಗಾಗಿ ಅಗಸೆಯಲ್ಲಿ ಕಾಯುತ್ತಿದ್ದನು. ಎರಡನೆಯ ಪಂದ್ಯ ಶುರುವಾಗಿತ್ತೆಂದೂ, ಅವನನ್ನು ಕೇಳಿಕೊಂಡು ಹಲವು ಜನ ಬಂದಿದ್ದರೆಂದೂ, ಲಾಯದ ಹುಡುಗ ಎರಡು ಸಾರಿ ಬಂದಿದ್ದನೆಂದೂ, ಅವನು ಬಟ್ಟೆ ಹಾಕಿಕೊಳ್ಳುವಾಗ, ಅಂಗಸೇವಕ ಅವನಿಗೆ ತಿಳಿಸಿದನು.

ಅವನು ಸಾವಕಾಶವಾಗಿ ಬಟ್ಟೆ ಹಾಕಿಕೊಂಡನು (ಅವಸರವಸರವಾಗಿ ಕೆಲಸ ಮಾಡುವುದಾಗಲಿ, ಆತ್ಮ ಸಂಯಮವನ್ನು ಕಳೆದುಕೊಳ್ಳುವುದಾಗಲಿ ಅವನ ಜಾಯಮಾನಕ್ಕೊಗ್ಗುವಂಥದಲ್ಲ); ತನ್ನನ್ನು ಲಾಯಕ್ಕೊಯ್ಯುವಂತೆ ಚಾಲಕನಿಗೆ ಅಣತಿಯಿತ್ತನು. ಪಂದ್ಯಾಟದ ಮೈದಾನದ ಸುತ್ತ ಕಿಕ್ಕಿರಿದಿದ್ದ ವಾಹನಗಳ, ಸೈನಿಕರ, ಮತ್ತು ಪ್ರೇಕ್ಷಕರ ಹಾಗೂ ಕ್ರೀಡಾಮಂಟಪಗಳಲ್ಲಿ ನೆರೆದಿದ್ದ ಜನಜಂಗುಳಿಯ ಮಹಾಸಾಗರದ ದೃಶ್ಯವನ್ನವನು ಲಾಯಗಳಿಂದ ನೋಡಿದನು. ಲಾಯವನ್ನು ಪ್ರವೇಶಿಸಿದಾಗ ಗಂಟೆದನಿ ಕೇಳಿಸಲಾಗಿ, ಎರಡನೆಯ ಪಂದ್ಯ ಪ್ರಾರಂಭವಾಗಿದೆಯೆಂದವನು ಅರಿತುಕೊಂಡನು. ಲಾಯದ ಬಳಿ ಬರುತ್ತಿದ್ದಂತೆ ಅವನು ಮಖೋತಿನ್‌ನ ಬಳಿ ಕಾಲಿನ ಕೆಂಗಂದು ಬಣ್ಣದ ಮಲ್ಲಗುದುರೆಯನ್ನು ಸಂಧಿಸಿದನು; ನೀಲಿ ಬೆರೆತ ಕಿತ್ತಳೆ ಬಣ್ಣದ ಕುದುರೆ ಬಟ್ಟೆಯಿಂದಲಂಕರಿಸಿದ ಆ ವಾರುವವನ್ನು ಪಂದ್ಯಾಟದ ಮೈದಾನಕ್ಕೆ ಕರೆದೊಯ್ಯಲಾಗುತ್ತಿತ್ತು; ನೀಲಿಯಂಚಿನ ಅದರ ಕಿವಿಗಳು ತುಂಬ ದೊಡ್ಡವಾಗಿ ಕಾಣಿಸುತ್ತಿದ್ದುವು.

'ಕಾರ್ಡ್ F ಎಲ್ಲಿ?' ಎಂದವನು ಕಾಸ್ತಾರನನ್ನು ಕೇಳಿದನು.

'ಲಾಯದೊಳಗೆ; ಹಲ್ಲಣ ಹಾಕಲಾಗುತ್ತಿದೆ.'

ಗೊಂತು ತೆರೆದಿತ್ತು; ಫ್ರೂ-ಫ್ರೂಗೆ ಹಲ್ಲಣ ಹಾಕಲಾಗಿತ್ತು. ಅದನ್ನು ಹೊರಗೊಯ್ಯುವ ಸಮಯ ಬಂದಿತ್ತು.

'ನಾನೇನು ತಡವಾಗಲಿಲ್ಲ, ತಾನೆ?'

'ಸರಿ, ಸರಿ!' ಎಂದು ಆಂಗ್ಲ ನುಡಿದನು. 'ಎಲ್ಲ ಸರಿಯಾಗಿದೆ. ಶಾಂತಿಯಿಂದಿರುವುದೊಂದೆ ಮುಖ್ಯ.'

ದೇಹದ ಅಂಗಾಂಗಗಳೆಲ್ಲ ಅದುರುತ್ತಿದ್ದ, ತನ್ನ ಮೆಚ್ಚಿನ ಜಾತಿ ಕುದುರೆಯನ್ನು, ಸುಂದರ ಫ್ರೂ-ಫ್ರುವನ್ನು ವ್ರಾನ್ಸ್ಕಿ ಕೊಟ್ಟ ಕೊನೆಯ ಸಲ ನೋಡಿದನು. ಅದರಲ್ಲಿಯೇ ನಾಟಿದ್ದ ತನ್ನ ನೋಟವನ್ನು ಶ್ರಮದಿಂದ ಬಿಡಿಸಿಕೊಂಡು, ಲಾಯದಿಂದ ಹೊರಗೆ ಹೋದನು. ಯಾರ ಲಕ್ಷ್ಯಕ್ಕೂ ಬೀಳದಂತೆ ಒಳಗೆ ನುಸುಳಿಕೊಳ್ಳಬಹುದಾದ ಅನುಕೂಲ ಸಮಯದಲ್ಲವನು ಕ್ರೀಡಾಂಗಣವನ್ನು ತಲುಪಿದನು. ಒಂದೂವರೆ ಮೈಲಿಯ ಜೂಜು ಅಂತ್ಯಗೊಳ್ಳುವುದರಲ್ಲಿತ್ತು ; ಗೆಲ್ಲಂಬವನ್ನು ಮುಟ್ಟಲು ಶಕ್ತಿಮೀರಿ ತಮ್ಮ ಕುದುರೆಗಳನ್ನು ಚೋದಿಸುತ್ತಿದ್ದ ಮುನ್ನೆಲೆಯ ಅಶ್ವರಕ್ಷಕದಳದ ಸಿಪಾಯಿಯಲ್ಲಿ ಹಾಗೂ ಹಿನ್ನೆಲೆಯ ರಾವುತನಲ್ಲಿ ಎಲ್ಲ ಕಣ್ಣುಗಳು ನಾಟಿದ್ದುವು. ಕೇಂದ್ರ ಹಾಗೂ ವೃತ್ತದ ಅಂಚುಗಳಲ್ಲಿದ್ದ ಪ್ರೇಕ್ಷಕರು ಕಂಬದ ಸುತ್ತ ಕಿಕ್ಕಿರಿಯುತ್ತಿದ್ದರು ; ತಮ್ಮ ಮನುಷ್ಯ ಗೆಲ್ಲುತ್ತಾನೆಂಬ ಹರ್ಷಾಧಿಕ್ಯದಿಂದ ಅಶ್ವರಕ್ಷಕದಳದ ಗುಂಪು ಕೂಗುತ್ತಿತ್ತು. ಜೂಜು ಅಂತ್ಯವಾಯಿತೆಂದು ಗಂಟೆ ಘೋಷಿಸುತ್ತಿದ್ದಾಗ ವ್ರಾನ್ಸ್ಕಿ ಯಾರಿಗೂ ಕಾಣದಂತೆ ಒಳಗೆ ಪ್ರವೇಶಿಸಿದನು. ಮೊದಲು ಒಳಗೆ ಬಂದ ಉದ್ದನೆಯ ಕೆಸರಂಟಿದ ಉಡುಪಿನ ಅಶ್ವದಳದ ಕಾಪು ಬಂಟ ಹಲ್ಲಣದ ಮೇಲೆ ಬಾಗಿಕೊಂಡು, ಬೆವರಿನಿಂದ ಕರ್ರಗೆ ಕಾಣಿಸುತ್ತಿದ್ದ, ಏದುಸಿರು ಬಿಡುತ್ತಿದ್ದ ತನ್ನ ಬೂದು ಬಣ್ಣದ ಕುದುರೆಯ ಕಡಿವಾಣವನ್ನು ಸಡಿಲಗೊಳಿಸಿದನು.

ಕುದುರೆ ಶ್ರಮದಿಂದ ತನ್ನ ಕಾಲುಗಳನ್ನು ಬಿಗಿಗೊಳಿಸಿ ; ತನ್ನ ದೊಡ್ಡ ದೇಹದ ಶೀಘ್ರಗತಿಯನ್ನು ಮಂದಗೊಳಿಸಿತು ; ಅದರ ಸವಾರ ಸುತ್ತಲೂ ಕಣ್ಣು ಹಾಯಿಸಿ, ಅದೆ ತಾನೆ ಗಾಢ ನಿದ್ರೆಯಿಂದ ಎಚ್ಚರಗೊಳ್ಳುವವನಂತೆ ಮುಗುಳುನಗೆ ಸೂಸಲು ಪ್ರಯತ್ನಿಸಿದನು. ಅವನ ಗೆಳೆಯರೂ ಇತರರೂ ಅವನ ಸುತ್ತ ನೆರೆದರು.

ಕ್ರೀಡಾಮಂಟಪದ ಮುಂದೆ ಸೀಮಿತ ಸ್ವಾತಂತ್ರ್ಯದಿಂದ ಸಂಭಾಷಿಸುತ್ತ, ತಿರುಗಾಡುತ್ತಿದ್ದ ಉನ್ನತ ಸಮಾಜದ ವಿಶಿಷ್ಟ ಸಮೂಹದಿಂದ ವ್ರಾನ್ಸ್ಕಿ ಉದ್ದೇಶಪೂರ್ವಕವಾಗಿ ದೂರವಿದ್ದನು. ಅನ್ನಾ, ಬೆಟ್ಸಿ ಮತ್ತು ತನ್ನ ಅತ್ತಿಗೆಯರು ಆ ಗುಂಪಿನಲ್ಲಿದ್ದುದನ್ನವನು ಗಮನಿಸಿದನು. ತನ್ನ ಗಮನ ದಾರಿತಪ್ಪಬಹುದೆಂಬ ಬೆದರಿಕೆಯಿಂದ ಅವನು ಉದ್ದೇಶಪೂರ್ವಕವಾಗಿ ಅವರ ಗುಂಪನ್ನು ಸೇರಲಿಲ್ಲ. ಆದರೆ ಹಿಂದೆ ನಡೆದ ಪಂದ್ಯಗಳ ವಿವರ ನೀಡಲು ಹಾಗೂ ಅವನು ತಡವಾಗಿ ಬಂದಿದ್ದಕ್ಕೆ ಕಾರಣಗಳನ್ನು ವಿಚಾರಿಸಲು ಪರಿಚಿತರು ಮೇಲಿಂದ ಮೇಲೆ ಅವನಿಗೆದುರಾಗುತ್ತಿದ್ದರು.

ಬಹುಮಾನ ವಿತರಣೆಗಾಗಿ ಹಿಂದಿನ ಪಂದ್ಯದಲ್ಲಿ ಪಾಲ್ಗೊಂಡಿದ್ದವರನ್ನು ಕ್ರೀಡಾಮಂಟಪಕ್ಕೆ ಕರೆಯಲಾಯಿತು. ಆ ಸಮಾರಂಭವನ್ನು ನೋಡುವ ಸಲುವಾಗಿ ಜನರು ಆ ಜಾಗದಲ್ಲಿ ಜಮಾಯಿಸುತ್ತಿದ್ದಂತೆ ವ್ರಾನ್ಸ್ಕಿಯ ಅಣ್ಣ ಕರ್ನಲ್ ಅಲೆಕ್ಸಾಂಡರ್ ಅವನ ಬಳಿಗೆ ಬಂದನು. ಅವನು ಅಲಂಕಾರಯುತವಾದ ಭುಜಕೀರ್ತಿಗಳನ್ನು ಧರಿಸಿದ್ದನು. ವ್ರಾನ್ಸ್ಕಿಯಂತೆ ಅವನು ಮಧ್ಯಮಗಾತ್ರದ ಮೈಕಟ್ಟಿನ ಆಳು ; ಆದರವನು ವ್ರಾನ್ಸ್ಕಿಗಿಂತ ಸುಂದರನಾಗಿದ್ದನು, ಆರೋಗ್ಯವಂತನಾಗಿದ್ದನು, ತೇಜೋವಂತ

ನಾಗಿದ್ದನು; ಅವನ ಮೂಗು ಕೆಂಪಗಿತ್ತು; ಮುಖ ಕುಡಿತದ ಲಕ್ಷಣವನ್ನು ಪ್ರದರ್ಶಿಸಿತ್ತು.

'ನನ್ನ ಚೀಟಿ ಸಿಕ್ಕಿತೆ?' ಎಂದವನು ಪ್ರಶ್ನಿಸಿದನು. 'ನಿನ್ನನ್ನು ಕಾಣುವುದೆ ಕಷ್ಟವಾಗಿದೆ.'

ಅಲೆಕ್ಸಾಂಡರ್ ವ್ರಾಂಸ್ಕಿ ವಿಷಯಲಂಪಟನಾದರೂ, ಭಾರಿ ಕುಡುಕನೆಂದು ಪ್ರಸಿದ್ಧಿ ಹೊಂದಿದ್ದರೂ, ಮರ್ಯಾದಸ್ಥ ಆಸ್ಥಾನಿಕನಂತೆ ವರ್ತಿಸುತ್ತಿದ್ದನು.

ತನಗಿಷ್ಟವಿಲ್ಲದ ವಿಷಯವನ್ನು ಕುರಿತಂತೆ ತನ್ನಣ್ಣನ ಬಳಿಯಾಗ ಮಾತಾಡಬೇಕಾಗಿ, ಬಹುಜನರ ಕಣ್ಣುಗಳು ತನ್ನಲ್ಲಿಯೇ ನಾಟಿದ್ದುದನ್ನರಿತು, ಕ್ಷುಲ್ಲಕವಾದ ವಿಷಯದ ಬಗ್ಗೆ ತನ್ನಣ್ಣನೊಡನೆ ತಮಾಷೆ ಮಾಡುತ್ತಿದ್ದನೆಂಬಂತೆ ತೋರಿಸಿಕೊಳ್ಳುವ ಸಲುವಾಗಿ ಮಂದಹಾಸದ ಮುಖಚರ್ಯೆಯನ್ನವನು ಪ್ರದರ್ಶಿಸುತ್ತಿದ್ದನು.

'ನನಗದು ಸಿಕ್ಕಿತು. ನೀನು ಯಾವ ವಿಷಯದಲ್ಲಿ ತಲೆ ಕೆಡಿಸಿಕೊಳ್ಳುತ್ತಿದ್ದೀಯೊ ನಿಜಕ್ಕೂ ನನಗರ್ಥವಾಗಲಿಲ್ಲ' ಎಂದು ವ್ರಾಂಸ್ಕಿ ನುಡಿದನು.

'ನೀನಿಲ್ಲಿರಲಿಲ್ಲವೆಂದೂ, ಸೋಮವಾರ ನೀನು ಪೀಟರ್‌ಹಾಫ್‌ನಲ್ಲಿ ಕಾಣಿಸಿಕೊಂಡೆಯೆಂದೂ ತಿಳಿದದ್ದರಿಂದ ನನಗೆ ಚಿಂತೆಯಾಯಿತು.'

'ಎಲ್ಲವನ್ನು ಎಲ್ಲರ ಹತ್ತಿರ ಚರ್ಚಿಸಲಾಗದು. ಆಯಾಯ ವಿಷಯಗಳಲ್ಲಿ ನೇರವಾಗಿ ಸಂಬಂಧ ಹೊಂದಿದವರ ಬಳಿ ಮಾತ್ರ ಮಾತಾಡಬೇಕಾಗುತ್ತದೆ. ನೀನು ಹೇಳುತ್ತಿರುವ ವಿಷಯ ಅಂಥವುಗಳಲ್ಲೊಂದು.'

'ಹೌದೆ? ಹಾಗಾದರೆ ಅಂಥವರು ಸೈನ್ಯದ ಸೇವೆಯಲ್ಲಿರಬಾರದು....'

'ನೀನು ಮಧ್ಯೆ ಪ್ರವೇಶಿಸಬಾರದೆಂಬುದೇ ನನ್ನ ಪ್ರಾರ್ಥನೆ' ಎಂದು ಹೇಳುವಾಗ ವ್ರಾಂಸ್ಕಿಯ ಸಿಡುಕುಮೋರೆ ಬಿಳಿಚಿಕೊಂಡಿತು, ಅವನ ಚಾಚಿಕೊಂಡಿದ್ದ ಕೆಳದವಡೆ ನಡುಗಲಾರಂಭಿಸಿತು. ಅಂಥ ನಡುಕವೆಂದೂ ಅವನಲ್ಲಿ ಕಾಣಿಸಿಕೊಂಡದ್ದಿಲ್ಲ. ಸಹಜ ದಯಾರ್ದ್ರ ಹೃದಯನಾದ ಅವನು ಸಾಮಾನ್ಯವಾಗಿ ಕೋಪಗೊಂಡದ್ದೇ ಇಲ್ಲ. ಆದರವನು ಕುಪಿತಗೊಂಡು, ಅವನಗಲ್ಲ ಕಂಪಿಸಲಾರಂಭಿಸಿದಾಗ, ಅವನು ಅಪಾಯಕಾರಿಯಾಗಿ ವರ್ತಿಸುತ್ತಿದ್ದನು. ಆ ವಿಷಯ ಅವನಣ್ಣನಿಗೆ ಗೊತ್ತಿತ್ತು. ಅಲೆಕ್ಸಾಂಡರ್ ಉಲ್ಲಾಸದಿಂದ ಮುಗುಳುನಗೆ ಸೂಚಿದನು.

'ತಾಯಿಯ ಪತ್ರವನ್ನು ನಿನಗೆ ತಲುಪಿಸಬೇಕಾಗಿತ್ತು. ಅದಕ್ಕೆ ಉತ್ತರ ಬರೆ. ಮುಂದೆ ಪಂದ್ಯಾಟವಿರುವಾಗ ಉದ್ರೇಕಗೊಳ್ಳಬೇಡ. ನಿನಗೆ ಶುಭವಾಗಲಿ' ಎಂದವನು ನಸುನಗುತ್ತ ಹೊರಟು ಹೋದನು.

ಮತ್ತೊಂದು ಚಣದಲ್ಲಿ ಇನ್ನೊಬ್ಬ ಗೆಳೆಯ ಶುಭ ಹೇಳಿ ವ್ರಾಂಸ್ಕಿಯನ್ನು ತಡೆದು ನಿಲ್ಲಿಸಿದನು.

'ಗೆಳೆಯರನ್ನು ಗುರುತಿಸುವುದು ನಿನಗಿಷ್ಟವಿದ್ದಂತೆ ತೋರದು. ಹೇಗಿದ್ದೀಯೆ, ಮಿತ್ರ?' ಎಂದು ಆಬ್ಲಾನ್‌ಸ್ಕಿ ಪ್ರಶ್ನಿಸಿದನು. ಅವನ ಮುಖ ಮಿರುಗುತ್ತಿತ್ತು; ಅವನ ಕೆನ್ನೆಗೂದಲು ಮಿಣಮಿಣನೆ ಮಿಂಚುತ್ತಿತ್ತು; ಮಾಸ್ಕೋದಲ್ಲಿದ್ದಂತೆ ಪೀಟರ್ಸ್‌ಬರ್ಗ್ ಸಮಾಜದಲ್ಲಿಯೂ ಅವನು ಅತ್ಯಂತ ದೇದೀಪ್ಯಮಾನನಾದ ವ್ಯಕ್ತಿಯಾಗಿ ಕಾಣು

ತ್ತಿದ್ದನು. 'ನಾನಿಲ್ಲಿಗೆ ನಿನ್ನೆ ತಾನೆ ಬಂದೆ. ನಿನ್ನ ವಿಜಯ ಸಂರಂಭವನ್ನು ನೋಡಲು ನನಗೆ ಸಂತೋಷವಾಗುತ್ತದೆ. ಮತ್ತೆ ಯಾವಾಗ ನಿನ್ನನ್ನು ನೋಡಲಿ?'

'ನಾಳೆ ನನ್ನ ವಸತಿಗೆ ಬಾ' ಎಂದು ವ್ರಾಂಸ್ಕಿ ನುಡಿದನು. ಕ್ಷಮಾಯಾಚನೆಯೊಂದಿಗೆ ತನ್ನ ಗೆಳೆಯನ ತೋಳನ್ನು ಸ್ನೇಹ ಪೂರ್ವಕವಾಗಿ ಮರ್ದಿಸುತ್ತ ಅವನು ಪಂದ್ಯಾಟಕ್ಕೆ ಮೊದಲೇ ಕುದುರೆಗಳು ಜಮಾಯಿಸಿದ್ದ ಮೈದಾನದ ನಡುವೆಗೆ ಹೋದನು.

ಅದೆ ತಾನೆ ಓಟ ಮುಗಿಸಿ, ಬೆವರುಸುರಿಸುತ್ತಿದ್ದ ಆಯಾಸಗೊಂಡಿದ್ದ ಕುದುರೆಗಳನ್ನು ಕಾಸ್ತಾರರೊಯ್ಯುತ್ತಿದ್ದರು. ಮುಂದಿನ ಪಂದ್ಯಕ್ಕಾಗಿ ಹೊಸ ಕುದುರೆಗಳು ಒಂದಾದ ಮೇಲೊಂದು ಕಾಣಿಸಿಕೊಳ್ಳುತ್ತಿದ್ದುವು; ಹೆಚ್ಚುಕಡಮೆ ಅವೆಲ್ಲವೂ ಇಂಗ್ಲಿಷ್ ತಳಿಗಳು. ತಮ್ಮ ಹೆಡೆಯುಡಿಗೆಗಳಿಂದ, ಹತ್ತಿಕೊಂಡಂತಿದ್ದ ಹೊಟ್ಟೆಗಳಿಂದ ಅವು ವಿಚಿತ್ರವೂ ಬೃಹದಾಕಾರದವೂ ಆದ ಹಕ್ಕಿಗಳಂತೆ ಕಾಣುತ್ತಿದ್ದುವು. ಲಂಘಕಗಳಿಂದ ಪುಟಿಪದಂತೆ ತನ್ನ ಉದ್ದನೆಯ ಹಿಗ್ಗುಗುಣದ ಕಣಕಾಲುಗಳನ್ನೆಗರಿಸುತ್ತ ಬರುತ್ತಿದ್ದ ಕೃಶಗಾತ್ರದ, ಸುಂದರ ವಾಜಿಯನ್ನು ಸಾಹಣಿ ಬಲಗಡೆಯಲ್ಲಿ ನಡಸುತ್ತಿದ್ದನು. ಅನತಿ ದೂರದಲ್ಲಿದ್ದ ಉದ್ದಗಿವಿಯ ಮಲ್ಲಗುದುರೆಯ ಗವಸನ್ನು ಕೆಲವರು ತೆಗೆಯುತ್ತಿದ್ದರು. ಗೊರಸಿನ ಮೇಲ್ಭಾಗದಲ್ಲಿ ಇಣುಕುತ್ತಿದ್ದ ಗುಜ್ಜು ಕಣಗಾಲಿನ, ಮಾಟದ ಕಿರ್ರೆಗಳ, ಸುಂದರ ಮೈಕಟ್ಟಿನ, ಬೃಹದಾಕೃತಿಯ ವಾಜಿಯನ್ನು ವ್ರಾಂಸ್ಕಿ ತನಗರಿವಿಲ್ಲದಂತೆಯೆ ನಿಟ್ಟಿಸುತ್ತಿದ್ದನು. ತನ್ನ ಕುದುರೆಯ ಬಳಿಗೆ ಹೋಗಬೇಕೆನ್ನುವಷ್ಟರಲ್ಲಿ ಪರಿಚಿತ ವ್ಯಕ್ತಿಯೊಬ್ಬ ಮತ್ತೆ ಅವನನ್ನು ತಡೆದು ನಿಲ್ಲಿಸಿದನು; ಕೆಲವು ಮಾತು ವಿನಿಮಯಿಸಿಕೊಂಡರು.

'ಅಗೋ, ಕರೆನಿನ್ ಅಲ್ಲಿದ್ದಾರೆ' ಎಂದು ಪರಿಚಿತ ವ್ಯಕ್ತಿ ನುಡಿದನು. ಅವರು ತಮ್ಮ ಮಡದಿಯನ್ನು ಹುಡುಕುತ್ತಿದ್ದಾರೆ; ಆಕೆ ಕ್ರೀಡಾಮಂಟಪದೊಳಗಿದ್ದಾಳೆ. ಅವಳನ್ನು ನೋಡಿದಿರೇನು?'

'ಇಲ್ಲ, ನಾನು ನೋಡಿಲ್ಲ' ಎಂದು ವ್ರಾಂಸ್ಕಿ ಉತ್ತರಿಸಿ, ಅನ್ನಾ ಇದ್ದಳೆನ್ನಲಾದ ಕ್ರೀಡಾಮಂಟಪದ ಕಡೆಗೆ ಕಂಡು ಕಾಣದಂತೆ ಕಡೆಗಣ್ಣೋಟ ಬೀರಿ, ತನ್ನ ಕುದುರೆಯ ಬಳಿಗೆ ಹೋದನು.

ಅವನು ಹಲ್ಲಣವನ್ನು ತನಿಖಿಸಿ, ಕೆಲವು ಸಲಹೆಗಳನ್ನು ನೀಡಬೇಕಿತ್ತು: ಆದರೆ ಸಮಯವಿರಲಿಲ್ಲ. ಸವಾರರನ್ನು ಕ್ರೀಡಾಮಂಟಪಕ್ಕೆ ಕರಸಲಾಯಿತು, ಅಲ್ಲವರು ತಮ್ಮ ಸಂಖ್ಯೆಗಳನ್ನು ಪಡೆದನಂತರ ತಂತಮ್ಮ ಸ್ಥಳಗಳಿಗೆ ಹೋಗಬೇಕಾಗಿತ್ತು. ಕಾಂತಿಹೀನ ಗಂಭೀರವದನದ ಹದಿನೇಳುಮಂದಿ ಅಧಿಕಾರಿಗಳು ಕ್ರೀಡಾಮಂಟಪದಲ್ಲಿ ನೆರೆದು, ತಂತಮ್ಮ ಸಂಖ್ಯೆಗಳನ್ನು ಪಡೆದರು. ಏಳು ವ್ರಾಂಸ್ಕಿಯ ಸಂಖ್ಯೆಯಾಗಿತ್ತು. 'ಹತ್ತಿ' ಎಂದು ಆಜ್ಞೆ ನೀಡಲಾಯಿತು.

ತಾನು ಮತ್ತು ಇತರ ಸವಾರರು ಎಲ್ಲ ಕಣ್ಣುಗಳ ಆಕರ್ಷಕ ಬಿಂದುವಾಗಿದ್ದುದರ ಅರಿವಿನಿಂದ ವ್ರಾಂಸ್ಕಿ ಸೋದ್ವಿಗ್ನನಾಗಿ ತನ್ನ ಕುದುರೆಯ ಬಳಿಗೆ ಹೋದನು; ಉದ್ವೇಗ ಸ್ಥಿತಿಯಲ್ಲವನು ಯಾವಾಗಲೂ ನಿದಾನವಾಗಿ ಎಚ್ಚರಿಕೆಯಿಂದ ಚಲಿಸುತ್ತಿದ್ದನು.

ಸನ್ನಿವೇಶಕ್ಕನುಗುಣವಾಗಿ ಕಾರ್ಡ್ ವಸ್ತ್ರ ಧರಿಸಿದ್ದನು: ಅವನ ತಲೆಯ ಮೇಲೆ ಗುಂಡ ನೆಯ ಕಪ್ಪು ಟೋಪಿಯಿತ್ತು; ಕಾಲಿನಲ್ಲಿ ಎತ್ತರದ ಬೂಟುಗಳಿದ್ದುವು; ಕಪ್ಪು ಕೋಟಿಗೆ ಗುಂಡಿಹಾಕಲಾಗಿತ್ತು; ಗಂಜಿಹಾಕಿ, ಸೆಡೆತುಕೊಂಡಿದ್ದ ಬಿಳಿಯ ಕೊರಳ ಪಟ್ಟಿ ಅವನ ಕೆನ್ನೆಗಳನ್ನು ಮೇಲೆತ್ತಿಕೊಳ್ಳುತ್ತಿದ್ದುವು. ಎಂದಿನಂತೆ ಅವನು ಕಡಿವಾಣ ಹಿಡಿದುಕೊಂಡು ಕುದುರೆಯ ಮುಂದೆ ನಿಂತಾಗ ಪ್ರಸನ್ನತೆಯಿಂದಿದ್ದನು. ಜ್ವರದಿಂದಲೆಂಬಂತೆ ಫ್ರೂ–ಫ್ರೂ ಇನ್ನೂ ನಡುಗುತ್ತಿತ್ತು. ವ್ರಾಂಸ್ಕಿ ಸಮೀಪಿಸಿದಾಗ, ಅದು ತನ್ನ ಬೆಂಕಿ ಕಣ್ಣನ್ನು ಅವನ ಕಡೆಗೆ ಹೊರಳಿಸಿತು. ಕಾಟೆರದ ತೊಗಲುಪಟ್ಟಿಯ ಕೆಳಗೆ ಅವನು ತನ್ನ ಬೆರಳನ್ನು ನುಗ್ಗಿಸಿದನು. ಕುದುರೆ ಮತ್ತಷ್ಟು ಕಿಡಿಕಾರುತ್ತ ಕಣ್ಣು ಹೊರಳಿಸಿತ್ತು; ಹಲ್ಲುಗಿಂಜಿತು; ಒಂದು ಕಿವಿಯನ್ನು ಜಗ್ಗಿತು. ವ್ರಾಂಸ್ಕಿ ಹಲ್ಲಣವನ್ನು ತನಿಖಿಸಿದ ರೀತಿಯನ್ನು ಕಂಡು ನಸುನಗುವಂತೆ ಆಂಗ್ಲ ತನ್ನ ತುಟಿಗಳನ್ನು ಸಂಕುಚಿಸಿದನು.

'ಅದರ ಮೇಲೇರಿ. ನಿಮಗಷ್ಟು ಉದ್ವೇಗವಾಗುವುದಿಲ್ಲ.'

ವ್ರಾಂಸ್ಕಿ ತನ್ನ ಪ್ರತಿ ಸ್ಪರ್ಧಿಗಳ ಕಡೆಗೊಮ್ಮೆ ಕೊನೆಯ ನೋಟ ಬೀರಿದನು. ಪಂದ್ಯಾಟ ಪ್ರಾರಂಭವಾದನಂತರ ತಾನವರನ್ನು ನೋಡುವುದಿಲ್ಲವೆಂದವನು ತಿಳಿದಿದ್ದನು. ಅವರಲ್ಲಿಬ್ಬರು ಆ ವೊದಲೇ ಉಪಕ್ರಮಸ್ಥಾನದಲ್ಲಿದ್ದರು. ಅವನ ಶ್ರೇಷ್ಠ ಮಿತ್ರನೂ ಭಯಂಕರ ಪ್ರತಿಸ್ಪರ್ಧಿಗಳಲ್ಲೊಬ್ಬನೂ ಆದ ಗಲ್ಟ್‌ಸಿನ್ ಮೇಲೇರಲವಕಾಶ ಕೊಡದಿದ್ದ ಕಪಿಲವರ್ಣದ ಕುದುರೆಯ ಸುತ್ತ ಓಡಾಡುತ್ತಿದ್ದನು. ಬಿಗಿಯಾದ ಸವಾರಿಷರಾಯಿ ಯನ್ನು ಧರಿಸಿದ್ದ ರಾಹುತದಳದ ಸಣ್ಣ ಸೈನಿಕನೊಬ್ಬ ಆಂಗ್ಲ ಜಾಕಿಗಳ ರೀತಿಯಲ್ಲಿ ತನ್ನ ಕುದುರೆಯ ಪೃಷ್ಠಭಾಗದಲ್ಲಿ ಬೆಕ್ಕಿನಂತೆ ಮುದುಡಿಕೊಂಡು ವೇಗವಾಗಿ ದೌಡಾಯಿಸುತ್ತಿದ್ದನು. ಗ್ರಬೋವ್ ಅಶ್ವಪಾಲನ ಕ್ಷೇತ್ರದಿಂದ ತಂದಿದ್ದ ಬಿಳಿಮೊಗದ ಉತ್ತಮ ತಳಿಯ ಕುದುರೆಯ ಮೇಲೆ ರಾಜಕುಮಾರ ಕುಜೊವ್‌ಲೆವ್ ಕುಳಿತಿದ್ದನು; ಆಂಗ್ಲ ಸಾಹಣಿ ಅದರ ಕಡಿವಾಣ ಹಿಡಿದುಕೊಂಡು ಮುನ್ನಡಸುತ್ತಿದ್ದನು. ಕುಜೊವ್‌ಲೆವ್ ಅಂಜುಕುಳಿಯೆಂದು, ಬಹುಗರ್ವಿಯೆಂದು ವ್ರಾಂಸ್ಕಿ ಮತ್ತು ಅವನ ಎಲ್ಲ ಗೆಳೆಯರು ಬಲ್ಲವರಾಗಿದ್ದರು. ಚೈತನ್ಯಶಾಲಿವಾಜಿಯನ್ನೇರಿ ಸವಾರಿಮಾಡುವುದಕ್ಕೂ ಅವನು ಹೆದರುತ್ತಿದ್ದನು. ಪಂದ್ಯಾಟ ಅಪಾಯಕಾರಿಯಾದದ್ದರಿಂದ, ಅನೇಕರು ಮೂಳೆಮುರಿದು ಕೊಂಡಿದ್ದುದರಿಂದ, ಒಬ್ಬ ವೈದ್ಯ, ಒಬ್ಬಳು ದಾದಿ ಮತ್ತು ಕೆಂಪುಕ್ರೂಸೆಯಿದ್ದ ಆಸ್ಪತ್ರೆ ಬಂಡಿಯನ್ನು ಇತ್ತೀಚೆಗೆ ಪ್ರತಿಯೊಂದು ಅಪಾಯಕಾರಿ ಸ್ಥಾನದಲ್ಲಿಯೂ ಇರಿಸಲಾಗಿತ್ತು. ಹೀಗಾಗಿ ಅವನು ಪಂದ್ಯಾಟದಲ್ಲಿ ಭಾಗವಹಿಸಲು ನಿಶ್ಚಯಿಸಿದ್ದನು. ಅವರ ಕಣ್ಣು ಸಂಧಿಸಿದುವು; ವ್ರಾಂಸ್ಕಿ ಅವನ ಕಡೆಗೆ ಪ್ರೀತಿಯಿಂದ ಹಾಗೂ ಮೆಚ್ಚುಗೆಯಿಂದ ಕಣ್ಣು ಮಿಟುಕಿಸಿದನು. ತನ್ನ ಪ್ರಮುಖ ಪ್ರತಿಸ್ಪರ್ಧಿ ಮಲ್ಲಕುದುರೆಯ ಮಖೊತಿನ್‌ನನ್ನು ಕಂಡರೆ ಮಾತ್ರ ವ್ರಾಂಸ್ಕಿಗಾಗುತ್ತಿರಲಿಲ್ಲ.

'ಅವಸರಿಸಬೇಡ' ಎಂದು ಕಾರ್ಡ್ ವ್ರಾಂಸ್ಕಿಯನ್ನೆಚ್ಚರಿಸಿದನು. 'ಒಂದು ವಿಷಯ ನಿನ್ನ ನೆನಪಿನಲ್ಲಿರಲಿ: ಅಡಚಣೆ ಅಡ್ಡಿಯಾದಾಗ ಅದನ್ನು ತಡೆದುನಿಲ್ಲಿಸಬೇಡ; ಅದನ್ನು ಚೋದಿಸುವುದೂ ಬೇಡ. ತನಗಿಷ್ಟಬಂದಂತೆ ಅದು ಹೋಗಲಿ.'

'ಆಗಲಿ, ಆಗಲಿ' ಎಂದು ವ್ರಾಂಸ್ಕಿ ಕಡಿವಾಣ ಹಿಡಿದುಕೊಂಡನು.

'ಸಾಧ್ಯವಾದರೆ ಅಗ್ರಸ್ಥಾನ ಬಿಡಬೇಡ, ಹಿಂದೆ ಬಿದ್ದದ್ದಾದರೆ ಕೊನೆಯ ತನಕ ಪ್ರಯತ್ನ ಬಿಡಬೇಡ.'

ಕುದುರೆ ಮುನ್ನಡಿಯಿಡುವ ಮೊದಲೇ ವ್ರಾನ್ಸ್ಕಿ ಶೀಘ್ರಗತಿಯ ಹುರುಪಿನ ಚಲನೆಯಿಂದ ಉಕ್ಕುಹಲ್ಲುಗಳ ರಿಕಾಪಿನೊಳಗೆ ತನ್ನ ಪಾದವನ್ನು ತೂರಿದನು; ಕಿರುಗುಡುತ್ತಿದ್ದ ಚರ್ಮದ ಕಾಟಿರದೊಳಗೆ ಮಜಬೂತಾದ ತನ್ನ ದೇಹವನ್ನು ಭದ್ರವಾಗಿ ನೆಲೆಗೊಳಿಸಿದನು. ವ್ರಾನ್ಸ್ಕಿ ತನ್ನ ಬಲಪಾದವನ್ನು ರಿಕಾಪಿನಲ್ಲಿರಿಸಿ, ರೂಢಿಯಂತೆ ತನ್ನ ಬೆರಳುಗಳಿಂದ ಲಗಾಮುಗಳನ್ನು ಸರಿಗೊಳಿಸಿದಾಗ, ಮುಂದೆ ಚಲಿಸುವಂತೆ ಕಾರ್ಡ್ ಸೂಚಿಸಿದನು. ಮೊದಲು ಯಾವ ಕಾಲಿಡಬೇಕೆಂಬುದರ ಬಗ್ಗೆ ಅನಿಶ್ಚಯತೆಯಿಂದಿದ್ದಂತೆ, ಫ್ರೂ-ಫ್ರೂ ತನ್ನ ಉದ್ದನೆಯ ಕೊರಳನ್ನು ಚಾಚಿ ಲಗಾಮನ್ನು ಜಗ್ಗಿತು; ಅನಂತರ ಲಂಘಕಗಳ ಮೇಲಿದ್ದಂತೆ ಬೆನ್ನಮೇಲಿದ್ದ ಸವಾರನನ್ನು ಅಕ್ಕಪಕ್ಕಗಳಿಗೆ ತೂನೆದಾಡಿಸುತ್ತ ಚಲಿಸಿತು. ಕಾರ್ಡ್ ವೇಗವಾಗಿ ಹೆಜ್ಜೆಯಿಡುತ್ತ ಅದರ ಪಕ್ಕದಲ್ಲಿ ನಡೆದನು. ಉದ್ರಿಕ್ತವಾಜಿ ಒಂದು ಪಕ್ಕಕ್ಕೊಮ್ಮೆ, ಮತ್ತೊಂದು ಪಕ್ಕಕ್ಕೆ ಮತ್ತೊಮ್ಮೆ, ಲಗಾಮನ್ನೆಳೆಯುತ್ತ, ಸವಾರನನ್ನು ಜಗ್ಗಿಸುತ್ತ, ಅವನಿಂದ ಮುಕ್ತಗೊಳ್ಳಲು ಪ್ರಯತ್ನಿಸುತ್ತಿತ್ತು. ಕೈಚಳಕದನಿಗಳ ಮೂಲಕ ಅದನ್ನೊಲಿಸಿಕೊಳ್ಳಲು ವ್ರಾನ್ಸ್ಕಿ ನಡಸಿದ ಪ್ರಯತ್ನ ಸಫಲಗೊಳ್ಳಲಿಲ್ಲ.

ಉಪಕ್ರಮ ಬಿಂದುವಿನ ಬಳಿಯಿದ್ದ ಅಣೆಕಟ್ಟೆಯನ್ನವರು ಬೇಗ ತಲುಪಿದರು. ಕೆಲವು ಸ್ಪರ್ಧಿಗಳು ಮುಂದಿದ್ದರೆ, ಕೆಲವರು ಹಿಂದಿದ್ದರು. ತನ್ನ ಹಿಂದೆ ರಸ್ತೆಯ ಕೆಸರಿನಲ್ಲಿ ನಾಗಾಲೋಟದಿಂದ ಬರುತ್ತಿದ್ದ ಕುದುರೆಯ ಸಪ್ಪಳವನ್ನು ವ್ರಾನ್ಸ್ಕಿ ಇದ್ದಕ್ಕಿದ್ದಂತೆ ಕೇಳಿಸಿಕೊಂಡನು. ಬಿಳಿಯ ಕಣಕಾಲಿನ, ಉದ್ದಗಿವಿಯ ಮಲ್ಲಕುದುರೆಯ ಮೇಲೆ ಮಖೊತಿನ್ ವೇಗವಾಗಿ ನುಗ್ಗಿದನು. ತನ್ನ ಉದ್ದನೆಯ ಹಲ್ಲುಗಳನ್ನು ಕಿರಿಯುತ್ತ ಮಖೊತಿನ್ ಮುಗುಳುನಗೆ ಚೆಲ್ಲಿದನು. ಆದರೆ ವ್ರಾನ್ಸ್ಕಿ ಅವನ ಕಡೆಗೆ ಬಿರುನೋಟ ಬೀರಿದನು. ಅವನನ್ನು ಕಂಡರೆ ವ್ರಾನ್ಸ್ಕಿಗಾಗುತ್ತಿರಲಿಲ್ಲ; ಅವನೀಗ ತನ್ನ ಭಯಂಕರ ಸ್ಪರ್ಧಿಯಾಗಿದ್ದುದರಿಂದ ಮಖೊತಿನ್‌ನ ಬಗೆಗಿನ ಅಸಮಾಧಾನ ತೀವ್ರವಾಗಿತ್ತು. ತನ್ನ ಕುದುರೆಯನ್ನು ರೇಗಿಸಿ, ಮುಂದೆ ದೌಡಾಯಿಸಿದುದರಿಂದ ಅವನು ಕೋಪದ ಕೆಂಡವಾದನು. ಫ್ರೂ-ಫ್ರೂ ನಾಗಾಲೋಟ ಎತ್ತಲು ತನ್ನ ಎಡಗಾಲನ್ನು ಮುಂದೆ ಚಾಚಿತು, ಎರಡು ಹಾರು ಜಿಗಿಯಿತು; ಭದ್ರವಾಗಿ ಹಿಡಿದಿದ್ದ ಲಗಾಮನ್ನು ಜಗ್ಗಿತು; ಕೋಪೋದ್ರಿಕ್ತತೆಯಿಂದ ಕುಲುಕೋಟ ತೆಗೆದು, ಹಲ್ಲಣದಲ್ಲಿ ಸವಾರನನ್ನು ಮೇಲಕ್ಕೂ ಕೆಳಕ್ಕೂ ಕುಕ್ಕಿತು. ಕುಲುಕೋಟದಲ್ಲಿಯೇ ಅದನ್ನು ಹಿಂಬಾಲಿಸುತ್ತಿದ್ದ ಕಾರ್ಡ್ ಸಿಡುಕುಗುಳಿಯಾದನು.

೨೫

ಪಂದ್ಯಾಟದಲ್ಲಿ ಹದಿನೇಳು ಮಂದಿ ಅಧಿಕಾರಿಗಳು ಪಾಲ್ಗೊಂಡಿದ್ದರು. ಕ್ರೀಡಾ ಮಂಟಪದ ಮುಂಭಾಗದಲ್ಲಿದ್ದ ಮೂರು ಮೈಲಿ ಉದ್ದದ ಅಂಡಾಕಾರದ ವೃತ್ತವೇ ಪಂದ್ಯಾಟದ ಪ್ರದೇಶವಾಗಿತ್ತು. ಆ ಪ್ರದೇಶದುದ್ದಕ್ಕೂ ಒಂಬತ್ತು ತಡೆಗಳನ್ನೊಡ್ಡಲಾಗಿತ್ತು; ಒಂದು ಹೊಳೆ, ಕ್ರೀಡಾಮಂಟಪದ ಮುಂದೆ ಐದು ಅಡಿ ಎತ್ತರದ ಗೋಡೆ, ಒಣಗಿದ ಕಂದಕ, ನೀರು ತುಂಬಿದ ಕಂದಕ, ಒಂದು ಗುಡ್ಡೆ, ಐರ್ಲೆಂಡ್ ಮಾದರಿಯ

ಒಂದು ಆಸ್ವೇರಿ (ಅತ್ಯಂತ ಕಷ್ಟಕರವಾದ ಅಡ್ಡಗಟ್ಟೆಯದು. ಪೊದೆ ಬೇಲಿ ಸುತ್ತು ವರಿದಿದ್ದ ದಿಣ್ಣೆಯದು. ಅದರಾಚೆಗೊಂದು ಕಂದಕವಿತ್ತು; ಅದು ಕುದುರೆಗಳಿಗೆ ಕಾಣಿಸುತ್ತಿರಲಿಲ್ಲ; ಒಂದೇ ಜಿಗಿತದಲ್ಲಿ ದಿಣ್ಣೆ ಕಂದಕಗಳನ್ನು ಹಾರದಿದ್ದ ಕುದುರೆ ಸಾವಪ್ಪಿಕೊಳ್ಳಬೇಕಾಗಿತ್ತು); ಅನಂತರ ನೀರು ತುಂಬಿದ ಎರಡು ಕಂದಕಗಳು ಮತ್ತು ಒಂದು ಒಣಕಂದಕ. ಕ್ರೀಡಾಮಂಟಪದ ಮುಂದೆ ಪಂದ್ಯಾಟ ಮುಕ್ತಾಯಗೊಳ್ಳು ತ್ತಿತ್ತು. ಆದರೆ ಪಂದ್ಯ ವೃತ್ತದಿಂದಾಚೆ ಇನ್ನೂರು ಗಜಗಳ ದೂರದಲ್ಲಿ ಶುರುವಾಗು ತ್ತಿತ್ತು. ಮೊದಲನೆಯ ತಡೆ ಎದುರಾಗುತ್ತಿದ್ದುದೇ ಅಲ್ಲ; ಏಳಡಿ ಅಗಲದ ಪ್ರವಾಹ ವನ್ನು ಸವಾರರು ನೆಗೆಯಬೇಕಾಗಿತ್ತು; ಇಲ್ಲವೆ ಅದರ ಮೂಲಕ ಹಾದುಹೋಗ ಬೇಕಾಗಿತ್ತು; ಈ ಎರಡರಲ್ಲಿ ಯಾವುದನ್ನಾದರೂ ಅವರು ಆರಿಸಿಕೊಳ್ಳಬಹುದಿತ್ತು.

ಸ್ಪರ್ಧಿಗಳು ಹೊರಡಲು ಸಿದ್ಧರಾಗಿ ಮೂರು ಸಲ ಸಾಲಾಗಿ ನಿಂತರು. ಪ್ರತಿ ಸಲವೂ ಯಾವುದಾದರೊಂದು ಕುದುರೆ ಸೂಚನೆ ಕೊಡುವ ಮುನ್ನ ಮುಂದೆ ಹೆಜ್ಜೆ ಹಾಕುತ್ತಿತ್ತು. ಹೀಗಾಗಿ ಇಡೀ ಪ್ರಯೋಗವನ್ನು ಪುನರಾವರ್ತಿಸಬೇಕಾಗಿತ್ತು. ಶಾಂತಿ ಕಳೆದುಕೊಳ್ಳುವುದರಲ್ಲಿದ್ದ ಅನುಭವಿ ನಿರ್ಣಯಗಾರ ಕರ್ನಲ್ ಸೆಸ್ಟ್ರಿನ್ ಕೊನೆಗೆ, ನಾಲ್ಕನೆಯ ಸಲ 'ಹೊರಡಿ' ಎಂದು ಬೊಬ್ಬಿರಿದನು. ಉಪಕ್ರಮ ಯಶಸ್ವಿಯಾಯಿತು.

ಸಾಲುಗೊಂಡಿದ್ದ ಬಹುವರ್ಣರಂಜಿತವಾದ ಸವಾರರ ಗುಂಪಿನ ಮೇಲೆ ಎಲ್ಲ ಕಣ್ಣುಗಳೂ, ದುರ್ಬೀನುಗಳೂ ಕೇಂದ್ರೀಕೃತಗೊಂಡಿದ್ದುವು.

'ಅವರು ಹೊರಟಿದ್ದಾರೆ' ಎಂಬ ಉದ್ಗಾರ ಕೆಲವು ಕ್ಷಣಗಳ ಮೌನ ನಿರೀಕ್ಷೆಯ ನಂತರ ಎಲ್ಲ ಕಡೆಗಳಿಂದ ಕೇಳಿ ಬಂತು.

ಸ್ಪಷ್ಟಾವಲೋಕನಕ್ಕಾಗಿ ಒಮ್ಮೆ ಒಂಟಿಯಾಗಿ, ಮತ್ತೊಮ್ಮೆ ಸಣ್ಣ ಸಣ್ಣ ಗುಂಪುಗಳಾಗಿ ಪ್ರೇಕ್ಷಕರು ಸ್ಥಳದಿಂದ ಸ್ಥಳಕ್ಕೆ ಹರಿದಾಡುತ್ತಿದ್ದರು. ಮೊದಮೊದಲ ಕ್ಷಣಗಳಲ್ಲಿ ಸವಾರರು ಇಬ್ಬಿಬ್ಬರಾಗಿ, ಮೂಮೂವರಾಗಿ, ಒಬ್ಬರ ಹಿಂದೊಬ್ಬರು ಹುರುಪಿನಿಂದ ಪ್ರವಾಹವನ್ನು ಸಮೀಪಿಸುತ್ತಿದ್ದಂತೆ ಕಂಡರು. ಎಲ್ಲರೂ ಏಕಕಾಲದಲ್ಲಿ ಹೊರಟಂತೆ ಪ್ರೇಕ್ಷಕರಿಗೆ ತೋರುತ್ತಿತ್ತು. ಆದರೆ ತಮ್ಮ ನಡುವೆ ಕೇವಲ ಕ್ಷಣಗಳ ಅಂತರವಿತ್ತೆಂದು ಸವಾರರಿಗೆ ತಿಳಿದಿತ್ತು. ಈ ಅಂತರ ತುಂಬ ಮುಖ್ಯವಾದುದಾಗಿತ್ತು.

ಉದ್ರೇಕ ಸ್ವಭಾವದ ಫ್ರೂ-ಫ್ರೂಗೆ ಮೊದಲ ಕ್ಷಣ ತಪ್ಪಿಹೋಯಿತು. ಹಲವು ಕುದುರೆಗಳು ಅದನ್ನು ಹಿಂದೆ ಹಾಕಿದುವು. ಅವು ಪ್ರವಾಹವನ್ನು ತಲುಪುವ ಮುನ್ನವೇ ತನ್ನೆಲ್ಲ ಶಕ್ತಿಯನ್ನು ಬಳಸಿ, ಜಗ್ಗಿ ಮುಕ್ಕಿರಿಯುತ್ತಿದ್ದ ವಾಜಿಯನ್ನು ಹಿಡಿದಿದ್ದ ವ್ರಾನ್ಸ್ಕಿ ಸುಲಭವಾಗಿ ಮೂವರು ಪ್ರತಿ ಸ್ಪರ್ಧಿಗಳನ್ನು ಹಿಂದಕ್ಕೆ ಹಾಕಿದನು. ಹೀಗಾಗಿ ಅವನ ಮುಂದಿದ್ದ ಎರಡೇ ಎರಡು ಕುದುರೆಗಳೆಂದರೆ, ನೇರವಾಗಿ ಅವನ ಮುಂದುಗಡೆ ಲಯಬದ್ಧವಾಗಿ ಹಾಗೂ ಲಾಘವವಾಗಿ ಚಲಿಸುತ್ತಿದ್ದ ರೊಂಡಿಗಳುಳ್ಳ ಮಖೊತಿನ್‌ನ ಕೆಂಗಂದು ಬಣ್ಣದ ಮಲ್ಲಗುದುರೆ, ಹಾಗೂ ಹೆದರಿಕೆಯಿಂದ ಜೀವಂತ ಶವವಾಗಿದ್ದ ಕನಿಕರನೀಯ ಕುಜೊವ್‌ಲೆವ್‌ನನ್ನು ಹೊತ್ತಿದ್ದ ಸುಂದರ ಡಯಾನ.

ಮೊದಮೊದಲ ಕ್ಷಣಗಳಲ್ಲಿ ವ್ರಾನ್ಸ್ಕಿ ತನ್ನ ಮೇಲಾಗಲಿ, ಕುದುರೆಯ ಮೇಲಾಗಲಿ ಹಿಡಿತವನ್ನಿಟ್ಟುಕೊಂಡಿರಲಿಲ್ಲ. ಮೊದಲ ಅಡಚಣೆಯನ್ನು, ಅಂದರೆ ಪ್ರವಾಹವನ್ನು

ಮುಟ್ಟುವ ತನಕ ಅವನು ತನ್ನ ಕುದುರೆಯ ಚಲನವಲನಗಳನ್ನು ನಿರ್ದೇಶಿಸಲಾಗ ಲಿಲ್ಲ.

ಮಲ್ಲಕುದುರೆ ಮತ್ತು ಡಯಾನಗಳೆರಡೂ ಏಕಕಾಲದಲ್ಲಿ ಪ್ರವಾಹವನ್ನು ಪ್ರವೇಶಿಸಿದುವು; ಎವೆಯಿಕ್ಕುವುದರೊಳಗಾಗಿ ಗಾಳಿಯಲ್ಲಿ ತೇಲಿ, ಬೇರೆ ದಡದ ಕಡೆಗೆ ಹಾರಿದುವು; ಹಾರುತ್ತಿತ್ತೆಂಬಂತೆ ಫ್ರೂ-ಫ್ರೂ ಅವುಗಳ ಹಿಂದೆ ನೆಗೆಯಿತು; ಆದರೆ ತಾನು ಗಾಳಿಯಲ್ಲಿ ತೇಲುತ್ತಿದ್ದಂತೆ ಅನುಭವವಾಗುತ್ತಿದ್ದ ಕ್ಷಣದಲ್ಲಿಯೇ ವ್ರಾಂಸ್ಕಿ ಇದ್ದಕ್ಕಿದ್ದಂತೆ ತನ್ನ ವಾಜಿಯ ಗೊರಸುಗಳ ಕೆಳಗಿದ್ದ ಕುಜೊವ್‌ಲೆವ್‌ನನ್ನು ಕಂಡನು; ಕುಜೊವ್‌ಲೆವ್ ಪ್ರವಾಹದ ಮತ್ತೊಂದು ಪಕ್ಕದಲ್ಲಿ ಡಯಾನ ಜತೆಯಲ್ಲಿ ಒದ್ದಾಡು ತ್ತಿದ್ದನು. ಜಿಗಿತದ ನಂತರ ಕುಜೊವ್‌ಲೆವ್ ಲಗಾಮನ್ನು ಸಡಿಲಗೊಳಿಸಿದನು; ಕುದುರೆ ಅವನನ್ನು ತನ್ನ ತಲೆಯ ಮೇಲೆ ಚಿಮ್ಮಿಸಿತು. ಕೆಲವು ಕಾಲದನಂತರ ವ್ರಾಂಸ್ಕಿ ಅದರ ವಿವರಗಳನ್ನರಿತನು. ಕುಜೊವ್‌ಲೆವ್‌ನೂ ಅವನ ಕುದುರೆಯೂ ಸರಿಯಾಗಿ ತನ್ನ ಕೆಳಗಿತ್ತೆಂಬುದನ್ನು ಮಾತ್ರ ಅವನೀಗ ಬಲ್ಲವನಾಗಿದ್ದನು; ಫ್ರೂ-ಫ್ರೂ ಡಯಾನ ತಲೆಯ ಮೇಲೆ ಅಥವಾ ಕಾಲಿನ ಮೇಲೆ ಬೀಳಬಹುದೆಂಬುದೂ ಅವನಿಗೆ ಗೊತ್ತಿತ್ತು. ಆದರೆ ಬೀಳುತ್ತಿರುವ ಬೆಕ್ಕಿನಂತೆ ಫ್ರೂ-ಫ್ರೂ ತನ್ನ ದೇಹವನ್ನು ತಿರುಚಿ, ಕುದುರೆಯನ್ನು ಪಾರುಮಾಡಿ, ದೂರದಲ್ಲಿ ಭೂಮಿಯ ಮೇಲೆ ಕಾಲೂರಿತು.

'ಓ, ನನ್ನ ಮುದ್ದೆ!' ಎಂದು ವ್ರಾಂಸ್ಕಿ ಭಾವಿಸಿಕೊಂಡನು.

ಇದಾದನಂತರ ವ್ರಾಂಸ್ಕಿ ಕುದುರೆಯ ಮೇಲೆ ಪೂರ್ಣ ಹಿಡಿತವನ್ನು ಸಾಧಿಸಿದನು. ಮಖೊತಿನ್‌ನ ಹಿಂದಿದ್ದ ದೊಡ್ಡ ಗೋಡೆಯನ್ನು ದಾಟಲುದ್ದೇಶಿಸಿ, ಮುಂದಿನ ಪ್ರತಿಬಂಧಕದ ಮೊದಲಿದ್ದ ಐನೂರು ಗಜಗಳ ಸಮತಟ್ಟಾದ ನೆಲದಲ್ಲಿ ಅವನನ್ನು ಹಿಂದೆ ಹಾಕುವ ಸಲುವಾಗಿ ಪ್ರಯತ್ನಿಸಲು ಅವನು ಕುದುರೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡನು. ಗೋಡೆ ದೈತ್ಯಾಕಾರವಾಗಿ ತ್ಸಾರ್ ಕ್ರೀಡಾ ಮಂಟಪದ ಮುಂದೆ ನಿಂತಿತ್ತು. ತ್ಸಾರ್, ಆಸ್ಥಾನಿಕರು ಮತ್ತು ಜನ ಸಂದಣಿಗಳು ಅವರನ್ನೆ, ಅಂದರೆ ವ್ರಾಂಸ್ಕಿ ಮಖೊತಿನ್‌ರನ್ನೆ ನಿಟ್ಟಿಸುತ್ತಿದ್ದನು. ಭೂತವೆಂದು ಕರೆಯುತ್ತಿದ್ದ ಗೋಡೆ ಯನ್ನವರು ಸಮೀಪಿಸುತ್ತಿದ್ದಂತೆ ಮಖೊತಿನ್ ಒಂದು ಲಾಂಬಿ ದೂರದಲ್ಲಿದ್ದನು. ಎಲ್ಲ ಕಡೆಯ ಕಣ್ಣು ತನ್ನಲ್ಲಿಯೇ ನಾಟಿದ್ದುವೆಂಬುದು ವ್ರಾಂಸ್ಕಿಗರಿವಾಗಿತ್ತು; ಆದರವ ನಿಗೆ ತನ್ನ ವಾಜಿಯ ಕಿವಿಕೊರಳುಗಳಲ್ಲದೆ, ತನ್ನನ್ನು ಸಂಧಿಸಲು ತೇಲಿಬರುತ್ತಿದ್ದ ನೆಲವಲ್ಲದೆ, ತನ್ನೆದುರಿಗೆ ವೇಗವಾಗಿ ಹಾಗೂ ಲಯಬದ್ಧವಾಗಿ ಚಲಿಸುತ್ತಿದ್ದ ಮಲ್ಲಗುದುರೆಯ ಬೆಳ್ಗಾಲು ಪಿರ್ರಿಗಳಲ್ಲದೆ, ಬೇರೇನೂ ಕಾಣಿಸುತ್ತಿರಲಿಲ್ಲ. ಅವರಿಬ್ಬರ ನಡುವಣಂತರ ಮಾತ್ರ ಏಕ ರೀತಿಯಾಗಿತ್ತು. ನೆಲವನ್ನು ಮುಟ್ಟಲಿಲ್ಲವೆಂಬಂತೆ ಮಲ್ಲಗುದುರೆ ಆಕಾಶದಲ್ಲಿ ಹಾರುತ್ತಿತ್ತು; ತನ್ನ ತುಂಡು ಬಾಲವನ್ನೊಮ್ಮೆ ಝುಳಪಿಸಿತೊ ಇಲ್ಲವೊ ಅದು ವ್ರಾಂಸ್ಕಿಯ ದೃಷ್ಟಿಯಿಂದ ಮರೆಯಾಯಿತು.

'ಭಲೆ' ಎಂದು ಯಾರೊ ಬೊಬ್ಬಿರಿದರು.

ಎವೆಯಿಕ್ಕುವುದರೊಳಗಾಗಿ ಗೋಡೆ ಫಳಾರನೆ ಹೊಳೆದು ವ್ರಾಂಸ್ಕಿಯ ಹಿಂದೆ ಸರಿದಿತ್ತು. ಚಲನೆಯಲ್ಲಿನಿತೂ ಬದಲಾವಣೆಯಿಲ್ಲದೆ ಕುದುರೆ ಪ್ರತಿಬಂಧಕವನ್ನು

ದಾಟಿತ್ತು; ಗೋಡೆ ಅವನ ಹಿಂದಿತ್ತು; ಆದರವನಿಗೆ ಏನೊ ಹೊಡೆತ ಕೇಳಿಸಿತು: ಮಲ್ಲಗುದುರೆಯ ಸಾಮಿಪ್ಯದಿಂದ ಉದ್ರೇಕಗೊಂಡ ವಾಜಿ ಸರಕ್ಕನೆ ನೆಗೆದಾಗ, ಅದರ ಹಿಂದಣ ಗೊರಸು ಗೋಡೆಗೆ ಬಡಿದಿತ್ತು. ಆದರೆ ಅದು ತನ್ನ ವೇಗವನ್ನು ತಗ್ಗಿಸಿರಲಿಲ್ಲ. ಮಲ್ಲಗುದುರೆ ಇನ್ನೂ ಒಂದು ಲಾಂಬಿ ದೂರವಿದೆಯೆಂದು ಮಣ್ಣು ಹೆಂಟೆಯಿಂದ ಮುಖಕ್ಕೆ ಪೆಟ್ಟಾಗಿದ್ದ ವ್ರಾಂಸ್ಕಿ ಭಾವಿಸಿದನು. ಕುದುರೆಯ ಪಿರ್ರೆಯನ್ನೂ, ಅದರ ಮೋಟು ಬಾಲವನ್ನೂ, ಶೀಘ್ರ ಚಲನೆಯ ಬೆಳ್ಗಾಲುಗಳನ್ನೂ ಅವನು ಮತ್ತೆ ನೋಡ ಬಹುದಿತ್ತು. ಅದೆಷ್ಟು ವೇಗವಾಗಿ ಓಡಿದರೂ ಅವುಗಳ ನಡುವಣ ಅಂತರ ಮಾತ್ರ ವ್ಯತ್ಯಾಸವಾಗುತ್ತಿರಲಿಲ್ಲ.

ಮಖೊತಿನ್‌ನನ್ನು ಹಿಂದೆ ಹಾಕಲು ಅದೇ ಸಮಯವೆಂದು ವ್ರಾಂಸ್ಕಿ ಯೋಚಿಸುತ್ತಿದ್ದಂತೆ, ತನ್ನ ದಣಿಯ ಆಲೋಚನೆ ತನಗೆ ಹೊಳೆದಿರಬೇಕೆನ್ನುವಂತೆ ಫ್ರೂ-ಫ್ರೂ ಪ್ರಚೋದನೆಯಿಲ್ಲದೆಯೆ ವೇಗವನ್ನು ಹೆಚ್ಚಿಸಿ, ಅನುಕೂಲಕರವಾದ ಅಂತರ್ ಪಾರ್ಶ್ವದಿಂದ ಮಖೊತಿನ್‌ನ ಮೇಲೆ ಜಯ ಸಾಧಿಸಲು ತೊಡಗಿತು. ಆದರದು ಒಳಭಾಗಕ್ಕೆ ಬರದಂತೆ ಮಖೊತಿನ್ ಎಚ್ಚರಿಕೆ ವಹಿಸಿದನು. ಬಾಹ್ಯಪಾರ್ಶ್ವದಿಂದಲೇ ಮಖೊತಿನ್‌ನನ್ನು ಹಿಂದೆ ಹಾಕುವ ಸಾಧ್ಯತೆಯನ್ನು ಕುರಿತು ವ್ರಾಂಸ್ಕಿ ಯೋಚಿಸು ತ್ತಿರುವಾಗಲೇ ಫ್ರೂ-ಫ್ರೂ ತನ್ನ ದಿಕ್ಕನ್ನು ಬದಲಾಯಿಸಿ, ಅದೇ ಬದಿಯಿಂದಲೇ ಅದನ್ನು ಹಿಂದಕ್ಕೆ ಹಾಕಲು ಸಿದ್ಧವಾಗುತ್ತಿತ್ತು. ಬೆವರಿನಿಂದ ಕಪ್ಪಾಗಿದ್ದ ಫ್ರೂ-ಫ್ರೂನ ಹೆಗಲು ಮಲ್ಲಗುದುರೆಯ ರೊಂಡಿಗೆ ತಗಲುವಂತಿತ್ತು, ಇದೇ ರೀತಿ ಅವರು ಕೆಲವು ಹೆಜ್ಜೆ ಮುಂದುವರಿದರು. ಆದರೆ ದೊಡ್ಡದಾದ ಬಾಹ್ಯವೃತ್ತದ ಕಡೆಗೆ ಸರಿಯಲಪೇಕ್ಷಿಸದ ವ್ರಾಂಸ್ಕಿ ಮುಂದಿನ ಪ್ರತಿಬಂಧಕವನ್ನು ಮುಟ್ಟುವ ಮೊದಲೇ ತನ್ನ ಲಗಾಮುಗಳನ್ನು ಚುರುಕಾಗಿ ಬಳಸಿ, ಗುಡ್ಡದ ಮೇಲ್ಗಡೆಯೇ ಮಖೊತಿನ್‌ನನ್ನು ಹಿಂದೆ ಹಾಕಿದನು. ಕೆಸರಂಟಿದ ಮಖೊತಿನ್‌ನ ಮುಖದ ಕಡೆಗೊಮ್ಮೆ ಅವನು ನೋಡಿದನು. ಆ ಮನುಷ್ಯ ತನ್ನ ಕಡೆಗೆ ಮುಗುಳುನಗೆ ಬೀರಿರಬೇಕೆಂದು ಸಹ ಅವನು ಕಲ್ಪಿಸಿಕೊಂಡನು. ವ್ರಾಂಸ್ಕಿ ಮಖೊತಿನ್‌ನ ಮುಂದೆ ಹಾಯ್ದನು. ಆದರೆ ಮಖೊತಿನ್ ತನ್ನ ಹಿಂದೆ ತುಂಬ ಸನಿಹ ದಲ್ಲಿದ್ದನೆಂಬುದರ ಅರಿವು ಅವನಿಗಿತ್ತು. ಮಲ್ಲಗುದುರೆಯ ಲಯಬದ್ಧ ಗೊರಸುದನಿ ಹಾಗೂ ಅದರ ಘೊಂಕೃತಿಯ ಉಸಿರು ನೇರವಾಗಿ ಅವನ ಹಿಂದೆಯೇ ಕೇಳಿಸುತ್ತಿದ್ದುವು.

ಮುಂದಿನ ಎರಡು ಅಡಚಣೆಗಳಾದ ಕಂದಕ ಮತ್ತು ಬೇಲಿಗಳನ್ನು ಸುಲಭವಾಗಿ ದಾಟಲಾಯಿತು; ಆದರೆ ಮಲ್ಲಗುದುರೆಯ ಗೊರಸು ಮತ್ತು ಉಸಿರಿನ ಶಬ್ದಗಳು ಹತ್ತಿರವಾಗುತ್ತಿದ್ದಂತೆ ವ್ರಾಂಸ್ಕಿಯ ಕಿವಿಯ ಮೇಲೆ ಬೀಳುತ್ತಿದ್ದುವು. ತನ್ನ ಕುದುರೆ ಯನ್ನವನು ಪ್ರಚೋದಿಸಿದನು. ಅದು ಸುಲಭವಾಗಿ ತನ್ನ ವೇಗವನ್ನು ತೀವ್ರಗೊಳಿಸ ಲಾಗಿ, ಮಲ್ಲಗುದುರೆಯ ಗೊರಸುಗಳ ಶಬ್ದ ಹಿಂದು ಹಿಂದಕ್ಕೆ ಸರಿದಾಗ ಅವನು ಹರ್ಷಪುಲಕಿತನಾದನು.

ಕಾರ್ಡ್‌ನ ಸಲಹೆಯಂತೆ, ತನ್ನ ಮನೋರಥದಂತೆ ವ್ರಾಂಸ್ಕಿ ಅಗ್ರಸ್ಥಾನವನ್ನು ಸಾಧಿಸಿದ್ದನು; ಈಗವನು ತನ್ನ ವಿಜಯದ ಬಗ್ಗೆ ಸಂಪೂರ್ಣ ಭರವಸೆಯಿಂದಿದ್ದನು. ಒಂದೊಂದು ಕ್ಷಣ ಕಳೆದಂತೆಲ್ಲ ಅವನ ಭಾವೋದ್ವೇಗ, ಸಂತೋಷ ಮತ್ತು ಫ್ರೂ-ಫ್ರೂ

ಬಗೆಗಿನ ಹೃದಯುವಂತಿಕೆ ಹಿಗ್ಗುತ್ತಿದ್ದುವು. ಹಿಂದಿರುಗಿ ನೋಡಬೇಕೆಂದು ಅವನಿಗಾಸೆ ಯಾಯಿತು ; ಆದರೆ ನೋಡುವ ಧೈರ್ಯವಿರಲಿಲ್ಲ ; ಸಮಾಧಾನದಿಂದಿರಲು ಅವನು ಪ್ರಯತ್ನಿಸಿದನು ; ಮಲ್ಲಕುದುರೆಯಲ್ಲೇನು ಶಕ್ತಿಯಿತ್ತೆಂದು ಅವನು ನಂಬಿದ್ದನೋ ಅದೇ ಶಕ್ತಿ ತನ್ನ ಕುದುರೆಯಲ್ಲಿ ಕೊಳಗೊಂಡಿರಲೆಂದವನು ಅದನ್ನು ಬುಲ್ಲವಿಸಲಿಲ್ಲ. ಅತ್ಯಂತ ಕಷ್ಟಕರವಾದ ಅಡಚಣೆ ಅವನಿಗಾಗಿ ಕಾದಿತ್ತು : ಅದನ್ನವನು ಇತರರಿಗಿಂತ ಮೊದಲೇ ದಾಟಲು ಸಾಧ್ಯವಾಗಿದ್ದರೆ, ಅವನು ಅಗ್ರಸ್ಥಾನ ಪಡೆಯುವಲ್ಲಿ ಸಂಶಯ ವಿರಲಿಲ್ಲ. ಅವನು ಐರಿಷ್‌ಮಾದರಿಯ ಬೇಲಿಯನ್ನು ಸಮಿಾಪಿಸುತ್ತಿದ್ದನು. ಫ್ರೂ-ಫ್ರೂ ಮತ್ತು ಅವನು ಅದನ್ನು ದೂರದಿಂದಲೇ ನೋಡಿದ್ದರು ; ಕ್ಷಣಕಾಲ ಆ ಇಬ್ಬರ ತಲೆ ಗಳಲ್ಲಿ ಸಂದೇಹಕೀಟ ತಲೆಹಾಕಿತ್ತು. ಕುದುರೆಯ ಕಿವಿಗಳ ಅನಿಶ್ಚಯತೆಯನ್ನವನು ಗಮನಿಸಿ, ಚಾವಟಿಯನ್ನು ಮೇಲೆತ್ತಿದ್ದನು ; ಆದರೆ ತನ್ನ ಸಂದೇಹ ನಿರಾಧಾರವಾದು ವೆಂದವನು ಮರುಕ್ಷಣದಲ್ಲಿಯೇ ಅರಿತುಕೊಂಡನು. ಕುದುರೆಗೆ ತಾನೇನು ಮಾಡ ಬೇಕೆಂಬುದರ ಅರಿವಿತ್ತು. ಅದು ತನ್ನ ವೇಗವನ್ನು ತೀವ್ರಗೊಳಿಸಿತು ; ಅವನ ನಿರೀಕ್ಷೆ ಯಂತೆ ಅದು ನಿರಾಯಾಸವಾಗಿ ಜಿಗಿಯಿತು ; ನೆಲದಿಂದ ಮೇಲೇರುತ್ತಿದ್ದ ಬಿರುಸಿಗೆ ಅದು ಕಂದಕದ ಮತ್ತೊಂದು ದಡದಲ್ಲಿ ಕಾಲೂರಿತು ; ಅದೇ ಲಯದೊಡನೆ, ಅಷ್ಟೇ ಅನಾಯಾಸವಾಗಿ, ಅದೇ ಕಾಲನ್ನು ಮುಂದಿರಿಸಿ, ಫ್ರೂ-ಫ್ರೂ ಹಿಂದಿನ ವೇಗದ ಜಾಡು ಹಿಡಿಯಿತು.

'ಭಲೇ, ವ್ರಾಂಸ್ಕಿ!' ಎಂಬ ಉಗ್ಗಡಣೆಗಳು ಒಂದು ಗುಂಪಿನ ಕಡೆಯಿಂದ ಎರಗಿದುವು; ಅವರು ತನ್ನ ದಳದ ಗೆಳೆಯರೆಂಬ ಸಂಗತಿ ಅತನಿಗೆ ತಿಳಿದಿತ್ತು. ಅವರೆಲ್ಲರೂ ಪ್ರತಿಬಂಧಕದ ಪಕ್ಕದಲ್ಲಿ ನಿಂತಿದ್ದರು. ಯಶ್ವಿನ್‌ನ ಧ್ವನಿಯೂ ಅವನಿಗೆ ಕೇಳಿಸಿತು ; ಆದರೆ ಅವನು ಮಾತ್ರ ಕಾಣಲಿಲ್ಲ.

'ಓ, ನನ್ನ ಚೆಲುವೆ!' ಎಂದವನು ಹಿಂದಿನಿಂದ ಬರುತ್ತಿದ್ದ ಧ್ವನಿಗಳು ಕಿವಿಯ ಮೇಲೆ ಬೀಳುತ್ತಿದ್ದಂತೆ ಫ್ರೂ-ಫ್ರೂವನ್ನು ಮುದ್ದಿಸಿದನು. ಮಲ್ಲಗುದುರೆಯ ಗೊರಸಿನ ದನಿಯನ್ನು ಮತ್ತೆ ಕೇಳಿಸಿಕೊಳ್ಳುತ್ತ 'ಅದು ಅಡಚಣೆಯನ್ನು ದಾಟಿದಂತಿದೆ' ಎಂದು ಯೋಚಿಸಿದನು. ಉಳಿದದ್ದು ಒಂದೇ ಒಂದು ನೀರಿನ ಕಂದಕ. ಅದು ಐದು ಅಡಿ ಅಗಲವಾಗಿತ್ತು. ವ್ರಾಂಸ್ಕಿ ಅದರ ಕಡೆಗೆ ನೋಡಲಿಲ್ಲ ; ಎಲ್ಲರಿಗಿಂತಲೂ ಮುಂದೆ ತುಂಬ ಅಂತರದಲ್ಲಿರುವ ಅಪೇಕ್ಷೆಯಿಂದ ಅವನು ವೃತ್ತಾಕಾರವಾಗಿ ಲಗಾಮುಗಳನ್ನಾಡಿ ಸುತ್ತ, ಗೊರಸಿನ ಲಯಕ್ಕೆ ಹೊಂದಿಕೊಳ್ಳುವಂತೆ ಕುದುರೆಯ ತಲೆಯನ್ನು ಮೇಲಕ್ಕೂ ಕೆಳಕ್ಕೂ ಕುಣಿಸುತ್ತಿದ್ದನು. ಸಂಗ್ರಹಗೊಂಡಿದ್ದ ತನ್ನ ಅಂತಿಮ ಶಕ್ತಿಯನ್ನೆಲ್ಲ ಅದು ವಿನಿಯೋಗಿಸುತ್ತಿರಬೇಕೆಂದವನು ಭಾವಿಸಿದನು. ಅದರ ಕೊರಳು ಹೆಗಲು ಒದ್ದೆ ಯಾಗಿದ್ದುದು ಮಾತ್ರವಲ್ಲ, ಅದರ ತಲೆ, ಕೇಸರ, ಚುರುಕು ಕಿವಿಗಳ ಮೇಲೆ ಬೆವರಿನ ಹನಿ ಹೊಳೆಯುತ್ತಿದ್ದುವು. ಅದರ ಉಸಿರು ಬಿರುಬಿರನೆ ಏದುತ್ತಿತ್ತು. ಉಳಿದ ಐನೂರು ಗಜಗಳ ದೂರ ಹೋಗುವಷ್ಟು ಸಾಮರ್ಥ್ಯ ಅದರಲ್ಲಿತ್ತೆಂಬುದನ್ನು ಸಹ ಅವನು ಬಲ್ಲವ ನಾಗಿದ್ದನು. ಅದರ ಸರಾಗವಾದ ಚಲನೆಯಿಂದ ಹಾಗೂ ಭೂಮಿಗೆ ನಿಕಟವಾಗಿರುವ ಅರಿವೆಯಿಂದ ಅದು ತನ್ನ ವೇಗವನ್ನು ಹೆಚ್ಚಿಸಿದಂತೆ ಅವನಿಗೆ ಭಾಸವಾಗುತ್ತಿತ್ತು. ಕಂದಕ

ವನ್ನು ಗಮನಿಸಲಿಲ್ಲವೆಂಬಂತೆ ಅದು ಅದರ ಮೇಲೆ ನೆಗೆಯಿತು; ಅದು ಹಕ್ಕಿಯಂತೆ ಹಾರಿತೆಂದೇ ಹೇಳಬಹುದು. ಆದರೆ ಅದೇ ಕ್ಷಣದಲ್ಲಿ ತನ್ನ ಚಲನೆಯನ್ನು ಕುದುರೆಯ ಚಲನೆಯೊಂದಿಗೆ ಸರಿಹೊಂದಿಸಿಕೊಳ್ಳಲಾರದೆ ಅವನು ಭಯಚಕಿತನಾದನು; ಯಾವುದೋ ಅರ್ಥವಾಗದ ಕಾರಣಕ್ಕಾಗಿ, ತಡಿಯ ಮೇಲೆ ಮತ್ತೆ ಕುಂಡೆಯೂರುವ ಅವಸರದಲ್ಲಿ ಅಪಾಯಕಾರಿಯೂ ಅಕ್ಷಮ್ಯವೂ ಆದ ತಪ್ಪನ್ನವನು ಎಸಗಿದ್ದನು. ಸಕಲವೂ ಒಂದೇ ಒಂದು ಕ್ಷಣದಲ್ಲಿ ಅಸ್ತವ್ಯಸ್ತಗೊಂಡಿತು; ಘೋರ ಸಂಗತಿಯ ಸಂಭವ ಅವನಿಗರಿವಾಯಿತು. ತನಗೆ ಹತ್ತಿರವಾಗಿ, ಮೂಗಿನ ಕೆಳಗಡೆಯೆ ಕಪಿಲ ವಾಜಿಯ ಬಿಳಿಯ ಗೊರಸುಗಳು ಹೊಳೆದಾಗ, ಮಖೊತಿನ್‌ನ ಕುದುರೆ ತನ್ನ ಪಕ್ಕದಲ್ಲಿ ನಾಗಾಲೋಟದಲ್ಲಿ ಧಾವಿಸಿದಾಗ, ಏನು ನಡೆಯಿತೆಂಬುದೇ ಅವನಿಗೆ ಗೊತ್ತಾಗಲಿಲ್ಲ. ವ್ರಾನ್‌ಸ್ಕಿಯ ಒಂದು ಪಾದ ನೆಲವನ್ನು ಮುಟ್ಟಿತು; ಕುದುರೆ ಅದರಮೇಲೊರಗಿತು. ಅವನು ತನ್ನ ಕಾಲು ಬಿಡಿಸಿಕೊಳ್ಳುವ ಹೊತ್ತಿಗೆ ಅದು ಪಾರ್ಶ್ವವಡಿಯಾಗಿ ಕುಸಿಯಿತು. ಗಟ್ಟಿಯಾಗಿ ಘೂಂಕರಿಸುತ್ತ, ತನ್ನ ಕಾಲುಗಳನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಒದ್ದಾಡುತ್ತ, ಬೆವರುತ್ತಿದ್ದ ಕೊರಳನ್ನು ತಿರುಚುತ್ತ ಅದು ಬಾಣಕ್ಕೆ ಗುರಿಯಾದ ಪಕ್ಷಿಯಂತೆ ನೆಲದ ಮೇಲೆ ಚಡಪಡಿಸುತ್ತಿತ್ತು. ವ್ರಾನ್‌ಸ್ಕಿಯ ವಕ್ರ ಚಲನೆ ಅದರ ಬೆನ್ನನ್ನು ಮುರಿದಿತ್ತು. ಅದು ತುಂಬ ತಡವಾಗಿ ಅವನಿಗರಿವಾಯಿತು. ನಾಗಾಲೋಟದಿಂದ ದೌಡಾಯಿಸುತ್ತಿದ್ದ ಮಖೊತಿನ್‌ನನ್ನವನು ನೋಡುತ್ತಿದ್ದನು. ಕೆಸರಿಡಿದ ನಿಶ್ಚಲ ನೆಲದ ಮೇಲೆ ತತ್ತರಿಸುತ್ತ ನಿಂತಿದ್ದನು. ಏದುಸಿರು ಬಿಡುತ್ತಿದ್ದ ತನ್ನ ಕಡೆಗೆ ಚಾಚಿದ್ದ ತಲೆಯ, ತನ್ನನ್ನೆ ನೋಡುತ್ತಿದ್ದ ಚೆಲುವುಗಂಗಳ ಫ್ರೂ-ಫ್ರೂ ಅವನ ಮುಂದಿತ್ತು. ಏನು ನಡೆಯಿತೆಂಬುದರ ಅರಿವಿಲ್ಲದೆಯೆ ವ್ರಾನ್‌ಸ್ಕಿ ಅದನ್ನು ಮೇಲಕ್ಕೆಬ್ಬಿಸುವ ಸಲುವಾಗಿ ಲಗಾಮನ್ನು ಬಲವಾಗಿ ಜಗ್ಗಿದನು. ಮತ್ತೆ ಅದು ಮೀನಿನಂತೆ ಒದರಾಡಿತು; ಅದರ ತಡಿಯ ರೆಕ್ಕೆಗಳು ತೂಗಾಡುತ್ತಿದ್ದುವು; ತನ್ನ ಮುಂಗಾಲುಗಳ ಮೇಲೆ ಭಾರವಿಟ್ಟು ಮೇಲೇಳಲು ಅದು ಪ್ರಯತ್ನಿಸಿತು; ಆದರದು ತನ್ನ ಹಿಂಗಾಲುಗಳನ್ನೆತ್ತಲಾಗಲಿಲ್ಲ; ಮತ್ತೊಂದು ಹೋರಾಟದ ನಂತರ ಅದು ತನ್ನ ಪಾರ್ಶ್ವವಡಿಯಾಗಿ ಕುಸಿಯಿತು. ಕೋಪದಿಂದ ಬಿಳಿಚಿಕೊಂಡು ವಿಕಾರವಾಗಿದ್ದ ಮುಖದಿಂದ, ನಡುಗುತ್ತಿದ್ದ ಕೆಳದವಡೆಯ ವ್ರಾನ್‌ಸ್ಕಿ ತನ್ನ ಹಿಮ್ಮಡಿಯಿಂದ ಅದರ ಹೊಟ್ಟೆಯ ಮೇಲೆ ಒದ್ದನು; ಮತ್ತೆ ಲಗಾಮನ್ನು ಜಗ್ಗಿ ಎಳೆದನು, ಆದರದು ಮಿಸುಕಲಿಲ್ಲ. ಅದರ ಮೂತಿ ನೆಲಕ್ಕಂಟಿಕೊಂಡಿತ್ತು. ತನ್ನ ದಣಿಯನ್ನು ನಿಟ್ಟಿಸುತ್ತಿದ್ದ ಕಣ್ಣುಗಳು ಮಾತ್ರ ಮಾತಾಡುತ್ತಿದ್ದುವು.

'ಅ....ಯ್ಯೋ!' ಎಂದು ವ್ರಾನ್‌ಸ್ಕಿ ತನ್ನ ತಲೆಯನ್ನು ಹಿಡಿದುಕೊಂಡು ನರಳಿದನು. 'ಅಯ್ಯೋ! ಏನು ಮಾಡಿಬಿಟ್ಟೆ!' ಎಂದವನು ಕೂಗಿಕೊಂಡನು. 'ಪಂದ್ಯದಲ್ಲಿ ಸೋತೆನೆ! ಇದೆಲ್ಲ ನನ್ನ ತಪ್ಪಿನ ಫಲ–ನಾಚಿಕೆಗೇಡಿನ ಅಕ್ಷಮ್ಯ ಅಪರಾಧ! ಈ ನಿರಪರಾಧಿ ಮುದ್ದು ವಾಜಿಯೂ ವಿಪತ್ತಿಗೊಳಗಾಗಿದೆ! ಅಯ್ಯೋ, ನಾನೇನು ಮಾಡಿಬಿಟ್ಟೆ!'

ವೈದ್ಯನೂ, ಅವನ ಸಹಾಯಕನೂ, ಅವನ ದಳದ ಅಧಿಕಾರಿಗಳೂ, ಪ್ರೇಕ್ಷಕರ ದೊಡ್ಡಗುಂಪೂ ಅವನ ಬಳಿಗೆ ಓಡೋಡಿ ಬಂದರು. ತನಗೆ ಅಪಾರ ನೋವಾಗಿದ್ದರೂ,

ತನ್ನ ಕುದುರೆಗಾಗಿ ಅವನು ಉಮ್ಮಳಗೊಂಡನು. ಕುದುರೆಯ ಬೆನ್ನು ಮುರಿದಿತ್ತು; ಅದನ್ನು ಗುಂಡಿಕ್ಕಿ ಕೊಲ್ಲಬೇಕಾಗಿತ್ತು. ಪ್ರಶ್ನೆಗಳಿಗೆ ಉತ್ತರ ನೀಡಲಾಗಲಿ, ಮಾತಾಡ ಲಾಗಲಿ ವ್ರಾಂಸ್ಕಿ ಅಸಮರ್ಥನಾಗಿದ್ದನು. ಅವನು ಪಕ್ಕಕ್ಕೆ ತಿರುಗಿಕೊಂಡು, ತನ್ನ ತಲೆಯಿಂದ ಜಾರಿಕೊಂಡಿದ್ದ ಟೋಪಿಯನ್ನೆತ್ತಿಕೊಳ್ಳದೆಯೆ, ಎಲ್ಲಿಗೆ ಹೋಗುತ್ತಿದ್ದೇ ನೆಂಬ ಪರಿವೆಯಿಲ್ಲದೆ, ಹೆಜ್ಜೆ ಹಾಕುತ್ತಿದ್ದನು. ಅವನು ಅನೂಹ್ಯವಾದ ದುರವಸ್ಥೆಗೊಳ ಗಾಗಿದ್ದನು. ತನ್ನ ಜೀವನದಲ್ಲಿ ಮೊತ್ತಮೊದಲ ಸಲ ದುರ್ಭರವೂ ದುಸ್ತರವೂ ಆದ ತಾನೊಬ್ಬನೇ ಹೊಣೆಗಾರಿಕೆಯನ್ನು ಹೊರಬೇಕಾದ ವಿಪತ್ತೊದಗಿತೆಂದು ಅವನಿಗರಿ ವಾಯಿತು.

ಅವನ ಟೋಪಿಯನ್ನೆತ್ತಿಕೊಂಡು ಯಶ್ವಿನ್ ಅವನ ಹಿಂದೆಯೇ ಓಡಿದನು; ಅವನನ್ನು ಮನೆಗೆ ಮುಟ್ಟಿಸಿದನು. ಅರ್ಧಗಂಟೆಯೊಳಗಾಗಿ ವ್ರಾಂಸ್ಕಿಯು ಸ್ವಾಸ್ಥ್ಯ ಮರುಕೊಳಿಸಿತು. ಆದರೆ ಆ ಪಂದ್ಯದ ನೆನಪು ಕೆಟ್ಟ ಕನಸಾಗಿ, ತನ್ನ ಬಾಳಿನ ಅತ್ಯಂತ ಯಾತನೆಯ ಅನುಭವವಾಗಿ ದೀರ್ಘಕಾಲ ಅವನನ್ನು ಕಾಡುತ್ತಿತ್ತು.

೨೬

ಕರೆನಿನ್‌ನ ಮತ್ತು ಅವನ ಹೆಂಡತಿಯ ನಡುವಣ ಬಾಹ್ಯ ಸಂಬಂಧಗಳು ಸ್ವಲ್ಪವೂ ಬದಲಾವಣೆಗೊಂಡಿರಲಿಲ್ಲ. ಒಂದೇ ಒಂದು ವ್ಯತ್ಯಾಸವೆಂದರೆ, ಅವನು ಮೊದಲಿಗಿಂತ ಹೆಚ್ಚು ಕ್ರಿಯಾಶೀಲನಾಗಿದ್ದನು. ಹಿಂದಿನ ವರ್ಷಗಳಂತೆಯೇ ಅವನು ವಸಂತ ಋತುವಿನ ಪ್ರಾರಂಭದಲ್ಲಿ ವಿದೇಶದ ಖನಿಜ ಜಲದ ಊಟೆಗಳಿಗೆ ಯಾತ್ರೆ ಕೈಕೊಂಡು ಮಾಯುತ್ತಿದ್ದನು. ಚಳಿಗಾಲದ ತೀವ್ರಶ್ರಮದ ಪರಿಣಾಮವಾಗಿ ಹದ ಗೆಟ್ಟಿದ್ದ ಆರೋಗ್ಯವನ್ನು ಸರಿಪಡಿಸಿಕೊಳ್ಳುವುದೆ ಆ ಮಾಹದ ಉದ್ದೇಶವಾಗಿತ್ತು. ವಾಡಿಕೆಯಂತೆ ಅವನು ಜುಲೈ ತಿಂಗಳಲ್ಲಿ ಹಿಂದಿರುಗಿದೊಡನೆಯೆ ದ್ವಿಗುಣಗೊಂಡ ಶಕ್ತ್ಯುತ್ಸಾಹಗಳಿಂದ ತನ್ನ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದನು. ಎಂದಿನಂತೆ ಬೇಸಗೆಯಲ್ಲಿ ಅವನ ಹೆಂಡತಿ ಹಳ್ಳಿಯ ತೋಟದ ಮನೆಗೆ ಹೋದರೆ, ಅವನು ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿಯೇ ಉಳಿಯುತ್ತಿದ್ದನು.

ರಾಜಕುಮಾರಿ ಬೆಟ್ಸಿಯ ಮನೆಯ ಸಂಜೆಕೂಟದಲ್ಲಿ ನಡೆದ ಸಂಭಾಷಣೆಯ ನಂತರ ಅವನು ಒಮ್ಮೆಯಾದರೂ ಅನ್ನಾಳೊಡನೆ ತನ್ನ ಮಾತ್ಸರ್ಯ ಸಂದೇಹಗಳನ್ನು ಪ್ರಸ್ತಾಪಿಸಲಿಲ್ಲ. ತನ್ನ ಮಡದಿಯೊಡನೆಯ ಸದ್ಯದ ಸಂಬಂಧಗಳಿಗೆ ತನ್ನ ಉಪೇಕ್ಷೆಯ ಹಾಗೂ ಕುಚೋದ್ಯದ ಸಹಜ ಧಾಟಿಯೇ ಅತ್ಯಂತ ಯೋಗ್ಯವಾದದ್ದೆಂದು ಅವನು ತಿಳಿದಿದ್ದನು. ಅವನವಳ ಬಗ್ಗೆ ಹೆಚ್ಚು ಉದಾಸೀನನಾದನು. ಪ್ರಾಯಶಃ ಆ ರಾತ್ರಿ ಅವಳು ಪ್ರದರ್ಶಿಸಿದ ವಿಮುಖತೆಗಾಗಿ ಅವನು ಕೋಪಗೊಳ್ಳಲಿಲ್ಲ; ಆದರೆ ಅವನ ಭಾವ ಭಂಗಿಗಳಲ್ಲಿ ಒಂದು ವಿಧವಾದ ತಾತ್ಸಾರ ಕಾಣುತ್ತಿತ್ತು. 'ನೀನು ನನ್ನೊಡನೆ ನಿಷ್ಕಪಟ ವಾಗಿ ವರ್ತಿಸುತ್ತಿಲ್ಲ' ಎಂದವನು ಕಲ್ಪನಾಪ್ರಪಂಚದಲ್ಲಿ ಅವಳನ್ನು ಸಂಬೋಧಿಸುತ್ತಿದ್ದಂತೆ ಕಾಣುತ್ತಿದ್ದನು. 'ಇದರಿಂದ ನಿನಗೆ ಒಳ್ಳೆಯದಾಗದು. ಮುಚ್ಚುಮರೆಯಿಲ್ಲದೆ ನನ್ನೊಡನೆ ಮಾತಾಡಲು ನೀನಿಗ ಬಂದಿರುವಾಗ, ನಾನು ಮಾತಾಡಲು ಸಿದ್ಧನಾಗಿಲ್ಲ.

ಆದರಿಂದ ನಿನಗೆ ಒಳ್ಳೆಯದಾಗದು' ಎಂದು ಜೆಂಕಿಯನ್ನಾರಿಸಲು ಪ್ರಯತ್ನಿಸಿ ವಿಫಲಗೊಂಡು, ತನ್ನ ನಿರರ್ಥಕ ಶ್ರಮಕ್ಕಾಗಿ ಕುಪಿತನಾದ ಮನುಷ್ಯನಂತೆ ಅವನು ಮನಸ್ಸಿನಲ್ಲಿಯೇ ಗೊಣಗಿಕೊಂಡನು. 'ತಪ್ಪು ನಿನ್ನದೇ. ನೀನು ಸುಟ್ಟುಕೊಂಡರೆ ನಾನೇನು ಮಾಡುವುದಿದೆ ?'

ಸಾರ್ವಜನಿಕ ವ್ಯವಹಾರಗಳಲ್ಲಿ ಸೂಕ್ಷ್ಮ ಬುದ್ಧಿಯುಳ್ಳ ಹಾಗೂ ಚತುರನಾದ ಈ ವ್ಯಕ್ತಿ ತನ್ನ ಮಡದಿಯ ಬಗೆಗಿನ ಮನೋಧರ್ಮದ ಅವಿವೇಕವನ್ನು ಗ್ರಹಿಸಿಕೊಳ್ಳಲಿಲ್ಲ. ವಸ್ತುಸ್ಥಿತಿ ಎದುರಿಸಲಾಗದಷ್ಟು ಘೋರವಾಗಿದ್ದುದರಿಂದ ಅವನಿಗದು ಅರ್ಥವಾಗಲಿಲ್ಲ. ತನ್ನ ಕುಟುಂಬದ, ಅಂದರೆ ಮಡದಿ ಮಕ್ಕಳ ಪರವಾದ ಭಾವನೆಗಳಿಗೆ ಗುಪ್ತಸ್ಥಾನವಾದ ಹೃದಯಕ್ಕೆ ಬೀಗ ಹಾಕಿ ಮೊಹರುಮಾಡಿದ್ದನು. ಆಸಕ್ತಿಯುಕ್ತ ತಂದೆಯಾಗಿದ್ದ ಅವನು ಚಳಿಗಾಲದ ಕೊನೆಯ ಹೊತ್ತಿಗೆ ಮಗನ ಬಗ್ಗೆ ಔದಾಸೀನ್ಯ ತಳೆದನು. ಮಡದಿಯ ಮೇಲೆ ಬಳಸುತ್ತಿದ್ದ ವ್ಯಂಗ್ಯವಾಗಸ್ತ್ರಗಳನ್ನೆ ಅವನ ಮೇಲೆಯೂ ಪ್ರಯೋಗಿಸಲನುವಾದನು ; 'ಓ, ಇವನೊಬ್ಬ ದೊಡ್ಡಮನುಷ್ಯ' ಎಂದವನು ಮಗನನ್ನು ಸಂಬೋಧಿಸುತ್ತಿದ್ದನು.

ಆ ವರ್ಷದಷ್ಟು ಭಾರವಾದ ಕಚೇರಿಯ ಕೆಲಸಗಳು ಹಿಂದಿನ ವರ್ಷಗಳಲ್ಲಿರಲಿಲ್ಲವೆಂದು ಕರೆನಿನ್ ನಂಬಿಕೊಂಡಿದ್ದುದು ಮಾತ್ರವಲ್ಲ, ಬಹಿರಂಗವಾಗಿ ಘೋಷಿಸಿದನು. ಆ ವರ್ಷ ಅಷ್ಟೊಂದು ಕೆಲಸವನ್ನು ತಾನೇ ಸೃಷ್ಟಿಸಿಕೊಂಡಂತೆ, ತನ್ನ ಮಡದಿ ಮಕ್ಕಳ ಬಗೆಗಿನ ಭಾವನೆಗಳನ್ನೂ ಆಲೋಚನೆಗಳನ್ನೂ ಹೃದಯದ ಪೆಟ್ಟಿಗೆಯಲ್ಲಿ ಭದ್ರಪಡಿಸಲು ಅದೊಂದು ಸಾಧನವಾಗಿದ್ದಂತೆ ಅವನಿಗೆ ತೋರಲಿಲ್ಲ. ಅವು ಹೃದಯಾಂತರಾಳದಲ್ಲಿ ಹುದುಗಿದ್ದಷ್ಟು ಕಾಲವೂ ಅತ್ಯಂತ ಭಯಂಕರವಾಗಿ ಕಾಣುತ್ತಿದ್ದುವು. ತನ್ನ ಮಡದಿಯ ನಡತೆಯ ಬಗ್ಗೆ ಯಾರಾದರೂ ಕರೆನಿನ್‌ನ ಅಭಿಪ್ರಾಯವನ್ನು ಕೇಳಿದ್ದಾದರೆ, ಆ ಸಾಧುಪ್ರಾಣಿ ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಉತ್ತರ ನೀಡುತ್ತಿರಲಿಲ್ಲ. ಆದರೆ ಅದಕ್ಕೆ ಪ್ರತಿಯಾಗಿ ಪ್ರಶ್ನೆ ಕೇಳಿದವರ ಮೇಲೆ ರೇಗುತ್ತಿದ್ದನು. ಆದ್ದರಿಂದಲೇ ತನ್ನ ಸತಿಯ ಆರೋಗ್ಯದ ಬಗ್ಗೆ ಯಾರಾದರೂ ಪ್ರಸ್ತಾಪವೆತ್ತಿದ್ದೇ ಆದರೆ ಅವನ ಮುಖ ಯಾವಾಗಲೂ ಠೀವಿಯನ್ನೂ ಕಾಠಿನ್ಯವನ್ನೂ ಪ್ರದರ್ಶಿಸುತ್ತಿತ್ತು. ತನ್ನ ಮಡದಿಯ ಭಾವನೆ ವರ್ತನೆಗಳನ್ನು ಕುರಿತು ಆಲೋಚಿಸುವ ಇಚ್ಛೆ ಕರೆನಿನ್‌ನಿಗಿರಲಿಲ್ಲ; ನಿಜಕ್ಕೂ ಅವನು ಆ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

ಕರೆನಿನ್‌ನ ಬೇಸಗೆ ಮನೆ ಪೀಟರ್ ಹಾಫ್‌ನಲ್ಲಿತ್ತು. ಸಾಮಾನ್ಯವಾಗಿ ಕೌಂಟೆಸ್ ಲಿಡಿಯಾ ಇವಾನೊವ್ನ ಬೇಸಗೆ ದಿನಗಳಲ್ಲಿ ಅವರ ನೆರೆಯವಳಾಗಿ ಅಲ್ಲಿ ವಾಸಿಸುತ್ತಿದ್ದಳು; ಅನ್ನಾಳೊಡನೆ ನಿರಂತರ ಸಂಪರ್ಕವಿಟ್ಟುಕೊಂಡಿದ್ದಳು. ಈ ಸಲ ಲಿಡಿಯಾ ಪೀಟರ್ ಹಾಫ್‌ನಲ್ಲಿ ತಂಗಲಿಲ್ಲ; ಅನ್ನಾಳನ್ನೊಮ್ಮೆಯಾದರೂ ನೋಡಲಿಲ್ಲ; ಬೆಟ್ಸಿ ಮತ್ತು ವ್ರಾನ್ಸ್ಕಿಯರೊಡನೆ ಅನ್ನಾ ಬೆಳೆಸಿಕೊಂಡಿದ್ದ ಸಲುಗೆಯ ಅನೌಚಿತ್ಯದ ಸುಳುಹುಗಳನ್ನವಳು ಕರೆನಿನ್‌ನಿಗೆ ಮುಟ್ಟಿಸಿದ್ದಳು. ತನ್ನ ಸತಿ ಸಂಶಯಾತೀತಳಾಗಿದ್ದಾಳೆಂದು ಕಂಠೋಕ್ತವಾಗಿ ನುಡಿದು, ಕರೆನಿನ್ ಆ ಮಾತುಕತೆಗಳನ್ನು ಮೊಟಕುಗೊಳಿಸಿದ್ದನು. ಆ ಪ್ರಕರಣದ ನಂತರ ಅವನು ಕೌಂಟೆಸ್ ಲಿಡಿಯಾಳಿಂದ ದೂರವಿರುತ್ತಿದ್ದನು. ತನ್ನ ಮಡದಿಯ ಬಗ್ಗೆ

ತಿರಸ್ಕಾರದಿಂದಿದ್ದ ಆ ವರ್ಗದ ಜನರನ್ನವನು ನೋಡಲಿಷ್ಟಪಡುತ್ತಿರಲಿಲ್ಲ; ನೋಡುತ್ತಲೂ ಇರಲಿಲ್ಲ. ಆ ಬೇಸಗೆಯಲ್ಲಿ ಪೀಟರ್ ಹಾಫ್‌ನಿಂದ ತ್ಸಾರ್‌ಕೊಯೆ ಸೆಲೋಗೆ ಹೋಗುವುದೆಂದು ತನ್ನ ಮಡದಿ ಒತ್ತಾಯಿಸಿದುದರ ಅಂತರಾರ್ಥವನ್ನವನು ತಿಳಿಯಲಸಮರ್ಥನಾಗಿದ್ದನು. ತ್ಸಾರ್‌ಕೊಯೆ ಸೆಲೋನಲ್ಲಿ ಬೆಟ್ಸಿತಂಗಿದ್ದುದು ನಿಜ. ವ್ರಾಂಸ್ಕಿಯ ದಳ ತಳವೂರಿದ್ದ ಬಿಡದಿಯೂ ಅಲ್ಲಿಂದ ದೂರವಾಗಿರಲಿಲ್ಲ. ಈ ವಿಷಯದ ನೆನಪು ಮತ್ತೆ ಮತ್ತೆ ಮರುಕೊಳಿಸದಂತೆ ಅವನು ಜಾಗರೂಕನಾಗಿದ್ದನು. ಆ ಬಗೆಗಿನ ಯೋಚನೆಯನ್ನು ವನು ತ್ಯಜಿಸಿದ್ದೂ ಉಂಟು. ಅವನು ಅಂತಃಕರಣ ಪೂರ್ವಕವಾಗಿ ಮಡದಿಯ ಬಗೆಗಿನ ಸಂಶಯಕ್ಕೆ ಪುರಸ್ಕಾರ ನೀಡದಿದ್ದರೂ, ಆ ವಿಷಯದಲ್ಲವನಿಗೆ ಅಷ್ಟಿಷ್ಟಾದರೂ ಸಾಕ್ಷ್ಯಾಧಾರ ದೊರೆಯದಿದ್ದರೂ, ತಾನೊಬ್ಬ ವಂಚಿತ ಪತಿಯೆಂಬುದರಲ್ಲಿ ಅವನಿಗೆ ಅನುಮಾನವಿರಲಿಲ್ಲ; ಆ ಅರಿವಿನಿಂದಾಗಿ ಅವನು ತುಂಬ ಸಂಕಟಕ್ಕೊಳಗಾದನು.

ಆ ಎಂಟು ವರ್ಷಗಳ ಸಾಂಸಾರಿಕ ಸುಖಜೀವನದ ಅವಧಿಯಲ್ಲಿ ವಿಶ್ವಾಸಹೀನ ಸತಿಯರ ಮತ್ತು ವಂಚಿತ ಪತಿಯರ ಅವಸ್ಥೆಯನ್ನು ಕಂಡು ಎಷ್ಟುಸಲ ಅವನು ತನ್ನಷ್ಟಕ್ಕೆ ತಾನು 'ಜನ ಈ ಪ್ರಪಾತಕ್ಕೆ ಬೀಳುವುದಾದರೂ ಹೇಗೆ? ಅಂಥ ಹೀನ ಸ್ಥಿತಿಯನ್ನವರು ಏಕೆ ಕೊನೆಗಾಣಿಸುವುದಿಲ್ಲ?' ಎಂದು ಪ್ರಶ್ನಿಸಿಕೊಂಡನೋ ಲೆಕ್ಕವಿಲ್ಲ. ಇಂಥದೊಂದು ಅಭಿಶಾಪ ತನ್ನ ತಲೆಯ ಮೇಲೆ ಬಿದ್ದಿರುವ ಈ ಸನ್ನಿವೇಶದಲ್ಲಿ ಅದನ್ನು ಕೊನೆಗಾಣಿಸುವ ಬಗೆಯನ್ನು ಕುರಿತು ಯೋಚಿಸಲು ಸಹ ಅವನು ನಿರಾಕರಿಸಿದನು. ಅದು ಘೋರ ಭೀಕರವಾಗಿದ್ದುದರಿಂದ, ಅತ್ಯಂತ ಅಸಹಜವಾಗಿದ್ದುದರಿಂದ ಅದನ್ನು ಗಣನೆಗೆ ತಂದುಕೊಳ್ಳಲು ಸಹ ಅವನು ಇಷ್ಟಪಡಲಿಲ್ಲ.

ವಿದೇಶದಿಂದ ಹಿಂದಿರುಗಿದನಂತರ ಕರೆನಿನ್ ಎರಡು ಸಲ ಬೇಸಿಗೆ ಮನೆಗೆ ಹೋಗಿದ್ದನು. ಅವನಲ್ಲಿ ಒಂದೇ ಒಂದು ಸಾರಿ ಊಟಮಾಡಿದ್ದನು; ಮತ್ತೊಂದು ಸಾರಿ ಸಂಜೆಯಲ್ಲಿ ಸ್ನೇಹಿತರಿಗೆ ಸತ್ಕಾರಕೂಟ ಏರ್ಪಡಿಸಿದ್ದನು. ಹಿಂದಿನ ವರ್ಷಗಳ ಅಭ್ಯಾಸದಂತೆ ಅವನು ಈ ವರ್ಷ ಒಂದು ರಾತ್ರಿಯನ್ನಾದರೂ ಅಲ್ಲಿ ಕಳೆಯಲಿಲ್ಲ.

ಪಂದ್ಯಾಟದ ದಿನದಂದು ಕರೆನಿನ್‌ನಿಗೆ ಸ್ವಲ್ಪವೂ ಬಿಡುವಿರಲಿಲ್ಲ. ಅಂದು ಪ್ರಾತಃಕಾಲದಲ್ಲಿಯೇ ದಿನದ ಕಾರ್ಯಕ್ರಮವನ್ನು ರೂಪಿಸಿಕೊಂಡನು; ಮುಂಚಿತವಾಗಿ ಊಟ ಮುಗಿಸಿ, ತನ್ನ ಹೆಂಡತಿ ತಂಗಿದ್ದ ಹಳ್ಳಿ ಮನೆಗೆ ಹೋಗಿ, ಅಲ್ಲಿಂದ ನೇರವಾಗಿ ಕ್ರೀಡಾಕ್ಷೇತ್ರಕ್ಕೆ ಹೋಗುವುದೆಂದು ನಿಶ್ಚಯಿಸಿಕೊಂಡನು. ಇಡೀ ಕಚೇರಿಯೇ ಪಂದ್ಯ ವೀಕ್ಷಣೆಗೆ ತೆರಳುತ್ತಿದ್ದುದರಿಂದ ಅವನ ಹಾಜರಿ ಅನಿವಾರ್ಯವಾಗಿತ್ತು. ತೋರ್ಕೆಗಾಗಿಯಾದರೂ ವಾರಕ್ಕೊಮ್ಮೆ ಅವಳನ್ನು ಭೇಟಿಮಾಡುವುದೆಂದವನು ನಿರ್ಧರಿಸಿಕೊಂಡಿದ್ದನು. ಮಿಗಿಲಾಗಿ ಪ್ರತಿ ತಿಂಗಳು ಹದಿನೈದರೊಳಗಾಗಿ ಅವಳ ಖರ್ಚುವೆಚ್ಚಗಳಿಗೆ ಹಣ ಸಲ್ಲಿಸುವುದು ಅವನ ಅಭ್ಯಾಸವಾಗಿತ್ತು.

ತನ್ನ ಆಲೋಚನೆಗಳ ಮೇಲೆ ಹಿಡಿತವಿಟ್ಟುಕೊಳ್ಳುವ ಸಂಯಮ ಅವನಿಗಿತ್ತು. ತನ್ನ ಮಡದಿಯ ಬಗ್ಗೆ ಇಷ್ಟೆಲ್ಲ ಆಲೋಚಿಸಿದರೂ, ಅವು ತೊಂಡಲೆಯದಂತೆ, ಚೆದರಿ ಹೋಗದಂತೆ ಎಚ್ಚರಿಕೆ ವಹಿಸುತ್ತಿದ್ದನು.

ಆ ದಿನ ಬೆಳಗ್ಗೆ ಕರೆನಿನ್‌ನಿಗೆ ಸ್ವಲ್ಪವೂ ಬಿಡುವಿರಲಿಲ್ಲ. ಪ್ರಖ್ಯಾತ ಪ್ರವಾಸಿಯೊಬ್ಬ ಚೀನಾವನ್ನು ಕುರಿತು ರಚಿಸಿದ್ದ ಪುಸ್ತಿಕೆಯೊಂದನ್ನು ಕೌಂಟೆಸ್ ಲಿಡಿಯಾ

ಇವಾನೊವ್ನ ಹಿಂದಿನ ಸಂಜೆ ಕಳಿಸಿಕೊಟ್ಟಿದ್ದಳು. ಆ ಪ್ರವಾಸಿ ಆ ಸಮಯದಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿದ್ದನು. ಹಲವು ಕಾರಣಗಳಿಂದಾಗಿ ಅವನು ಸ್ವಾರಸ್ಯಕರವೂ ಪ್ರಯೋಜನಕಾರಿಯೂ ಆದ ವ್ಯಕ್ತಿಯೆಂದೂ, ಆ ಪ್ರವಾಸಿಗೆ ಸಂದರ್ಶನ ನೀಡುವುದುಚಿತವೆಂದೂ ಚೀಟಿಯೊಂದನ್ನು ಬರೆದು, ಪುಸ್ತಿಕೆಯ ಜತೆಯಲ್ಲಿ ಕಳಿಸಿದ್ದಳು. ಸಮಯಾಭಾವದಿಂದಾಗಿ ಸಂಜೆ ಇಡೀ ಪುಸ್ತಿಕೆಯನ್ನೋದಿ ಮುಗಿಸಲಾಗಲಿಲ್ಲ; ಬೆಳಗಾಗ ಅದನ್ನು ಮುಗಿಸಿದನು. ಅನಂತರ ಅರ್ಜಿದಾರರು ಬರತೊಡಗಿದರು. ಅವರನ್ನು ನಿವಾರಿಸಿದನಂತರ, ವರದಿಗಳು, ಸಂದರ್ಶನಗಳು, ನೇಮಕಗಳು, ವಜಾವಣೆ, ಬಹುಮಾನ ಪಿಂಚಣಿ ಸಂಬಳಗಳ ಹಂಚಿಕೆ, ಪತ್ರವ್ಯವಹಾರಗಳು ಇದ್ದೇ ಇರುತ್ತಿದ್ದುವು. ನಿತ್ಯಗಟ್ಟಳೆಯ ವ್ಯವಹಾರಗಳೆಂದು ಕರೆನಿನ್ ಕರೆಯುತ್ತಿದ್ದ ಆ ಸಂಗತಿಗಳು ತುಂಬ ಸಮಯ ತೆಗೆದುಕೊಳ್ಳುತ್ತಿದ್ದುವು. ಅವುಗಳ ಜತೆಗೆ ಅವನ ವೈಯಕ್ತಿಕ ವ್ಯವಹಾರಗಳೂ ಇರುತ್ತಿದ್ದವು: ಅವನ ಆಸ್ತಿಪಾಸ್ತಿಗಳನ್ನು ನಿರ್ವಹಿಸುತ್ತಿದ್ದ ಪಾರುಪತ್ಯಗಾರನೂ ವೈದ್ಯನೂ ಬಂದು ಹೋಗುತ್ತಿದ್ದರು. ಅವನ ಪಾರುಪತ್ಯಗಾರ ಹೆಚ್ಚು ಸಮಯ ತೆಗೆದುಕೊಳ್ಳುತ್ತಿರಲಿಲ್ಲ. ಕರೆನಿನ್ ಕೇಳಿದಷ್ಟು ಹಣ ಕೊಟ್ಟನಂತರ ಅವನು ಅಷ್ಟೇನೂ ತೃಪ್ತಿಕರವಲ್ಲದ ಮನೆವಾರ್ತೆಯ ಬಗ್ಗೆ ವರದಿ ಸಲ್ಲಿಸುತ್ತಿದ್ದನು. ಆ ವರ್ಷ ಪ್ರವಾಸಕ್ಕೆ ಅಪಾರ ಹಣ ಖರ್ಚಾಗಿತ್ತು. ಅವನ ಜಮಾಖರ್ಚುಗಳ ಲೆಕ್ಕದಲ್ಲಿ ಸಾಕಷ್ಟು ಕೊರತೆಯಿತ್ತು. ವೈದ್ಯ ಪೀಟರ್ಸ್‌ಬರ್ಗ್‌ನಲ್ಲೆಲ್ಲ ಪ್ರಖ್ಯಾತಿಯಾಗಿದ್ದನು. ಅವನು ಕರೆನಿನ್‌ನ ಆಪ್ತಮಿತ್ರ. ಅವನು ತುಂಬ ಹೊತ್ತು ತೆಗೆದುಕೊಂಡನು. ಕರೆನಿನ್ ಆ ದಿನ ಅವನನ್ನು ನಿರೀಕ್ಷಿಸಿರಲಿಲ್ಲ; ಅವನ ಆಗಮನದಿಂದ ಕರೆನಿನ್‌ಗೆ ತುಂಬ ಆಶ್ಚರ್ಯವಾಯಿತು. ವೈದ್ಯ ತನ್ನ ಆರೋಗ್ಯದ ಬಗ್ಗೆ ಗಂಭೀರವಾದ ಪ್ರಶ್ನೆ ಹಾಕಿ, ತನ್ನ ಹೃದಯದ ಬಡಿತವನ್ನಾಲಿಸಿ, ಪಿತ್ತಕೋಶದ ಭಾಗವನ್ನು ತಟ್ಟಿದಾಗ ಅವನಿಗೆ ಮತ್ತಷ್ಟು ಸೋಜಿಗವಾಯಿತು. ಈ ವರ್ಷ ಕರೆನಿನ್‌ನ ಆರೋಗ್ಯ ಉತ್ತಮವಾಗಿಲ್ಲದ್ದರಿಂದ, ಅವನನ್ನು ಸಮರ್ಪಕವಾಗಿ ಪರೀಕ್ಷಿಸುವಂತೆ ಕೌಂಟೆಸ್ ಲಿಡಿಯಾ ವೈದ್ಯನಿಗೆ ಹೇಳಿದ್ದ ವಿಚಾರ ಕರೆನಿನ್‌ನಿಗೆ ಗೊತ್ತಾಗಿರಲಿಲ್ಲ.

'ನನಗೋಸ್ಕರವಾಗಿ ಪರೀಕ್ಷೆನಡಸಿ' ಎಂದು ಕೌಂಟೆಸ್ ಕೇಳಿಕೊಂಡಿದ್ದಳು.

'ರಷ್ಯಾದ ಸಲುವಾಗಿ ಆ ಕೆಲಸ ಮಾಡುತ್ತೇನೆ' ಎಂದು ವೈದ್ಯ ಉತ್ತರಿಸಿದ್ದನು.

'ಅಮೂಲ್ಯವ್ಯಕ್ತಿ!' ಎಂದು ಕೌಂಟೆಸ್ ನುಡಿದಿದ್ದಳು.

ಕರೆನಿನ್‌ನ ಆರೋಗ್ಯದ ಬಗ್ಗೆ ವೈದ್ಯನಿಗೆ ಸಮಾಧಾನವಿರಲಿಲ್ಲ. ಅವನ ಪಿತ್ತಕೋಶ ಊದಿಕೊಂಡಿತ್ತು; ಜೀರ್ಣಕಾರಕ ಶಕ್ತಿಗಳು ಉಡುಗಿದ್ದುವು; ಖನಿಜ ಜಲಗಳು ಪರಿಣಾಮಕಾರಿಯಾಗಿರಲಿಲ್ಲ. ಸಾಧ್ಯವಾದಷ್ಟು ಶಾರೀರಕ ವ್ಯಾಯಾಮ ಅಗತ್ಯವೆಂದು ವೈದ್ಯ ಸಲಹೆಮಾಡಿದನು; ಮಾನಸಿಕ ಶ್ರಮ ಕನಿಷ್ಠ ಮಿತಿಗಿಳಿಯಬೇಕೆಂದು ಸೂಚಿಸಿದನು; ಎಲ್ಲಕ್ಕಿಂತ ಮಿಗಿಲಾಗಿ ಮನಸ್ಸಿಗೆ ಚಿಂತೆ ಅಂಟಿಸಿಕೊಳ್ಳಬಾರದೆಂದು ಒತ್ತಾಯಪಡಿಸಿದನು; ಆದರೆ ಈ ಚಿಂತೆಯ ನಿರೋಧ ಶ್ವಾಸನಿರೋಧವಷ್ಟೇ ಕರೆನಿನ್‌ನಿಗೆ ಕಷ್ಟವಾಗಿತ್ತು. ಎಲ್ಲಿಯೋ ಏನೋ ತಪ್ಪಿದೆಯೆಂಬ ಹಾಗೂ ಅದನ್ನು ಸರಿಪಡಿಸಲಾಗದೆಂಬ ಅಹಿತಭಾವದಿಂದ ವೈದ್ಯ ಕರೆನಿನ್‌ನಿಂದ ಬೀಳ್ಕೊಂಡನು.

ವೈದ್ಯ ಹೊರಗೆ ಹೋಗುವಾಗ, ತನಗೆ ಪರಿಚಿತನೂ, ಕರೆನಿನ್‌ನ ಇಲಾಖೆಯ ಕಾರ್ಯದರ್ಶಿಯೂ ಆದ ಸ್ಲುದಿನ್‌ನನ್ನು ಮೊಗಸಾಲೆಯಲ್ಲಿ ದುರುಗೊಂಡನು. ಅವರು ವಿಶ್ವವಿದ್ಯಾಲಯದಲ್ಲಿ ಒಟ್ಟಿಗಿದ್ದವರಾದ್ದರಿಂದ ವೈದ್ಯನಿಗವನು ಚೆನ್ನಾಗಿ ಗೊತ್ತಿತ್ತು. ಇತ್ತೀಚೆಗವರ ಭೇಟಿ ಅಪರೂಪವಾಗಿದ್ದರೂ, ಅವರು ಪರಸ್ಪರವಾಗಿ ಗೌರವಿಸುತ್ತಿದ್ದರು. ಅವರು ಒಳ್ಳೆಯ ಗೆಳೆಯರಾಗಿದ್ದರು. ಆ ಕಾರಣಕ್ಕಾಗಿ ವೈದ್ಯ ತನ್ನ ರೋಗಿಯ ಬಗ್ಗೆ ಹಿಂದೆ ಮುಂದೆ ನೋಡದೆ ಪ್ರಾಮಾಣಿಕ ಅಭಿಪ್ರಾಯವನ್ನು ಅವನೊಡನೆ ವ್ಯಕ್ತ ಪಡಿಸಿದನು.

'ಅವರನ್ನು ಪರೀಕ್ಷಿಸಿದ್ದರಿಂದ ನನಗೆ ತುಂಬ ಸಂತೋಷವಾಯಿತು.' ಎಂದು ಸ್ಲುದಿನ್ ನುಡಿದನು. 'ಅವರಿಗೆ ಆರೋಗ್ಯ ವಿದ್ದಂತಿಲ್ಲ. ನನಗನ್ನಿಸುತ್ತದೆ....ಅದಿರಲಿ, ಅವರ ಆರೋಗ್ಯದ ಬಗ್ಗೆ ನಿನಗೇನನಿಸಿದೆ.'

'ಆ ವಿಷಯವನ್ನೆ ನಿನಗೆ ಹೇಳಬೇಕೆಂದಿದ್ದೇನೆ' ಎಂದು ವೈದ್ಯ ನುಡಿಯುತ್ತ, ಗಾಡಿಯನ್ನು ತರುವಂತೆ ಸ್ಲುದಿನ್‌ನ ತಲೆಯ ಮೇಲೆ ಚಾಲಕನಿಗೆ ಕಾಣಿಸುವಂತೆ ಸನ್ನೆ ಮಾಡಿದನು. 'ಅದೆಲ್ಲ ಇಷ್ಟೆ' ಎಂದವನು ಸೊಲ್ಲಿಸುತ್ತ, ತನ್ನ ಬಿಳಿಗೈಗಳಲ್ಲಿ ಮರಿದೊಗಲಿನ ಗವಸುಗಳನ್ನು ತೆಗೆದುಕೊಂಡು, ಬೆರಳೊಂದನ್ನು ಹೊರಗೆಳೆದನು. 'ತಂತಿ ಸಡಿಲವಾಗಿದ್ದಾಗ ಕಿತ್ತುಹೋಗುವುದಿಲ್ಲ; ಆದರದನ್ನು ಮಿತಿಮೀರಿ ಎಳೆದು ಬಿಗಿಪಡಿಸಿ, ಅದರ ಮೇಲೆ ಬೆರಳಿನ ಭಾರವನ್ನು ಹೇರಿದರೆ, ಅದು ಲಟ್ಟನೆ ಕಿತ್ತುಹೋಗು ತ್ತದೆ. ಅವನ ಕಾರ್ಯತತ್ಪರತೆ ಹಾಗೂ ಕರ್ತವ್ಯಪ್ರಜ್ಞೆಯಿಂದಾಗಿ ಅವನ ನರಗಳು ತುಂಬ ಬಿಗಿಗೊಂಡಿವೆ. ಜತೆಗೆ ಹೊರಗಿನ ಒತ್ತಡವನ್ನೂ ಅವನು ಹೊರಬೇಕಾಗಿದೆ; ಅದು ನಿಜಕ್ಕೂ ಅಸಹನೀಯವಾದ ಒತ್ತಡ' ಎಂದು ವೈದ್ಯ ಅರ್ಥವತ್ತಾಗಿ ಹುಬ್ಬೇರಿಸಿ, ಮಾತು ಮುಗಿಸಿದನು. 'ನೀನು ಪಂದ್ಯಾಟ ನೋಡಲು ಹೋಗುತ್ತೀಯೇನು ?' ಎಂದವನು ಮೆಟ್ಟಲಿಳಿಯುತ್ತಿದ್ದಂತೆ ಪ್ರಶ್ನಿಸಿದನು. 'ಓ, ಹೌದು. ಖಂಡಿತ ಸಾಧ್ಯ.... ಒಂದು ದಿನದಲ್ಲಂತು ಸಾಧ್ಯವಿಲ್ಲ....' ಎಂಬುದು ಸ್ಲುದಿನ್ ಕೇಳಿದ, ಆದರೆ ಅವನಿಗೆ ಸರಿಯಾಗಿ ಕೇಳಿಸದ ಪ್ರಶ್ನೆಗೆ ನೀಡಿದ ಉತ್ತರವಾಗಿತ್ತು.

ಕರೆನಿನ್‌ನ ಬಹು ವೇಳೆಯನ್ನಪಹರಿಸಿ ವೈದ್ಯ ಬೀಳ್ಕೊಂಡನಂತರ, ಸುಪ್ರಸಿದ್ಧ ಪ್ರವಾಸಿ ಬಂದನು. ಅದೆತಾನೆ ಓದಿ ಮುಗಿಸಿದ ಪುಸ್ತಿಕೆಯ ಪ್ರಯೋಜನವನ್ನು ಪಡೆದು, ಅದೇ ವಿಷಯವನ್ನು ಕುರಿತ ಪೂರ್ವಾನುಭವದ ಸಹಾಯದಿಂದ ಕರೆನಿನ್ ಅವನೊಡನೆ ಚರ್ಚೆ ನಡಸಿದನು. ಕರೆನಿನ್ ಜ್ಞಾನಗಹನತೆಯಿಂದ ಹಾಗೂ ಉಜ್ವಲಾನುಭವ ವೈಶಾಲ್ಯದಿಂದ ಪ್ರವಾಸಿಯನ್ನು ಬೆರಗುಗೊಳಿಸಿದನು.

ಅವನು ಪ್ರವಾಸಿಯೊಡನಿದ್ದಾಗಲೇ, ಸೇವಕ ಸ್ಥಳೀಯ ಶ್ರೀಮಂತನೊಬ್ಬನ ಅಧಿಕಾರಿಯ ಆಗಮನವಾರ್ತೆಯನ್ನು ತಿಳಿಸಿದನು. ಸೆಂಟ್‌ಪೀಟರ್ಸ್‌ಬರ್ಗ್‌ಗೆ ಬಂದಿದ್ದ ಅವನನ್ನು ಕರೆನಿನ್ ಸಂದರ್ಶಿಸಬೇಕಾಗಿತ್ತು. ಅಧಿಕಾರಿಯ ನಿರ್ಗಮನಾನಂತರ ಅವನು ತನ್ನ ಕಾರ್ಯದರ್ಶಿಯೊಡನೆ ದಿನನಿತ್ಯದ ವ್ಯವಹಾರಗಳನ್ನು ಪೂರೈಸಬೇಕಾಗಿತ್ತು. ಅತ್ಯಂತ ಗಂಭೀರವೂ ಬಹು ಮುಖ್ಯವೂ ಆದ ವಿಷಯದ ಬಗ್ಗೆ ಸಮಾಲೋಚನೆ ನಡಸುವ ಸಲುವಾಗಿ ಅತ್ಯುನ್ನತ ಸ್ಥಾನದಲ್ಲಿದ್ದ ವ್ಯಕ್ತಿಯನ್ನು ಸಂಧಿಸುವ ಕೆಲಸವೂ

ಉಳಿದಿತ್ತು. ಐದು ಗಂಟೆಯ ಹೊತ್ತಿಗೆ ಅವನು ಹೇಗೋ ಮನೆ ತಲುಪಿದನು. ಅದು ಅವನಿಗೆ ಊಟದ ಸಮಯ. ಅವನು ತನ್ನ ಕಾರ್ಯದರ್ಶಿಯೊಡನೆ ಊಟ ಮುಗಿಸಿ, ತನ್ನ ಜತೆಯಲ್ಲಿ ಹಳ್ಳಿಯ ಮನೆಗೂ ಪಂದ್ಯಾಟಕ್ಕೂ ಬರುವಂತೆ ಅವನನ್ನು ಕರೆದನು.

ತನಗರಿವಿಲ್ಲದಂತೆಯೆ ಕರೆನಿನ್ ಇತ್ತೀಚೆಗೆ ತನ್ನ ಮಡದಿಯನ್ನು ಭೇಟಿ ಮಾಡು ವಾಗಲೆಲ್ಲ ಮೂರನೆಯ ವ್ಯಕ್ತಿಯನ್ನು ತನ್ನೊಡನೆ ಕರೆದೊಯ್ಯಲು ಅವಕಾಶ ಕಲ್ಪಿಸಿ ಕೊಳ್ಳುತ್ತಿದ್ದನು.

೧೭

ಅನ್ನಾ ಮಹಡಿಯ ಮೇಲಿದ್ದಳು ; ಕನ್ನಡಿಯ ಮುಂದೆ ನಿಂತಿದ್ದಳು ; ಅನುಷ್ಕಳ ನೆರವಿನೊಡನೆ ತನ್ನ ಮೇಲಂಗಿಗೆ ಕೊನೆಯ ಕಮಾನುಪಟ್ಟಿಗಳನ್ನು ಸಿಕ್ಕಿಸುತ್ತಿದ್ದಳು. ಅಷ್ಟರಲ್ಲಿ ದ್ವಾರಪ್ರದೇಶದ ಸುರುಜುಗಲ್ಲಿನ ಹಾದಿಯಲ್ಲಿ ಚಕ್ರಗಳ ಸದ್ದು ಕೇಳಿಸಿತು.

'ಬೆಸ್ಸಿ ಇಷ್ಟು ಮುಂಚೆ ಬರಲಾರಳು' ಎಂದವಳು ಆಲೋಚಿಸಿದಳು. ಕಿಟಕಿಯ ಹೊರಗೆ ಕಣ್ಣು ಹಾಯಿಸಿದಳು. ಮೊದಲು ಕಣ್ಣಿಗೆ ಬಿದ್ದದ್ದು ಗಾಡಿ. ತದನಂತರ ತನ್ನ ಗಂಡನ ಕಪ್ಪುಟೋಪಿ ಮತ್ತು ಸುಪರಿಚಿತ ಕರ್ಣಗಳು ಹೊರಗಿಣುಕಿದುದನ್ನವಳು ಕಂಡಳು.

'ಎಂಥ ದುರ್ದೈವ! ರಾತ್ರಿ ಅವರಿಲ್ಲಿಯೇ ತಂಗಲು ನಿಜವಾಗಿಯೂ ನಿರ್ಧರಿಸಿ ದ್ದಾರೆಯೆ?' ಎಂದವಳು ತನ್ನಷ್ಟಕ್ಕೆ ತಾನಂದುಕೊಂಡಳು. ಪರಿಣಾಮಗಳ ಪ್ರತೀಕ್ಷೆ ಬಹು ಭೀಕರವಾಗಿತ್ತು, ಕಂಪಾಯಮಾನವಾಗಿತ್ತು. ಕ್ಷಣಮಾತ್ರವೂ ಅನುಮಾನಿಸದೆ, ಅವಳು ಪ್ರದೀಪ್ತವೂ ಉಲ್ಲಾಸಮಾನವೂ ಆದ ಮುಖಭಾವವನ್ನು ಧರಿಸಿ, ಅವನ ಸ್ವಾಗತಕ್ಕಣಿಯಾಗಿ ಹೋದಳು. ಇತ್ತೀಚೆಗೆ ತನ್ನ ದ್ವಿತೀಯ ಪ್ರವೃತ್ತಿಯೆಂಬಂತೆ ತಲೆಯೆತ್ತಿಕೊಂಡಿದ್ದ ವಂಚನೆ ಮತ್ತು ಮಿಥ್ಯೆಗಳ ಪೈಶಾಚಿಕ ಶಕ್ತಿಗೆ ವಶವಾಗಿದ್ದ ಅರಿವಿನಿಂದ, ಅವಳದಕ್ಕೆ ಶರಣಾಗತಳಾಗಿದ್ದಳು. ತಾನೇನು ಹೇಳುತ್ತಿದ್ದೇನೆಂಬುದರ ಪರಿವೆಯಿಲ್ಲದೆ ಅವಳು ಮಾತಾಡತೊಡಗಿದಳು.

'ನೀವು ಬಂದದ್ದೇ ಒಂದು ಆನಂದ!' ಎಂದವಳು ತನ್ನ ಗಂಡನ ಕಡೆಗೆ ಕೈಚಾಚಿ, ನಿಜಕ್ಕೂ ಕುಟುಂಬದ ಭಾಗವಾಗಿದ್ದ ಸ್ಲುದಿನ್‌ನನ್ನು ಮುಗುಳು ನಗೆಯಿಂದ ಸ್ವಾಗತಿ ಸಿದಳು. 'ನೀವು ರಾತ್ರಿ ಇಲ್ಲಿಯೇ ತಂಗುತ್ತೀರಲ್ಲವೆ?' ಎಂಬುದು ಅವಳ ವಂಚನೆಯ ಬುದ್ಧಿ ಮೊದಲು ಪ್ರೇರಿಸಿದ ಪ್ರಶ್ನೆ. 'ನಾವೀಗ ಎಲ್ಲರೂ ಒಟ್ಟಿಗೆ ಹೋಗೋಣ. ಆದರೆ ಬೆಸ್ಸಿಗೆ ಮಾತುಕೊಟ್ಟಿದ್ದೇನಲ್ಲವೆಂಬುದೊಂದೇ ಚಿಂತೆ. ನನಗೋಸ್ಕರ ಅವಳು ಬರುತ್ತಿ ದ್ದಾಳೆ.'

ಬೆಸ್ಸಿಯ ಹೆಸರು ಕಿವಿಯ ಮೇಲೆ ಬೀಳುತ್ತಿದ್ದಂತೆ ಕರೆನಿನ್ ಬೆಚ್ಚಿಬಿದ್ದನು.

'ಓ, ಅಗಲಿಸಲಾಗದ ವ್ಯಕ್ತಿಗಳನ್ನು ಕನಸಿನಲ್ಲಿಯೂ ಅಗಲಿಸಲಾರೆ' ಎಂದವನು ರೂಢಿಯ ಅಣಕದ ಧ್ವನಿಯಲ್ಲಿ ನುಡಿದನು. 'ಮಿಖೇಲ್‌ವಸಿಲಿವಿಚ್ ಮತ್ತು ನಾನು ಒಟ್ಟಿಗೆ ಹೋಗುತ್ತೇವೆ. ನಾನು ತಿರುಗಾಡಬೇಕೆಂದು ವೈದ್ಯ ಸೂಚಿಸಿದ್ದಾರೆ. ರಸ್ತೆ ಯುದ್ದಕ್ಕೂ ನಡೆದುಕೊಂಡು ಹೋಗುತ್ತೇನೆ. ಚಿಲುಮೆಗಳ ಬಳಿ ಮತ್ತೆ ಅಡ್ಡಾಡು ತ್ತಿರುವಂತೆ ಕಲ್ಪನೆಯಲ್ಲಿ ಅನುಭವಿಸುತ್ತೇನೆ.'

(ಮುಂದುವರಿಯುವುದು)

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು...

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.